ಪ್ರಕಟಣೆಯ ೩೪ ನೆಯ ವರ್ಷ : ೧೯೯೯

೩.೨೧

ಸಂಕ್ರಮಣ

ಗಣೇಶ್ ಕಿರಾಡಿ

ರಹಮತ ತರೀಕೆರೆ ಅವರ "ಕರ್ನಾಟಕದ ಸೂಫಿಗಳು"

ಡಿ.ಬಿ.ರಾಮಚಂದ್ರಾಚಾರ್

ವರಾಹ

ಶೈಲಜ ಇಂ. ಹಿರೇಮಠ

ಮಂತ್ರವಿದ್ಯೆ ಮತ್ತು ಸಂಸ್ಕೃತಿ

ಎಂ.ಪ್ರಭಾಕರ ಜೋಶಿ

ಇಂಗ್ಲಿಷ್ - ದೇಶಿ ಮತ್ತು ಸಂಸ್ಕೃತ

ಎಸ್.ವಿ.ಪ್ರಭಾವತಿ

ಮಹಿಳೆ ಮತ್ತು ಮಧ್ಯಕಾಲೀನ ಸಾಹಿತ್ಯ

ಪ್ರಭುಗೌಡ ಪಾಟೀಲ, ಮಾಧವಿ ಭಂಡಾರಿ, ಅನಿತ ಕೊಟ್ರೇಶ್, ವಿಷ್ಣುನಾಯ್ಕ, ಮೀನಾಸದಾಶಿವ, ಜಿ.ಕೆ.ರವೀಂದ್ರಕುಮಾರ, ಹೆಚ್.ವಿ.ವೆಂಕಟಸುಬ್ಬಯ್ಯ, ಡಿ.ಬಿ.ರಜಿಯಾ, ಗುಂಡಣ್ಣ ಕಲಬುರ್ಗಿ ಇವರ ಕವನಗಳು.

ಚಂಪಾಕಾಲಂ

ಮೀಡಿಯಂ ಪಿಡುಗು : ಹಿರೆಕ್ಕನ ಚಾಳಿ

ಸಂಪುಟ : ೩೪
ಸಂಚಿಕೆ : ೫

ಮೇ
೧೯೯೯

ಸಂಕ್ರಮಣ
ಸಾಹಿತ್ಯಿಕ ಮಾಸಿಕ

ಸಂಪಾದಕಿ
ನೀಲಾ ಪಾಟೀಲ
ಸಲಹಾ ಸಂಪಾದಕ
ಚಂದ್ರಶೇಖರ ಪಾಟೀಲ

ಈ ಸಂಚಿಕೆಯಲ್ಲಿ

ಮೀಡಿಯಂ ಪಿಡುಗು : ಹಿರೆಕ್ಕನ ಚಾಳಿ	ಚಂದ್ರಶೇಖರ ಪಾಟೀಲ	೧
ರಹಮತ ತರೀಕೆರೆ ಅವರ "ಕರ್ನಾಟಕದ ಸೂಫಿಗಳು"	ಗಣೇಶ್ ಕಿರಾಡಿ	೯
ವರಾಹ	ಡಿ.ಬಿ.ರಾಮಚಂದ್ರಾಚಾರ್	೧೭
ಮಂತ್ರವಿದ್ಯೆ ಮತ್ತು ಸಂಸ್ಕೃತಿ	ಶೈಲಜ ಇಂ. ಹಿರೇಮಠ	೨೭
ಇಂಗ್ಲಿಷ್ - ದೇಶಿ ಮತ್ತು ಸಂಸ್ಕೃತ	ಎಂ. ಪ್ರಭಾಕರ ಜೋಶಿ	೩೩
ಮಹಿಳೆ ಮತ್ತು ಮಧ್ಯಕಾಲೀನ ಸಾಹಿತ್ಯ	ಎಸ್.ವಿ.ಪ್ರಭಾವತಿ	೩೭
ಕಾವ್ಯ		
ಬೇರು	ಪ್ರಭುಗೌಡ ಪಾಟೀಲ	೨೬
ಪ್ರಮೀಳೆಯರು ರಾಜ್ಯವಾಳುವುದೆಂತು	ಮಾಧವಿ ಭಂಡಾರಿ	೩೬
ಹೀಗೊಂದು ವಿನಂತಿ	ಅನಿತಾ ಕೊಟ್ರೇಶ್	೪೭
ಮೂರು ಕವನಗಳು	ವಿಷ್ಣುನಾಯ್ಕ	೪೮
ಐದು ಕವನಗಳು	ಮೀನಾ ಸದಾಶಿವ	೫೨
ಮಹಾಮೌನ	ಜಿ.ಕೆ.ರವೀಂದ್ರಕುಮಾರ	೫೬
ಸಾಲು ಮರ	ಹೆಚ್.ವಿ.ವೆಂಕಟಸುಬ್ಬಯ್ಯ	೫೯
ಸೊನ್ನೆ	ಡಿ.ಬಿ.ರಜಿಯಾ	೬೦
ಭಾರತಿ ಮತ್ತು ಮಕ್ಕಳು	ಗುಂಡಣ್ಣ ಕಲಬುರ್ಗಿ	೬೧

ಸಂಕ್ರಮಣ ಪ್ರಕಾಶನ
ನಂ. ೧೮೯೪/೧, ೩೧ ನೇ ಕ್ರಾಸ್, ೨ ನೇ ಸ್ಟೇಜ್, ಬನಶಂಕರಿ
ಬೆಂಗಳೂರು ೫೬೦ ೦೭೦ ಫೋನು : ೦೮೦-೬೭೧೦೫೨೩
ಸಂಕ್ರಮಣದ ವಾರ್ಷಿಕ ಚಂದಾ : ಒಂದು ನೂರು ರೂ.

ಮೀಡಿಯಂ ಪಿಡುಗು: ಹಿರೆಕ್ಕನ ಚಾಳಿ

ಚಂದ್ರಶೇಖರ ಪಾಟೀಲ

ನನ್ನ ಬಂಧು ನಟರಾಜ ಗೌರಿಕೆರೆಮಠ -(ಧಾರವಾಡದಲ್ಲಿರುವ ಅವರ ಚಂದನ ಮುದ್ರಣದಲ್ಲಿಯೇ 'ಸಂಕ್ರಮಣ' ಪ್ರಿಂಟಾಗಿ ನಿಮ್ಮೆಲ್ಲರ ಕೈ ಸೇರುತ್ತಿರುವುದು.) ಒಮ್ಮೆ ಅದು ಇದು ಮಾತಾಡುತ್ತ ಗೌರಿಯ ಶಿಕ್ಷಣದ ಬಗ್ಗೆ ಹೇಳುತ್ತಿದ್ದರು.

ಗೌರಿ ನಟರಾಜರ ಒಬ್ಬಳೇ ಮಗಳು. ಯಾವುದನ್ನೂ ಹೆಚ್ಚು ಸೀರಿಯಸ್ ತೆಗೆದುಕೊಳ್ಳದೇ, ಎಷ್ಟು ಬೇಕೋ ಅಷ್ಟು ಸ್ಟಡಿ ಮಾಡುತ್ತಾ, ಟೀವಿ ನೋಡುತ್ತಾ, ಸೂಟಿ ಬಂದಾಗ ಮುಂಜಾನೆ ಹತ್ತರ ವರೆಗೆ ನಿದ್ದೆ ಹೊಡೆಯುತ್ತಾ, ಹರಟೆ ಹೊಡೆಯುತ್ತಾ, ಕುಲು ಕುಲು ನಗುತ್ತಾ ಕಾಡು ಹೂವಿನಂತೆ, ಅಥವಾ ಅಷ್ಟೇ ಸಹಜವಾಗಿ ಬೆಳೆಯುವ ಕುಂಡಲೆಯ ಗಿಡದಂತೆ, ಬೆಳೆಯುತ್ತಿರುವವಳು ಗೌರಿ. ಮನೆಯ ಸಮೀಪದ ಒಂದು ಒಳ್ಳೆಯ ಶಾಲೆಯಲ್ಲಿ ಶಿಕ್ಷಣ. ಕನ್ನಡ ಮಾಧ್ಯಮ. ರ‍್ಯಾಂಕು - ಪೀಂಕುಗಳ ಬಗ್ಗೆ ತಲೆಗೆ ಹಚ್ಚಿಕೊಳ್ಳದಿದ್ದರೂ ಎಲ್ಲ ವಿಷಯಗಳಲ್ಲಿ ಅರವತ್ತೋ ಎಪ್ಪತ್ತೋ ಅಂಕ ಗಳಿಕೆ.

ಸಮಸ್ಯೆ ಸುರುವಾದದ್ದು ಗೌರಿ ನಾಲ್ಕನೇ ಇಯತ್ತೆ ಪಾಸಾದನಂತರ. ಗೌರಿ 'ಜಾಣ' ವಿದ್ಯಾರ್ಥಿನಿಯರಲ್ಲಿ ಒಬ್ಬಳಾಗಿದ್ದರಿಂದ ಅವಳನ್ನು ಕೆಲವೇ ಕೆಲವರಲ್ಲಿ ಒಬ್ಬಳನ್ನಾಗಿ 'ಆಯ್ಕೆ' ಮಾಡಿ ಐದನೇ ತರಗತಿಯಿಂದ ಅದೇ ಶಾಲೆಯಲ್ಲಿ ಸಮಾನಾಂತರದಲ್ಲಿ ನಡೆಯುತ್ತಿದ್ದ ಇಂಗ್ಲಿಷ್ ಮೀಡಿಯಂಗೆ ಹಾಕಿಕೊಳ್ಳುವುದಾಗಿ ಹೇಳಿದರು ಶಾಲೆಯ ಹೆಡ್ ಮ್ಯಾಡಂ ಅವರು. ಪಾಲಕರಿಗೆ ಸ್ವಲ್ಪ ಆತಂಕದ ವಿಷಯವೇ. ಈ ಬಗ್ಗೆ ಗೌರಿಯ 'ಅಭಿಪ್ರಾಯ' ಕೇಳಿದರೋ ಇಲ್ಲವೋ ತಿಳಿಯದು. ಆದರೆ ಶಾಲೆಗೆ ಒಳ್ಳೇ ಶಾಲೆ ಎಂಬ ಹೆಸರಿದೆ. ಕ್ರಿಶ್ಚನ್ ಸಂಸ್ಥೆಯಾದ್ದರಿಂದ ಕಲಿಕೆಯ ಕ್ವಾಲಿಟಿಯ ಬಗ್ಗೆ ಚಿಂತಿಸಬೇಕಾಗಿಲ್ಲ. ಗೌರಿ ಇಂಗ್ಲಿಷ್ ಪಿಕಪ್ ಮಾಡಿಕೊಂಡಾಳು ಎಂಬ ನಿರೀಕ್ಷೆಯಿಂದ ಆ ಮೀಡಿಯಂಗೆ ಹಾಕಲಾಯಿತು.

ಮುಂದೆ ೨ - ೩ ತಿಂಗಳ ನಂತರ ನಟರಾಜ ಮತ್ತು ಜಯಶ್ರೀ ಇಬ್ಬರ ದನಿಯಲ್ಲೂ ಕಾತರ

ಮೂಡಿತ್ತು. ಕಾರಣ: ಈ ಮೊದಲು ಎಲ್ಲ ವಿಷಯಗಳಲ್ಲಿ ತೃಪ್ತಿಕರ ಎನ್ನಬಹುದಾದ ರೀತಿಯಲ್ಲಿ ಅಂಕ ಗಳಿಸುತ್ತಿದ್ದ ಮಗಳು ಈಗ ಅದೇ ವಿಷಯಗಳಲ್ಲಿ ಫೇಲ್ ಆಗುತ್ತಿದ್ದಾಳೆ! ಅಲ್ಲದೆ ಆಗೀಗ ದೈಹಿಕ ಅನಾರೋಗ್ಯ, ಜಡ್ಡು, ಜಾಪತ್ರಿ. ಏನು ಮಾಡೋಣ ಅಂದರು ನಟರಾಜ. ಇಂಥ ಅನೇಕ ಕೇಸುಗಳನ್ನು ಬಲ್ಲ ನಾನು, ಈಗಿಂದೀಗಲೇ ಗೌರಿಯನ್ನು ಕನ್ನಡ ಮೀಡಿಯಮ್ಮಿಗೆ ಹಾಕಿರಿ ಅಂತ 'ಉಚಿತ' ಸಲಹೆ ಕೊಟ್ಟೆ. ಏನು ಮಾಡಿದರೋ ಗೊತ್ತಿಲ್ಲ.

ಮೊನ್ನೆ ಧಾರವಾಡಕ್ಕೆ ಹೋದಾಗ ಗೌರಿ ಐದನೇ ಇಯತ್ತೆ ಪಾಸಾಗಿ ಆರಕ್ಕೆ ಬಂದಿದ್ದಳು. ಯಾವ ಮೀಡಿಯಂ, ಯಾವ ವಿಷಯದಲ್ಲಿ ಎಷ್ಟು ಸ್ಕೋರು ಇತ್ಯಾದಿ ಏನೂ ಕೇಳಲು ಹೋಗಲಿಲ್ಲ. ಅವಳೂ ಹೇಳಲಿಲ್ಲ.

*

ಮೇಲಿನ ಪ್ರಸಂಗ ನಾನು ವಿವರಿಸಿದ್ದು, ಕನ್ನಡ ಮಾಧ್ಯಮ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಇಂಗ್ಲಿಷ್ ಮಾಧ್ಯಮಕ್ಕಿಂತ ಒಳ್ಳೆಯದು ಎಂಬ ನನ್ನ ವಾದಕ್ಕೆ ಪೂರಕವಾಗಿ ಅಂತ ಅಲ್ಲ. ಇಂದು ಮೀಡಿಯಂ ಎಂಬುದು ಕೇವಲ ಶೈಕ್ಷಣಿಕ ಸಮಸ್ಯೆಯಾಗಿ ಉಳಿಯದೆ ಮಾನಸಿಕ ಸ್ಥಿತಿಯ, ಕೌಟುಬಿಂಕ ವಾತಾವರಣದ ಹಾಗೂ ಸಮುದಾಯದ ಸೌಖ್ಯದ ಸಮಸ್ಯೆಯಾಗಿದ್ದರೂ ಅದರ ಬಗ್ಗೆ ನಾವು ಗಂಭೀರವಾಗಿ ಯೋಚನೆ ಮಾಡುತ್ತಿಲ್ಲವಲ್ಲ- ಇದು ನನ್ನ ಕಳವಳ.

ಎಷ್ಟೋ ವರ್ಷದ ಹಿಂದೆ, ಯಾವಾಗಲೋ ಎಲ್ಲಿಂದಲೋ ಎಲ್ಲಿಗೋ ಟ್ರೇನಿನಲ್ಲಿ ಹೊರಟಿದ್ದೆ. ಸೆಕೆಂಡ್ ಕ್ಲಾಸ್ ಬೋಗಿ. ಎದುರಿನ ಸೀಟಿನಲ್ಲಿ ತಾಯಿ ಮತ್ತು ಮಗ. ನೋಡಿದರೇ ಗೊತ್ತಾಗಬೇಕು ಸುಸಂಸ್ಕೃತ ಹಿನ್ನೆಲೆ. ಮಗ ಕಿಡಕಿಯಲ್ಲಿ ಹಣಿಕೆ ಹಾಕಿ ಅದೇನು ಅಮ್ಮಾ ಅದೇನು ಅಮ್ಮಾ ಅಂತ ಕೇಳುತ್ತಿದ್ದಾನೆ. ತಾಯಿ ಗಂಭೀರವದನೆ. (ಸೆಕೆಂಡ್ ಕ್ಲಾಸ್‌ನಲ್ಲಿ ಕುಂತವರು ಅಷ್ಟುಯಾಕೆ ಮೈ - ಮುಖ ಬಿಗಿ ಹಿಡಿಯಬೇಕೋ ನನಗೆ ಅರ್ಥವಾಗಲಿಲ್ಲ) ಮಗ ಸಹಜವಾಗಿ ಕನ್ನಡದಲ್ಲಿ ಪ್ರಶ್ನೆ ಕೇಳಿದಾಗೆಲ್ಲ ತಾಯಿ ತನ್ನ ಸ್ಟೈಲಿಶ್ ಆದ ಇಂಗ್ಲಿಷಿನಲ್ಲಿ ಅವನಿಗೆ ದಬಾಯಿಸುತ್ತ, ಬುದ್ಧಿ ಹೇಳುತ್ತಿದ್ದಳು. ಮಗನಿಗೆ ಇಂಗ್ಲಿಷ್ ತಿಳಿಯುತ್ತದೆ, ಆದರೆ ಕನ್ನಡದಲ್ಲಿ ಮಾತು. ತಾಯಿ ಕೂಡ ಕನ್ನಡಾಂಬೆಯೇ ಆದರೆ ಮಾತೆಲ್ಲ ಇಂಗ್ಲಿಷ್.

ಇಂಥ ಪ್ರಸಂಗಗಳು ನಡೆಯುತ್ತಿರುವಾಗೆಲ್ಲ ನಾನು ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತೇನೆ- ಎದುರಿಗಿದ್ದವರ ಗಮನಕ್ಕೆ ಬಾರದ ಹಾಗೆ. ಆ ತಾಯಿಯನ್ನು ಕೇಳಬೇಕೆಂದುಕೊಂಡು ಅನೇಕ ಪ್ರಶ್ನೆಗಳನ್ನು ಮನಸ್ಸಿನಲ್ಲೇ ಕಂಪೋಜ್ ಮಾಡುತ್ತಿದ್ದೆ. ಕನ್ನಡದಲ್ಲಿ ಕೇಳಲೋ ಇಂಗ್ಲಿಷ್‌ನಲ್ಲಿ ಕೇಳಲೋ ಎಂಬ ಹ್ಯಾಮ್ಲೆಟ್ - ದ್ವಂದ್ವ ನನಗೆ. ಕನ್ನಡದಲ್ಲಿ ಏನಾದರೂ ಕೇಳಿದರೆ ಅವಳು 'ಯೂ ಶಟಪ್' ಅಂದು ಬಿಟ್ಟರೆ ? ಹಾಗೆ ಅನ್ನದಿದ್ದರೂ ಕಣ್ಣಿನ ನೋಟದಲ್ಲಿ ತುಟಿಯ ಬಿಗಿತದಲ್ಲಿ ಅಂಥದೇ ಮಾತನ್ನು ಮೌನದಲ್ಲಿ ಸೂಚಿಸಿದರೆ ? ಇಷ್ಟೆಲ್ಲ ಗೊಂದಲದಲ್ಲಿ ನಾನು ಮುಳುಗಿದಾಗ ಮಗನ ಕನ್ನಡ ಹಾಗೂ ತಾಯಿಯ ಇಂಗ್ಲಿಷ್ ಜುಗಲ್‌ಬಂದಿ ನಡೆದೇ

ಇತ್ತು. ಯಾವುದೋ ಸ್ಟೇಶನ್ನಿನಲ್ಲಿ ಇಳಿದರು. ಆ ಪ್ರಸಂಗ ನನ್ನೊಳಗೆ ಇಂಗಿ ಇಂಗಿ ನನ್ನ ಅಗಾಧ ಅಂತರ್ಜಲದ ನಿಧಿಯಲ್ಲಿ ಒಂದು ಬಿಂದುವಾಗಿ ಸೇರಿ ಹೋಯಿತು.

*

ಇದಕ್ಕೆ ಹೊಂದಿಕೊಂಡೇ ಇನ್ನೊಂದು ಪ್ರಸಂಗದ ನೆನಪು. ನೆನಪು ಅಂದರೆ ಅನೇಕ ವರ್ಷಗಳ ಹಿಂದಿನದೇ ಅಲ್ಲವೇ?.. ಮಗನನ್ನೋ ಮಗಳನ್ನೋ ಶಾಲೆಗೆ ಬಿಡಲು ಹೋಗಿದ್ದೆ. ಅದೇ ಶಾಲೆ. ಈಗ ಗೌರಿ ಕಲಿಯುತ್ತಿರುವುದು. ಪರಿಚಿತರೊಬ್ಬರು ಮಗನೊಂದಿಗೆ ಬಂದಿದ್ದರು. ಶಾಲೆಯ ಕನ್ನಡ ಮಾಧ್ಯಮಕ್ಕೆ ಅವನನ್ನು ಸೇರಿಸಬೇಕಿತ್ತು.

'ನೋಡ್ರಿ ಸಾಹೇಬ್ರ. ನನ್ನ ಹೇಣ್ತಿ ಕೂಡ ಜಗಳಾಡಿ ಈ ಹುಡಗನ್ನ ಇಲ್ಲಿಗೆ ಕರಕಂಡು ಬಂದನಿs ನೋಡ್ರಿ' ಅಂದರವರು. ಇಂಥ ಮಾತನ್ನು ಅನೇಕ ಬಾಯಿಗಳಿಂದ ಕೇಳಿದ್ದ ನನಗೆ ಆಶ್ಚರ್ಯವಾಗಲಿಲ್ಲ. ಪಾನಗೋಷ್ಠಿಗಳಲ್ಲಿ ನನ್ನ ಅನೇಕ ಸ್ನೇಹಿತರು ಈ ಬಗೆಯ ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಮತ್ತೆ ಮತ್ತೆ ಅವರು ಬೊಟ್ಟು ಮಾಡಿ ತೋರಿಸುವುದು ಮನೆಯ ಹೆಣ್ಣುಮಕ್ಕಳನ್ನೇ.

ಮನೆಯೆ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು. ಇಂಥ ಜನನಿಯೇ ಇಂದು ಕನ್ನಡ ನಾಡಿನಲ್ಲಿ ಕನ್ನಡ - ವಿರೋಧಿಯಾಗಿದ್ದಾಳೆಯೇ ?

ನಮ್ಮ ಮನೆ ಮಗ್ಗುಲಿಗೆ ಶ್ರೀಮಂತರೊಬ್ಬರ ಮನೆ. ಆಗರ್ಭ ಶ್ರೀಮಂತರೇನಲ್ಲ. ಹಳ್ಳಿಯ ಮೂಲದಿಂದ ಬಂದು ವ್ಯಾಪಾರ ಗೀಪಾರ ಮಾಡಿ ಉಳ್ಳವರಾದವರು. ಸುಶಿಕ್ಷಿತರಲ್ಲ. ವ್ಯವಹಾರಕ್ಕೆಷ್ಟು ಬೇಕೋ ಅಷ್ಟು ಕನ್ನಡ ಕಲಿತವರು. ಆದರೆ ಅವರ ಮೊಮ್ಮಕ್ಕಳು ಮಾತ್ರ ಕಾನ್ವೆಂಟ್ ಕಂದಮ್ಮಗಳು. ಒಮ್ಮೆ ಆ ಮನೆಯ ಯಜಮಾನಿ (ಆವಳಿಗೇ ಸ್ವತಃ ಸಹಿ ಮಾಡಲು ಬರುವುದಿಲ್ಲ.) ಬಹಳ ಉಮೇದಿನಿಂದ, ಖುಶಿಯಿಂದ ಹೇಳುತ್ತಿದ್ದಳು ಮೊಮ್ಮಗಳೊಬ್ಬಳ ಬಗ್ಗೆ : "ನೋಡ್ರಿ, ಅಣ್ಣಾರ. ನಮ್ಮ ಟಿಂಕಿ ಕನ್ನಡದಾಗs ಪೇಲಾಗ್ಯಾಳ್ರಿ"

ಕನ್ನಡದಲ್ಲಿ ' ಪೇಲ್' ಆಗುವುದು ಈ ಮುದುಕಿಗೆ ಅಭಿಮಾನದ ಸಂಗತಿ! ಇದು ಪ್ರತಿಷ್ಠೆಯೋ, ಅಜ್ಞಾನವೋ, ಕೀಳರಿಮೆಯೋ , ಮೇಲರಿಮೆಯೋ ಗೊತ್ತಾಗದಂಥ ಪರಿಸ್ಥಿತಿ. ವಿಚಿತ್ರವೆಂದರೆ, ನನ್ನ ಯುನಿವರ್ಸಿಟಿ ಕಲೀಗರೊಬ್ಬರು ತಮ್ಮ ಸಂತಾನವೊಂದರ ಬಗ್ಗೆ ಇದೇ ಮಾತನ್ನು ಇಷ್ಟೇ ಆನಂದದಿಂದ ಹೇಳುತ್ತಿದ್ದರು.

ನಮ್ಮ ಶಹರಗಳ ಮಧ್ಯಮ ವರ್ಗದ ಸ್ಥಿತಿ ನೋಡಿರಿ. ತಂದೆ ಆಫೀಸಿಗೆ ಹೋಗುತ್ತಾನೆ. ಅಥವಾ ಆಫೀಸೆಂದು ಹೇಳಿ ಅಂತೂ ಮನೆ ಬಿಟ್ಟು ಹೋಗುತ್ತಾನೆ. ಮಕ್ಕಳ ಜವಾಬ್ದಾರಿ ತಾಯಿಯದು. ಮಗ್ಗಲು ಮನೆಯಲ್ಲಿ ಕಾರು ಇದೆ, ಕಲರ್ ಟೀವಿ ಇದೆ. ಆ ಮನೆಯ ಮಕ್ಕಳು ಟ್ರಿಮ್ಮಾಗಿ ಡ್ರೆಸ್ ಮಾಡಿಕೊಂಡು ಕಾಲ್‌ಗೇಟ್ ನಗೆ ಚೆಲ್ಲುತ್ತ ಸ್ಕೂಲಿಗೆ ಹೋಗುವ ಮುಂದೆ ಮಮ್ಮಿ ಬಾಗಿಲಿಗೆ ಒರಗಿ ನಿಂತು ಬಾಯ್ ಅನ್ನುತ್ತಾಳೆ. ಈ ಮನೆಯ ಮಗು ಇದನ್ನೆಲ್ಲ

ಕಣ್ತುಂಬ ತುಂಬಿಕೊಳ್ಳುತ್ತದೆ. ಆ ಕಣ್ಣಿನ ಕನಸು, ಆ ಕನಸಿನ ನೋವು, ತಾಯಿಗೆ ಅರ್ಥವಾಗುತ್ತದೆ. ಅವರಿಗಿಂತ ನಾವೇನು ಕಡಿಮೆ? ಬರೋಬರಿ. ಗಂಡ ಸಂಜೆಯ ವೇಳೆಗೆ ಆಫೀಸಿನಿಂದ ವಾಪಾಸಾದ ಮೇಲೆ ಕಿರಿಕಿರಿ ಪ್ರಾರಂಭ. ಮಕ್ಕಳ ಶಿಕ್ಷಣದ ಮೀಡಿಯಂನಂಥ 'ಸಣ್ಣ' ವಿಷಯದ ಬಗ್ಗೆ ಹಗಲೂ ರಾತ್ರಿ ಹೆಂಡತಿ ಕೂಡ ಜಗಳಾಡಿ ಸುಖ ವಂಚಿತನಾಗಬೇಕೇ ಗಂಡ ?

ಗೆಳೆಯರೊಂದಿಗೆ ಗೋಳಾಟ : ನಮ್ಮ ಮನೀ ಹೆಣ್ಣುಮಕ್ಕಳ ಮಾತು ಹ್ಯಾಂಗ ಮೀರಬೇಕ್ರಿ.

ಆದರೆ ಹೆಂಡಂದಿರ ಗೆರೆಗಳನ್ನು ಮೀರಲಾಗದ ಇಂಥ ಈ ಲೋಕದ ಗಂಡರ ವಾದ ವೈಖರಿಯನ್ನು ಮೈಸೂರಿನ ನಮ್ಮ ಮೀರಾ ನಾಯಕ ಅವರು ಒಪ್ಪುವದಿಲ್ಲ. (ಮೀರಾ ಅವರು ಮೈಸೂರು ಜಿಲ್ಲಾ ಕನ್ನಡ ಜಾಗೃತಿ ಸಮಿತಿಯ ಸದಸ್ಯೆ. ಪ್ರಾಧ್ಯಾಪಕಿ. ಜಿ.ಎಚ್. ನಾಯಕ ಅವರ ಬಾಳಸಂಗಾತಿ) ಅವರು ಎದುರಿಗೆ ಕುಳಿತ (ನಮ್ಮಂಥ) ಗಂಡಸರನ್ನು ನೇರವಾಗಿ ಝಾಡಿಸುತ್ತಾರೆ : "ನಿಮಗ ಹೆಂಡ ಕುಂಡಿಯೋಮುಂದ ಹೆಂಡತಿ ಪರ್ಮಿಶನ್ ಬೇಕಾಗೋದಿಲ್ಲ. ಜೂಜು ಆಡೋಮುಂದ ಅವರ ಅಭಿಪ್ರಾಯ ಕೇಳೋದಿಲ್ಲ. ಈ ವಿಷಯಕ್ಕೆ ಮಾತ್ರ ಯಾಕೆ ಹೆಂಡಂದಿರ ಹೆಸರು ಮುಂದೆ ಮಾಡ್ತೀರಿ?"

*

ನಿಜ. ಹೆಂಡಂದಿರ ಮೇಲೆ ಅಪವಾದ ಹೊರಿಸಿ, ಪಲಾಯನ ಗೈಯುವ ಅನೇಕ ಗಂಡಂದಿರು ಕೂಡ ಒಳಗೊಳಗೇ ತಮ್ಮ ಮಕ್ಕಳು ಇಂಗ್ಲಿಷ್ ಮೀಡಿಯಂದಲ್ಲಿ ಓದಲಿ ಎಂದೇ ಬಯಕೆ ಹೊಂದಿರುತ್ತಾರೆ. ಸಾರ್ವಜನಿಕ ವೇದಿಕೆಗಳ ಮೇಲಿಂದ ಕನ್ನಡದ ಪಾಂಚಜನ್ಯ ಊದುವವರು ಮಾತ್ರ ತಮ್ಮ ಮಕ್ಕಳು, ಮೊಮ್ಮಕ್ಕಳ ಬಗ್ಗೆ ಇನ್ನೂ 'ಗಂಭೀರ' ವಾದ ವಾದಗಳ ಆಶ್ರಯ ಪಡೆಯಬೇಕಾಗುತ್ತದೆ.: (೧) ಇಂಗ್ಲಿಷ್ ಶಿಕ್ಷಣದಿಂದ ವಂಚಿತರಾಗಿ ನಮ್ಮ ಮಕ್ಕಳು ಎರಡನೇ ದರ್ಜೆಯ ನಾಗರಿಕರಾಗುವುದು ಬೇಡ (೨). ಸರಕಾರಿ ಕನ್ನಡ ಶಾಲೆಗಳ ಪರಿಸ್ಥಿತಿ ಅಧೋಗತಿಗಿಳಿದಿದೆ. ಅವು ಮುಂಚೆ ಸುಧಾರಣೆಯಾಗಲಿ. ಅನಂತರ ನೋಡೋಣ... ಇತ್ಯಾದಿ.

ನಮ್ಮ 'ಸರಕಾರಿ' ಶಾಲೆಗಳ ಪರಿಸ್ಥಿತಿ ನಿಜವಾಗಿಯೂ ಇಷ್ಟು ಕೆಟ್ಟು ಹೋಗಿದೆಯೇ? ವಿಚಾರಿಸಬೇಕಾದ ವಿಷಯವಿದು. ಬೆಂಗಳೂರಿನ ಕಾರ್ಪರೇಶನ್ ಶಾಲೆಗಳ ಬಗ್ಗೆ ಅಂಥ ಶಾಲೆಯೊಂದರ ಮುಖ್ಯಾಧ್ಯಾಪಕರೊಬ್ಬರು ಹೇಳಿದ ಮಾತು ನೆನಪಿಗೆ ಬರುತ್ತದೆ. ಕಾರ್ಪರೇಶನ್ ಶಾಲೆಗಳಲ್ಲಿ ಸರಿಯಾದ ವಿದ್ಯಾರ್ಹತೆ ಮತ್ತು ತರಬೇತಿ ಪಡೆದ ಶಿಕ್ಷಕರಿರುತ್ತಾರೆ. ಎಲ್ಲ ಪರಿಕರಗಳೂ ಸಮರ್ಪಕವಾಗಿರುತ್ತವೆ. ಇಷ್ಟೆಲ್ಲ ಗೊತ್ತಿದ್ದರೂ ರಾಜಧಾನಿಯ 'ಕನ್ನಡ' ಪಾಲಕರು ತಮ್ಮ ಮಕ್ಕಳನ್ನು ಯಾಕೆ ಖಾಸಗೀ ಇಂಗ್ಲಿಷ್ ಮೀಡಿಯಂ ಶಾಲೆಗಳಿಗೆ ಕ್ಯೂನಲ್ಲಿ

ನಿಂತು ಪ್ರವೇಶ ಫಾರ್ಮು ಪಡೆದು , ಅವರಿವರ ವಶೀಲಿ ಹಚ್ಚಿ ಕೇಳಿದಷ್ಟು ಡೊನೇಶನ್ ಸುರಿದು ಕಳಿಸುತ್ತಾರೆ ?

ಸರಕಾರಿ ಶಾಲೆಗಳನ್ನು ಟೀಕಿಸುವವರಿಗೆ ಖಾಸಗಿ ಕಾನ್ವೆಂಟ್ ಶಾಲೆಗಳ ಸ್ಥಿತಿಯ ಬಗ್ಗೆ ವಿಪರೀತ ಭ್ರಮೆಗಳು. ದೊಡ್ಡ ಪಟ್ಟಣಗಳಲ್ಲಿ ಏನೋ ಹತ್ತಾರು ಒಳ್ಳೆಯ ಕಾನ್ವೆಂಟ್ ಇರಬಹುದು. ಆದರೆ ಇಂದು ರಾಜಧಾನಿಯ ಬಡಾವಣೆಗಳಲ್ಲಿ, ಜಿಲ್ಲಾ ಕೇಂದ್ರ, ತಾಲೂಕಾ ಸ್ಥಳಗಳಲ್ಲಿ ಪುದು ಪುದು ಎಂದು ಎದ್ದು ನಿಂತಿರುವ ಕಾನ್ವೆಂಟ್ ಶಾಲೆಗಳಿಗೆ ಹೋಗಿ ನೋಡಿರಿ. ಒಂದು ಚಿಕ್ಕ ರೂಮಿನಲ್ಲಿ ೫೦ - ೬೦ ಮಕ್ಕಳನ್ನು ತುರುಕುತ್ತಾರೆ. ಕೂಡ್ರಲು ವ್ಯವಸ್ಥೆ ಇಲ್ಲ. ಗಾಳಿ ಆಡುವುದಿಲ್ಲ. ಕಲಿಸುವವರಿಗೆ ಮಿನಿಮಂ ಡಿಗ್ರಿ ಇರುವುದಿಲ್ಲ. ಅವರಿಗೆ ತಿಂಗಳಿಗೆ ಇನ್ನೂರೋ ಮುನ್ನೂರೋ ಪಗಾರ. ನೌಕರಿಯ ಭದ್ರತೆ ಅಂತೂ ಇಲ್ಲವೇ ಇಲ್ಲ. ಡ್ರೆಸ್ಸೋ, ಪುಸ್ತಕವೋ, ಗ್ಯಾದರಿಂಗೋ, ಬಿಲ್ಡಿಂಗ್ ಫಂಡೋ ಅಂತ ರೊಕ್ಕ ಕೇಡ್ತುತ್ತಲೇ ಇರುತ್ತಾರೆ. ಪಾಲಕರು ಧಾರಾಳವಾಗಿ, ತಮ್ಮ ಸಂತಾನಗಳ ಭವ್ಯ ಭವಿಷ್ಯತ್ತಿಗಾಗಿ ಬ್ರ ಅನ್ನದೆ ಸುರಿಯುತ್ತಲೇ ಹೋಗುತ್ತಾರೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿ ನಾನೂ ಅನೇಕ ಕಾನ್‌ವೆಂಟ್‌ಗಳನ್ನು ನೋಡಿದ್ದೇನೆ. ಒಂದು ಶಾಲೆಯಲ್ಲಿ ನನ್ನ ಹಳೆಯ ವಿದ್ಯಾರ್ಥಿನಿಯೊಬ್ಬಳು ಶಿಕ್ಷಕಿ. ನಾನು ಕೇಳಿದ ಕೆಲವು ಪ್ರಶ್ನೆಗಳಿಗೆ ಅವಳು ಉತ್ತರಿಸಿದ ಇಂಗ್ಲಿಷ್ ವಾಕ್ಯಗಳನ್ನು ನೋಡಿ ನನಗೆ ನಾಚಿಗೆ ಆಗಿತ್ತು. ಹೊಸಪೇಟೆಯ ಒಂದು ಪ್ರತಿಷ್ಠಿತ ಕಾನ್ವೆಂಟ್ ಶಾಲೆಗೆ ಹೋದಾಗ ಸಂಜೆಯ ವೇಳೆ. ಕಲಿಸುವವರು ಕಲಿಯುವವರು ಯಾರೂ ಇರಲಿಲ್ಲ. ಕ್ಲಾಸ್ ರೂಮಿಗೆ ಹೋಗಿ ಕಪ್ಪು ಹಲಗೆಯ ಮೇಲೆ ಬರೆದದ್ದು ಗಮನಿಸಿದಾಗ - ಎಂಟು ಇಂಗ್ಲಿಷ್ ವಾಕ್ಯಗಳಲ್ಲಿ ಹನ್ನೊಂದು ತಪ್ಪುಗಳು ?

ನಮ್ಮ ಪಾಲಕರಿಗೆ ಇವೆಲ್ಲ ತಿಳಿಯುವುದೇ ಇಲ್ಲ. ಪರೀಕ್ಷೆಗಳಲ್ಲಿ ಬರೆದ ಉತ್ತರಗಳಲ್ಲಿ ಅನೇಕ ಅನಾಹುತಗಳಿದ್ದರೂ ವಿದ್ಯಾರ್ಥಿ ಪಡೆಯುವುದು ಶೇಕಡಾ ತೊಂಬತ್ತಕ್ಕಿಂತ ಹೆಚ್ಚು ಅಂಕಗಳನ್ನು. ಅಂಕ ಪಟ್ಟಿ ನೋಡಿದ ಯಾವ ತಂದೆ - ತಾಯಿಗಳ ಬಾಯಿಂದ 'ಆಹಾ' ಎಂಬ ಶಬ್ದ ಹೊರಡಲಿಕ್ಕಿಲ್ಲ? ಬ್ರಹ್ಮಾನಂದಕ್ಕಿಂತ ಮಿಗಿಲಾದ ಭ್ರಮಾನಂದದಲ್ಲಿ ಲೀನರಾದ ಆವರಿಗೆ ತಮ್ಮ ಮಗ ಅಥವಾ ಮಗಳ ಭವಿಷ್ಯದ ಮುಖ ಕಾಣುವುದು ಇಂಗ್ಲಂಡ್ - ಅಮೇರಿಕೆಗಳ ಉಪಗ್ರಹಗಳಲ್ಲಿ, ಕಂಪ್ಯೂಟರ್‌ಗಳಲ್ಲಿ.

ಈ ಭ್ರಮೆ ಎಲ್ಲಿಯವರೆಗೆ.?

ಪ್ರೊ. ಸುಧಾಕರ ಮೇಲಿಂದ ಮೇಲೆ ತಮ್ಮ ಮನೆಯದೇ ಒಂದು ಪ್ರಸಂಗ ಹೇಳುತ್ತಾರೆ. (ಸುಧಾಕರ : ಕನ್ನಡ ಕತೆಗಾರ ; ಮೈಸೂರು ವಿಶ್ವವಿದ್ಯಾಲಯದಿಂದ ನಿವೃತ್ತರಾಗಿ ಸದ್ಯ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನಕ ಪೀಠದ ಅಧ್ಯಕ್ಷ ; ನಮ್ಮ ಪ್ರಾಧಿಕಾರದ

ರಾಜ್ಯ ಸಮಿತಿಯ ಸದಸ್ಯ) ಸುಧಾಕರ ತಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಹಾಕಿದರೆ, ಡಾಕ್ಟರ್ ವೃತ್ತಿಯ ಅವರ ಸೋದರ ತಮ್ಮ ಮಕ್ಕಳನ್ನು ಚನ್ನರಾಯಪಟ್ಟಣದಿಂದ ಮೈಸೂರು ನಗರಕ್ಕೆ ಕಳಿಸಿ ಅಲ್ಲಿಯ ಇಂಗ್ಲಿಷ್ ಮೀಡಿಯಂ ಶಾಲೆಗೆ ಹಾಕಿದ್ದರು. ಮಕ್ಕಳು ಮಕ್ಕಳ ನಡುವೆ ಪೈಪೋಟಿ. ಡಾಕ್ಟರರ ಮಕ್ಕಳಿಗೆ ಪ್ರತಿಯೊಂದು ಸಬ್ಜೆಕ್ಟಿನಲ್ಲಿ ಎಂಬತ್ತು ತೊಂಬತ್ತು. ಮಾಸ್ತರರ ಮಕ್ಕಳಿಗೆ ಕಡಿಮೆ. ಪರಸ್ಪರ ಹೀಯಾಳಿಕೆ, ಮೂದಲಿಕೆ, ಎಸ್ ಎಸ್ ಎಲ್ ಸಿ ತನಕ ಈ ಆಟ.

ಕಾಲೇಜಿಗೆ ಪಿಯುಸಿ ಹಂತಕ್ಕೆ ಬಂದಾಗ ಡಾಕ್ಟರರ ಮಕ್ಕಳು ಪರೀಕ್ಷೆಗಳಲ್ಲಿ ಢುಮ್ಕಿ. ಸುಧಾಕರರ ಮಕ್ಕಳು, ಮೊದಲ ಹಂತದಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿದವರು ಅನಂತರ ಇಂಗ್ಲಿಷ್ ಭಾಷೆಯನ್ನು ಸರಿಯಾಗಿ ಗ್ರಹಿಸಿಕೊಂಡು, ಮುಂದೆ ದೊಡ್ಡ ಹುದ್ದೆಗಳನ್ನು ಪಡೆದಿದ್ದಾರೆ. ನಾನು ಹೋದಲ್ಲೆಲ್ಲ ಒಂದು ಜೋಕು ಹೇಳುತ್ತೇನೆ. ಯಾರೋ ಎಲ್ಲೋ ಹೇಳಿದ್ದು, ಜೋಕುಗಳೆಲ್ಲ ಜಾನಪದ ಸಾಹಿತ್ಯದ ಹಾಗೆ. ಉಂಡವನದೇ ಊಟ, ಬಡಿದವನದೇ ಗೂಟ.

ಪ್ರಾಥಮಿಕ ಶಾಲೆಯಲ್ಲಿ ಕನ್ನಡದಲ್ಲಿಯೇ ಎಲ್ಲ ಕಲಿತವ ಮುಂದೆ ಮುಂದೆ ಹೋಗಿ ಇಂಗ್ಲಿಷನ್ನೂ ಕೈವಶ ಮಾಡಿಕೊಂಡು ಡಾಕ್ಟರ್ ಆಗುತ್ತಾನೆ. ಆದರೆ ಮೊದಲೇ ಇಂಗ್ಲಿಷ್ ಮೀಡಿಯಂಗೆ ಜೋತುಬಿದ್ದ ವಿದ್ಯಾರ್ಥಿ ಮುಂದೆ ಬಹಳ ಅಂದರೆ ಮೆಡಿಕಲ್ ರಿಪ್ರಜೆಂಟೆಟಿವ್ ಮಾತ್ರ ಆಗುತ್ತಾನೆ. ನಿಮಗೆ ಗೊತ್ತಲ್ಲ. ಬಾಯಿಪಾಠ ಮಾಡಿದ ಹನ್ನೊಂದು ವಾಕ್ಯ ಅವನಿಗೆ ಗೊತ್ತು. ಇನ್ನೊಂದು ಪ್ರಶ್ನೆ ಕೇಳಿದಿರೋ, ಥ್ಯಾಂಕ್ಯೂ ಅಂತ ಹೇಳಿ ಕೈಕುಲುಕಿ ಕಣ್ಮರೆಯಾಗುತ್ತಾನೆ.

ನಮ್ಮ ಗ್ರಹಿಕೆಗೆ ಸುಲಭವಾಗಿ ದಕ್ಕದ ಇನ್ನೊಂದು ಸಾಂಸ್ಕೃತಿಕ ಅಪಾಯದ ಬಗ್ಗೆಯೂ ನಾವು ಚಿಂತಿಸಬೇಕಾಗಿದೆ. ತಲೆ ತುಂಬ ಚಿಕ್ಕ ವಯಸ್ಸಿನಲ್ಲಿಯೇ ಇಂಗ್ಲಿಷಿನ ಟಿಸ್ ಪುಸ್ ತುಂಬಿಕೊಂಡ ನಮ್ಮ ಎಳೆಯರು 'ಕನ್ನಡ' ಕ್ಕೆ ಸಂಬಂಧಪಟ್ಟ ಸಾಹಿತ್ಯ , ಕಲೆ, ಸಂಸ್ಕೃತಿ, ಪರಂಪರೆಗಳ ಬಗ್ಗೆಯೂ ವಿನಾಕಾರಣ ತುಚ್ಛ ಭಾವನೆ ತಳೆಯುತ್ತಾರೆ. ಈ ನೆಲದ ಬೇರುಗಳನ್ನೇ ಕಡಿದುಕೊಳ್ಳುವ ಈ ಜೀವಗಳು ಆಕಾಶದಲ್ಲಿ ಯಾವ ಟೊಂಗೆಗಳನ್ನು ಹರಡಲು ಸಾಧ್ಯ ; ಬರೀ ಕಾಮಿಕ್ಸ್, ಡಿಸ್ಕೋ, ಪತ್ತೇದಾರಿಗಳ ಪ್ರಪಂಚದಲ್ಲಿ ಸುತ್ತಾಡುತ್ತಾ ಪ್ರಬುದ್ಧ ವಯಸ್ಸಿಗೆ ಬಂದಾಗ ಮಾದಕ ವಸ್ತುಗಳ ಚಟಗಳ ತೃಪ್ತಿಗಾಗಿ ಕ್ರಿಮಿನಲ್‌ಗಳಾಗಿ ಪರಿವರ್ತಿತರಾಗುತ್ತಿರುವ ದುರಂತವನ್ನು ನಾವು ಕಾಣುತ್ತಿದ್ದೇವೆ.

ಮಗನನ್ನೋ ಮಗಳನ್ನೋ ಒಂದು ಕಾನ್ವೆಂಟಿಗೆ ಹಾಕಿ ಕೈ ತೊಳೆದುಕೊಂಡು ಬಿಡುವ ನಮ್ಮ ಪಾಲಕರನೇಕರು ಮಕ್ಕಳೊಂದಿಗಿರಬೇಕಾದ ಸಹಜ ಪ್ರೀತಿ ಮತ್ತು ಕಾಳಜಿಯ ಸಂಬಂಧಗಳ ಕೊಂಡಿಗಳನ್ನೂ ಕಳಚಿಕೊಂಡು, ತಲೆಗೆ ಬಡಿದಾಗ ಮಾತ್ರ ಅಯ್ಯೋ ಎಂದು ಗೋಳಾಡುತ್ತಾರೆ. ಶ್ರೀಮಂತ ವರ್ಗಕ್ಕೆ ಸೀಮಿತವಾಗಿದ್ದ ಈ ವಿದ್ಯಮಾನ ಈಗ ಮಧ್ಯಮ ವರ್ಗಕ್ಕೂ ಪ್ರವೇಶ ಪಡೆದಿದೆ.

*

"ಏನ್ರೀ, ಕಾಯಿಪಲ್ಲೆ ಮಾರುವವರು, ಟಾಂಗಾ ಹೊಡೆಯುವವರು ಕೂಡ ಈಗ ತಮ್ಮ ಮಕ್ಕಳನ್ನು ಕಾನ್ವೆಂಟುಗಳಿಗೆ ಹಾಕಲು ಹಾತೊರೆಯುತ್ತಿದ್ದಾರೆ" ಎಂಬುದು, ಈಗಾಗಲೇ ಕಾನ್ವೆಂಟ್ ಸಾಮ್ರಾಜ್ಯಕ್ಕೆ ದಾಖಲಾದ ಕೆಲ ವರ್ಗಗಳ ತಕರಾರು. ಇಂಥವರನ್ನು ಕಂಡರೆ ನನಗೆ ಬಲು ಸಿಟ್ಟು. ತಮ್ಮ ತಮ್ಮ ಜಾತಿ, ಉಪಜಾತಿಗಳಿಗಾಗಿ ಜಗದ್ಗುರುವನ್ನು ಸೃಷ್ಟಿಸಿಕೊಂಡು, ಮಠಗಳನ್ನು ಕಟ್ಟಿಕೊಂಡ ಮೇಲುವರ್ಗದವರು, ಕೆಳವರ್ಗದವರೂ ಕೂಡ ಹಾಗೆ ಮಾಡಿದಾಗ ತೋರುವ ಅಸಹನೆ, ತಿರಸ್ಕಾರಗಳ ರೀತಿಯದೇ ಇದು. ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ - ಎಂಬಂತೆ. ಮೇಲಿನವರು ಮಾಡಿದ್ದನ್ನೇ ಕೆಳಗಿನವರೂ ಅನುಕರಿಸುವುದು ಸಹಜ.

ನಮ್ಮ ಸಮಾಜದ ಸೋಕಾಲ್ಡ್ ಬುದ್ಧಿ ಜೀವಿಗಳು, ಮಧ್ಯಮ ವರ್ಗದ ಸುಶಿಕ್ಷಿತರು ಮೊದಲು ತಾವು ರಿಪೇರಿಯಾಗಬೇಕು. ತನ್ನ ಬೆನ್ನು ತನಗೆ ಕಾಣುವುದಿಲ್ಲ- ಎಂಬ ಮಾತಿದೆ. ಯಾವುದೇ ಸಲೂನಿಗೆ ಹೋದರು ಎದುರು ಬದುರು ಕನ್ನಡಿಗಳ ಮುಖಾ ಮುಖಿಯಲ್ಲಿ ಈ ಮಾತಿನ ಸುಳ್ಳು ನಿಮ್ಮ ಕಣ್ಣಿಗೆ ಬಡಿಯುತ್ತದೆ. ನಮ್ಮ ಬೆನ್ನು ನಮಗೆ ಕಂಡೇ ಕಾಣುತ್ತದೆ. ಕಾನ್ವೆಂಟ್ ಪಿಡುಗಿನಿಂದ ನಮ್ಮ ಕಾರ್ಮಿಕರಿಗೆ, 'ದಲಿತರಿಗೆ' ಹಾನಿ ಆಗುತ್ತಿದ್ದರೆ, ಅಂಥದೇ ಹಾನಿ ನಮ್ಮ ಮಕ್ಕಳಿಗೂ ಆಗುತ್ತದೆ ಎಂಬ ಅರಿವು ನಮಗಾಗಬೇಕಾಗಿದೆ.

*

ಜಾಗತೀಕರಣದ ಇಂದಿನ ಸಂದರ್ಭದಲ್ಲಿ ನಮಗೆ ಅಂತರ್‌ರಾಷ್ಟ್ರೀಯ ಭಾಷೆ, ಎಂದೆನಿಸಿಕೊಳ್ಳುವ ಇಂಗ್ಲಿಷ್ ಬಾಷೆಯ ಜ್ಞಾನ ಅನಿವಾರ್ಯ. ಎಷ್ಟು? ಎಷ್ಟು ಬೇಕೋ ಅಷ್ಟು. ಇಂಡಿಯಾ ಒಕ್ಕೂಟದ ಬೇರೆ ಬೇರೆ ಭಾಷಾ ರಾಜ್ಯಗಳ ಸೇತುಬಂಧವಾಗಿ ಹಿಂದಿಯಂಥ ಭಾಷೆಯ ಜ್ಞಾನವೂ ನಮಗಿರಲಿ. ಆದರೆ ನಮ್ಮ ನಾಡಿನಲ್ಲಿ ನಮ್ಮ ಪರಿಸರದ, ಸಮುದಾಯದ ಭಾಷೆಯಾದ ಕನ್ನಡವೇ ನಮ್ಮ ಶಿಕ್ಷಣ ಕ್ರಮದ ಮೊದಲ ಹಂತಗಳಲ್ಲಿ ಬೋಧನಾ ಮಾಧ್ಯಮವಾಗಿರಬೇಕು.

ಒಂದು ಬಾಷೆಯನ್ನು 'ಮಾಧ್ಯಮ' ವಾಗಿ ಬಳಸುವುದನ್ನೂ, ಅದನ್ನು ಒಂದು 'ವಿಷಯ'ವನ್ನಾಗಿ ಕಲಿಯುವುದಕ್ಕೂ ಇರುವ ಸೂಕ್ಷ್ಮ ಅಂತರ ನಮ್ಮ ಬಹುತೇಕ ಸುಶಿಕ್ಷಿತರಿಗೆ ತಿಳಿಯದು. ಒಂದು ಬಾಷೆಯನ್ನು 'ವಿಷಯ'ವನ್ನಾಗಿ ಕಲಿತಾಗ ಮಾತ್ರ, ಮಾತಾಡುವ - ಓದುವ - ಬರೆಯುವ ಕೌಶಲ್ಯ (ಸ್ಕಿಲ್) ಗಳನ್ನು ಕರಗತ ಮಾಡಿಕೊಂಡಮೇಲೆ ಮಾತ್ರ, ಅದನ್ನು ಅನಂತರ 'ಮಾಧ್ಯಮ'ವನ್ನಾಗಿ ಬಳಸಿಕೊಂಡು ಇತರ ಜ್ಞಾನವನ್ನು ಸಂಪಾದಿಸಲಿಕ್ಕೂ, ಬೇರೆ ಭಾಷೆಗಳನ್ನು ಕಲಿಯಲಿಕ್ಕೂ ಸಾಧ್ಯ. ನಾಲ್ಕೈದು ವರ್ಷದ ಮಗು ಕಾನ್ವೆಂಟ್ ಸೇರುವ ಸಂದರ್ಭದಲ್ಲಿ ಅರೆ - ಬರೆ ಗೊತ್ತಿರುವ ಕನ್ನಡವನ್ನು ಹಿಂದಕ್ಕೆ ತಳ್ಳಿ, ಏಬಿಸಿಡಿ ಗೊತ್ತಿರದ ಇಂಗ್ಲಿಷನ್ನು ತಲೆಯ

ಮೇಲೆ ಹೇರುವುದರಿಂದ ಆ ಮಗುವಿನ ಮಾನಸಿಕ ಮತ್ತು ದೈಹಿಕ ದಣಿವನ್ನು ನಾವು ಸೂಕ್ಷ್ಮವಾಗಿ ಅರ್ಥಮಾಡಿಕೊಳ್ಳಬೇಕಾಗಿದೆ.

ಶಾಲಾ ಶಿಕ್ಷಣಾಧಿಕಾರಿಯೊಬ್ಬರು ನನಗೆ ಒಮ್ಮೆ ಹೇಳಿದ್ದರು. ತಪಾಸಣೆಗೆಂದು ಹೋದಾಗ ಕನ್ನಡ ಶಾಲೆಗಳ ಮಕ್ಕಳಲ್ಲಿ ತೋರುವ ಚಟುವಟಿಕೆ, ಲವಲವಿಕೆ, ಚುರುಕುತನ ಇಂಗ್ಲಿಷ್ ಮಾಧ್ಯಮದ ಅದೇ ವಯಸ್ಸಿನ ಮಕ್ಕಳಲ್ಲಿ ಕಾಣುವುದು ಅಸಾಧ್ಯ. ಆ ಎಳೆ ಮುಖಗಳಲ್ಲಿ ಸದಾ ಆತಂಕ ; ಮಿಸ್‌ಗಳ ಬೆದರಿಕೆಯ ಹೆದರಿಕೆ, ಹೋಂ ವರ್ಕಿನ ದುಃಸ್ವಪ್ನ, ಅದನ್ನೇ ಅದನ್ನೇ ಗೋಋ ಹೊಡೆಯಬೇಕಾದ ತಲೆನೋವು, ಮಮ್ಮಿ ಡ್ಯಾಡಿಗಳು ಹ್ಯಾಪಿ ಬರ್ತ್‌ಡೇ ಹಾಡುತ್ತ ಕೇಕು ಕತ್ತರಿಸಲು ಕೈಯಲ್ಲಿ ಹಿಡಿದ ಚಾಕುಗಳ ಇರಿತದ ನೆನಪು...

ನಮ್ಮ ಮಕ್ಕಳು ಇಂಥ ಬದುಕು ಬದುಕಬೇಕೆ ?

•

ನಿಮ್ಮ ಎಲ್ಲ ಬಗೆಯ ಆಫ್‌ಸೆಟ್ ಮುದ್ರಣ ಕೆಲಸಗಳಿಗಾಗಿ

ಚಂದನ ಮುದ್ರಣ

ವಿಚಾರಿಸಿರಿ

ಮಹಾಂತೇಶ ನಗರ, ಧಾರವಾಡ ೫೮೦ ೦೦೮

ಫೋನು : ೭೪೪೮೬೩ ಮತ್ತು ೮೬೮೬೪

C/o. ಸಂಕ್ರಮಣ ಪ್ರಕಾಶನ, ನಂ. ೧೮೯೪/೧, ૩೧ ನೇ ಕ್ರಾಸ್,

೨ ನೇ ಸ್ಟೇಜ್, ಬನಶಂಕರಿ, ಬೆಂಗಳೂರು ೫೬೦ ೦೭೦

ಫೋನು : ೬೭೧೦೫೨೩

ರಹಮತ ತರೀಕೆರೆ ಅವರ "ಕರ್ನಾಟಕದ ಸೂಫಿಗಳು"

ಗಣೇಶ್ ಕಿರಾಡಿ

ತಿಳುವಳಿಕೆಯ ಪರಿಪೇಕ್ಷ್ಯವನ್ನು ಕಟ್ಟಿಕೊಡುವ ಕೆಲಸದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಕಾರ್ಯನಿರತವಾಗಿದೆ. ಈ ಪ್ರಯತ್ನದಲ್ಲಿ ಅದು ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ ಎಂಬುದು ಬೇರೆ ಮಾತು. ಆದರೊಂದು ನಾಲ್ಕು ಕಾಲ ಉಳಿಯಬಲ್ಲ ಹತ್ತಾರು ಉತ್ತಮ ಕೃತಿಗಳನ್ನು ಅದು ಪ್ರಕಟಿಸಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಹಲವಾರು ಮಂದಿ ಸೇರಿ ಪಾಕ ಕೆಡಿಸಿದರೆಂಬಂತೆ 'ಶೈಲಿ ಕೈಪಿಡಿ' ಯಂಥ ಸಾಂಗತ್ಯವಿಲ್ಲದ ಪುಸ್ತಕಗಳನ್ನು ಅದು ಕನ್ನಡಿಗರ ಕೈಗಿತ್ತಿದೆ. ಯಾವುದು ಒಳ್ಳೆಯ ಪುಸ್ತಕ, ಯಾವುದು ಕೆಟ್ಟ ಪುಸ್ತಕ ಎಂಬುದನ್ನು ನಾನಿಲ್ಲಿ ಪಟ್ಟಿ ಮಾಡಹೊರಟಿಲ್ಲ. ನಾನು ಇತ್ತೀಚೆಗೆ ಓದಿದ , ನನಗೆ ಬಹಳ ಇಷ್ಟವಾದ, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ ಹಂಪಿ ಪ್ರಕಟಿಸಿದ, ಪ್ರತಿಭಾವಂತ ವಿಮರ್ಶಕ ಡಾ.ರಹಮತ್ ತರೀಕೆರೆ ಅವರ 'ಕರ್ನಾಟಕದ ಸೂಫಿಗಳು' ಕೃತಿಯ ಕಿರು ಸಮೀಕ್ಷೆಯ ಪ್ರಯತ್ನ ಈ ಲೇಖನ.

ಕರ್ನಾಟಕ ಸಂಸ್ಕೃತಿಗೆ ಸೂಫಿ ಸಂತರ ಕೊಡುಗೆಯೇನೆಂಬುದನ್ನು ಬಹುಮಟ್ಟಿಗೆ ಸಮಗ್ರವಾಗಿ ಕಟ್ಟಿಕೊಡುವ ಕಾರ್ಯವನ್ನು ರಹಮತ್ ತರೀಕೆರೆ ಅವರು ಇಲ್ಲಿ ಯಶಸ್ವಿಯಾಗಿ ಮಾಡಿದ್ದಾರೆ. ಕನ್ನಡದ ಸಂದರ್ಭದಲ್ಲಿ ಇದೊಂದು ಗಮನಾರ್ಹ ಕೃತಿ. ಸೂಫಿ ಸಂತರ ಚೂರೂಪಾರೂ ಚರಿತ್ರೆಯ ಬೆಳಕಿನಲ್ಲಿ ಲೇಖಕರು ಈ ಕೃತಿಯಲ್ಲಿ ನಡೆಸಿದ ಸಾಂಸ್ಕೃತಿಕ ಸಂವಾದಕ್ಕೆ ಸಾಂದರ್ಭಿಕ ಮಹತ್ವವಿದೆ. ಕನ್ನಡ ಸಂಸ್ಕೃತಿಯ ಶೋಧವಿಲ್ಲಿ ಹೊಸ ಆಯಾಮ ವನ್ನು ಪಡೆದುಕೊಂಡು ವಿನೂತನ ಮಾರ್ಗದಲ್ಲಿ ಕ್ರಮಿಸಿರುವುದು ಯಾರ ಗಮನಕ್ಕೂ ಬಾರದೇ ಹೋಗುದು. ಶಂಭಾ, ಕಪಟರಾಳ್ ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆದಾಗ್ಯೂ ಲೇಖಕರಲ್ಲಿ ತಮ್ಮದೇ ಆದ ಹಾದಿಯನ್ನು ಕಂಡುಕೊಂಡಿದ್ದಾರೆ. ಸೂಫಿ ಸಂತರ ಕೂಡುಗೆಯನ್ನು ಕಂಡುಕೊಂಡಿದ್ದಾರೆ. ಸೂಫಿಸಂತರ ಕೊಡುಗೆಯನ್ನು ತಿಳಿಹೇಳುವ ಕೃತಿಗಳು ಬೇರೆ ಬೇರೆ ಬಾರತೀಯ ಭಾಷೆಗಳಲ್ಲಿ ಈಗಾಲೇ ಬೆಳಕು ಕಂಡಿವೆ . ಸಾಂಸ್ಕೃತಿಕ ಸಂಶೋಧಕ ಸೇ.ತು. ಮಾಧವರಾವ್ ಪಗಡಿ ಅವರು ಮರಾಠಿಯಲ್ಲಿ ಸೂಫಿಗಳ ಕುರಿತು ಅನನ್ಯವಾದ ಕೃತಿಯನ್ನು ರಚಿಸಿದ್ದಾರೆ. ಕನ್ನಡದಲ್ಲಿ ಈ ಕೊರತೆಯನ್ನು ರಹಮತ್ ತರೀಕೆರೆ ಅವರು ನೀಗಿಸಿ ಕೊಟ್ಟಿದ್ದಾರೆ. ಆ ಮೂಲಕ ಕಾಲ ಕಾಲಕ್ಕೆ ವಿಶಾಲ ಕರ್ನಾಟಕದಲ್ಲಿ ನಡೆದ ಸಾಸ್ಕೃತಿಕ ಸಂಘರ್ಷದ ಕಥನವನ್ನು ಅವರು

ನಮ್ಮೆದರು ಬಿಚ್ಚಿಡುತ್ತಾ ಸಾಗಿದ್ದಾರೆ.

'ಸೂಫಿಸಂ' ಒಂದು ತತ್ವವಾಗಿದೆ. ಆದೊಂದು ಅನುಭಾವ ಪಂಥ. ಅದು ಇಸ್ಲಾಂ ಧರ್ಮ ಅಲ್ಲ. "ಶೂಫಿವಾದಕ್ಕೂ ಇಸ್ಲಾಮ್ ಧರ್ಮಕ್ಕೂ ಸಂಬಂಧ ಇಲ್ಲವೆಂತಲ್ಲ. ಇದೆ ಅದು ವಿಚಿತ್ರವಾಗಿದೆ. ಜಗತ್ತಿನ ಎಲ್ಲ ಕಡೆ ಮನುಭಾವಿ ಪಂಥಗಳಿರುವಂತೆ ಸೂಪಿ ಪಂಥವು ಮಧ್ಯ ಏಷ್ಯಾದ ಇಸ್ಲಾಮಿ ಜಗತ್ತಿನಲ್ಲಿ ರೂಪ ಪಡೆದ ಒಂದು ತತ್ವ" ಎಂಬುದನ್ನು ಲೇಖಕರು ಈ ಸಾಂಸ್ಕೃತಿ ಶೋಧದ ಶುರುವಿನಲ್ಲೇ ಸ್ಪಷ್ಟಪಡಿಸಿದ್ದಾರೆ. ಇಸ್ಲಾಮಿನ ಅನುಭಾವ ಶಾಖೆಗಿಂತ ಸೂಫಿವಾದ ತೀರಾ ಭಿನ್ನವಾದುದು. ಯಾವುದನ್ನು ಇಸ್ಲಾಂ ಎಂದು ಧರ್ಮ ಶಾಸ್ತ್ರಜ್ಞರು ಮಂಡಿಸುತ್ತಿದ್ದರೊ, ಆ ಪರಿಕಲ್ಪನೆಗೆ ಪರ್ಯಾಯವಾಗಿ ಚಿಂತಿಸುತ್ತ, ಬದುಕುತ್ತ ಬಂದವರು ಸೂಫಿ ಗಳು" ಎಂಬುದನ್ನು ಸೋದಾಹರಣವಾಗಿ ನಮಗೆ ಮನದಟ್ಟು ಮಾಡಿಕೊಡುವಲ್ಲಿ ಅವರು ಯಶಸ್ವಿಯಾಗಿದ್ದಾರೆ.

ಕರ್ನಾಟಕದ ಸೂಫಿಗಳು ಎದುರಿಸಿದ ನಾನಾರೀತಿಯ ಸಂಘರ್ಷ , ಸವಾಲುಗಳ ಕುರಿತೂ ಲೇಖಕರು ನಮ್ಮ ಗಮನವನ್ನು ಸೆಳೆಯುತ್ತಾರೆ. "ಕರ್ನಾಟಕದ ಸೂಫಿಗಳು ಈ ನಾಡಿನಲ್ಲಿ ಬರೀ ದೋಸ್ತಾರವನ್ನಷ್ಟೇ ಮಾಡಿಲ್ಲ. ಅನೇಕ ಗುದ್ದಾಟವನ್ನೂ ರಾಜಿಗಳನ್ನೂ ಮಾಡಿಕೊಂಡಿದ್ದಾರೆ. ಈ ಗೆಳೆತನ ಗುದ್ದಾಟಗಳ ಪರಿಯನ್ನು ಹುಡುಕುವುದು ತುಂಬ ಸ್ವಾರಸ್ಯಕರವಾದುದು. ಕರ್ನಾಟಕದ ಸೂಫಿ ಸಂತರ ಬಗ್ಗೆ ತಿಳಿಯುವುದು ಅಂದರೆ, ಅದು ಗತಕಾಲದ ಕಥನ ಮಾತ್ರವಲ್ಲ. ಈ ಹೊತ್ತಿನಲ್ಲಿ ಈ ನಾಡಿನ ಜನಸಮುದಾಯಗಳ ಕಥನ ಕೂಡಾ. ಯಾಕೆಂದರೆ, ಒಂದು ಕಾಲದಲ್ಲಿ ಜೀವಂತ ವ್ಯಕ್ತಿಗಳಾಗಿ ಬದುಕಿದ್ದ ಸೂಫಿಗಳು, ಈಗ ದೈವಗಳಾಗಿ ಬೇರೊಂದು ರೀತಿಯಲ್ಲಿ ಬದುಕಿದ್ದಾರೆ. ಇದೊಂದು ಬಗೆಯ ರೂಪಾಂತರ. ಈ ರೂಪಾಂತರಗಳ ಬೆನ್ನುಹತ್ತಿಹೋದರೆ, ಸೂಫಿ ಚರಿತ್ರೆಯ ಜತೆ ಜತೆಗೇ ಅವರನ್ನು ತಮ್ಮ ಮನದ ಕೊನೆಯಲ್ಲಿ ಬದುಕಗೊಟ್ಟಿರುವ ಜನಸಮುದಾಯಗಳ ಪಾಡಿನ ದರ್ಶನ ಮಾಡಿದಂತಾಗುತ್ತದೆ. ಜನರ ಆರ್ಥಿಕ ಸಾಮಾಜಿಕ ಪಾಡಷ್ಟೇ ಅಲ್ಲ. ಅವರ ಸಾಂಸ್ಕೃತಿಕ ಸೃಜನ ಶೀಲತೆ ಕೂಡಾ ಗೊತ್ತಾಗುತ್ತದೆಂಬುದನ್ನು" ಬಹಳ ಸಂಯಮದಿಂದ ತೋರಿಸಿಕೊಡುವ ಪ್ರಯತ್ನವನ್ನು ಈ ಕೃತಿಯಲ್ಲಿ ಲೇಖಕರು ಮಾಡಿದ್ದಾರೆ.

ಈ ಕೃತಿಯಲ್ಲಿ ಲೇಖಕರು ನಡೆಸುವ ಚಿಂತನಮಂಥನಗಳು ಬರೇ ಕರ್ನಾಟಕಕ್ಕೆ ಮಾತ್ರ ಸಂಬಂಧಪಟ್ಟದ್ದಲ್ಲ. ಅದು ಸೂಫಿವಾದದ ಮೂಲವನ್ನು ಶೋಧಿಸುವ ಹಂತದಲ್ಲಿ ಬಿಜಾಪುರದಿಂದ ಬಾಗ್ದಾದಿನತ್ತ ಮುಖಮಾಡುತ್ತದೆ. "ಹೇಗೆ ನೋಡಿದರೂ ಕರ್ನಾಟಕದ ಸೂಫಿಗಳ ಬೇರುಗಳು ಬಾಗ್ದಾದು ದೆಹಲಿಗಳಿಂದ ದೌಲತಾಬಾದು ಕರ್ನೂಲುಗಳ ತನಕ ಬೇರೆ ದೇಶ ರಾಜ್ಯಗಳಿಗೆ ಹೋಗಿ ಬಿಡುತ್ತವೆ. ಸೂಫಿಸಂ ಏಕಕಾಲಕ್ಕೆ ಜಾಗತಿಕವೂ ಪ್ರದೇಶಬದ್ಧವೂ ಆಗಿತ್ತು. ಆದ್ದರಿಂದ ಕರ್ನಾಟಕದ ಸೂಫಿಗಳು ಎಂದರೆ ಈಗಣ ಮಹಾರಾಷ್ಟ್ರ

, ಆಂಧ್ರಗಳಿಗೆ ಸೇರಿದ , ಸೊಲ್ಲಾಪುರ, ಅಕ್ಕಲಕೋಟೆ, ಕೌತಾಳ, ಹೊಸ್ಸೂರು, ಎಳ್ಳಾರತಿ, ಪೋಳಲುಗುಂದಿ ಮುಂತಾದ ಊರುಗಳಲ್ಲಿರುವ ಸೂಫಿಗಳು ಕೂಡ. ಈಗಲೂ ಇವರು ಸಾಂಸ್ಕೃತಿಕವಾಗಿ ಕರ್ನಾಟಕದವರಾಗಿಯೇ ಇದ್ದಾರೆ. ಇಲ್ಲಿ ಕನ್ನಡದ ಜತೆ ಉರ್ದು, ಮರಾಠಿ, ತೆಲುಗು ಬಾಷೆಗಳಿವೆ." ಎಂಬ ಸತ್ಯಾಂಶಗಳನ್ನೂ ಇಲ್ಲಿ ಲೇಖಕರು ಕಂಡುಕೊಂಡಿದ್ದಾರೆ. ಭಾಷೆಯ ಹೆಸರಲ್ಲಿ ಧರ್ಮದ ಕಾರಣದಿಂದ, ಗಡಿ ಸಮಸ್ಯೆಯ ನೆಪದಲ್ಲಿ ರಾಜಕಾರಣ ಸಾಮಾನ್ಯ ಜನರ ನೆಮ್ಮದಿ ಕೆಡಿಸಿದ್ದನ್ನೂ ಲೇಖಕರಿಲ್ಲಿ ತರಾಟೆಗೆತ್ತಿಕೊಳ್ಳುತ್ತಾರೆ. ಇವರಿಗೆ ಜನ ನೆಮ್ಮದಿಯಿಂದ ಸಾಮರಸ್ಯದಿಂದ ಬದುಕುವುದನ್ನು ಕಂಡು ಸಹಿಸಲಾಗುತ್ತಿಲ್ಲ. "ಸೂಫಿ ಸಂತರನ್ನು ಕುರಿತ ಮಿತ್‌ಗಳು, ಆಚರಣೆಗಳು ಸಮುದಾಯಗಳ ಆರ್ಥಿಕ ಸಾಮಾಜಿಕ ಧಾರ್ಮಿಕ ಬಾಳಿನಲ್ಲಿ ಸಹಜವಾಗಿ ಇರುವಂಥವು. ಉದಾರವಾದವು ಇದನ್ನು ಕೋಮು ಸಾಮರಸ್ಯದ ನಿದರ್ಶನಗಳಾಗಿ ಮಂಡಿಸುತ್ತದೆ. ಆದರೆ ಸಮುದಾಯಗಳಿಗೆ ಕೋಮುವಾದವೆಂಬ ರೋಗಕ್ಕೆ ಔಷಧಿಯಂತಿರುವ ಮೌಲ್ಯವನ್ನು ತಾವು ಬದುಕುತ್ತಿದ್ದೇವೆ ಎಂಬ ಅರಿವಿಲ್ಲ. ಹೀಗಿರುವ, ಈ ವಿವರಗಳನ್ನು ಸೆಕ್ಯುಲರ್ ರಾಜಕೀಯ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳುವುದರ ಔಚಿತ್ಯವೇನು? ಕೋಮುವಾದದ ಹಾಗೆ ಕೋಮು ಸಾಮರಸ್ಯವಾದ ಕೂಡ ಆಧುನಿಕ ರಾಜಕಾರಣದ ಭಾಗವಾಗಿರುವುದರಿಂದ ಈ ಸಮಸ್ಯೆ ಜಟಿಲವಾಗಿದೆ." ಎಂಬ ಲೇಖಕರ ಮಾತು ಅಕ್ಷರಸಹ ನಿಜವಾಗಿದೆ. ಈ ಸಮುದಾಯಗಳು ಕೋಮುಸಾಮರಸ್ಯವನ್ನು ಅರಿವಿಲ್ಲದೇ ಮೈಗೂಡಿಸಿಕೊಂಡು ಬಾಳುತ್ತಿವೆ ಎಂಬ ಶೋಧವೂ ನಮ್ಮ ದೃಷ್ಟಿಯನ್ನು ತಿದ್ದುವುದಕ್ಕೆ, ನಾವು ಕಟ್ಟಿಕೊಂಡಿರುವ ಪೂರ್ವಗ್ರಹಗಳನ್ನು ಮೂಲೆಗೊತ್ತಲು ಸಹಾಯಕಾರಿಯಾಗಿದೆ. ಅಧ್ಯಯನದ ಸಾರ್ಥಕತೆ ಇರುವುದು ಇಲ್ಲಿಯೇ ಎಂಬುದು ಗಮನೀಯ ಅಂಶ.

ಕರ್ನಾಟಕದ ಸೂಫಿಗಳು ಕೃತಿಯ ಮುಖ್ಯ ಕಾಳಜಿ ಇತಿಹಾಸದ ಪುನಾರಚನೆಯ ಕುರಿತಾದುದಲ್ಲ. ದಂತ ಕತೆಯಾಗಿರುವ , ಜನರ ನಂಬಿಕೆಯಿಂದ ಅವರ ಬದುಕಿನ ಅವಿಭಾಜ್ಯ ಅಂಗವಾಗಿರುವ ಸೂಫಿಗಳು ಕಾಲ ದೇಶ ಮತ ಪಂಥಗಳನ್ನು ಮೀರುತ್ತಾರೆ. ಆದ್ದರಿಂದಲೇ ಲೇಖಕರು ಸೂಫಿಸಂತರ ಚರಿತ್ರೆಯನ್ನು ಕಟ್ಟುವುದೆಂದರೆ "ಹುಟ್ಟಿಲ್ಲದ ದೋಣಿಯಲ್ಲಿ ಕುಳಿತು ಹರಿವ ನದಿಯಲ್ಲಿ ಪಯಣ ಹೊರಟಂತೆ, ಸೆಳವು ಬಂದತ್ತ ಹೋಗುವ ಆಕರ್ಷಣೆಯೂ ಇದೆ. ಬೇಕಾದ ಕಡೆ ಹೋಗಲಾಗದ ಸಮಸ್ಯೆಯೂ ಇದೆ. ವೇಷ ಮರೆಸಿಕೊಂಡು ಹಲವು ರೂಪಗಳಲ್ಲಿ ಸುಳಿದಾಡುವ ಚರಿತ್ರೆ ಇಲ್ಲಿ ದೈವವಿದ ಂತೆ. ಇದೆ ಎಂದರೆ ಇದೆ. ಇಲ್ಲ ಎಂದರೆ ಇಲ್ಲ. ಇಲ್ಲಿ ಚರಿತ್ರೆ ಪುರಾಣವಾಗಿ, ನಂಬಿಕೆಯಾಗಿ, ಆಚರಣೆಯಾಗಿ ಹೋಗಿರುತ್ತದೆ. ಮತ್ತು ನಿರಂತರವಾಗಿ ಬದಲಾಗುತ್ತಲೇ ಇರುತ್ತದೆ." ಎಂಬ ನಿರ್ಣಯಕ್ಕೆ ಬಂದಿದ್ದಾರೆ. "ಮೋಡಗಳಂತೆ ಬದಲಾಗುತ್ತಲೆ ಇರುವ ಈ ಮಿತ್‌ಗಳ ಮೂಲಕ ಸೂಫಿ ಸಂತರ ಅಧ್ಯಯನ ಮಾಡುವಾಗ ಖಚಿತತೆಯನ್ನು ಬೇಡುವ ಚರಿತ್ರಕಾರರು, ಅದರಲ್ಲಿಯೂ ಯುರೋಪಿನವರು ಪಡಬಾರದ ಪಾಡು ಪಡುತ್ತಾರೆ." ಈ ಅಧ್ಯಯನವನ್ನು ಆ ಪಾಡಿನಿಂದ ಮುಕ್ತಗೊಳಿಸುವ ಉದ್ದೇಶವೂ

ಈ ಅಧ್ಯಯನದಲ್ಲಿ ಎದ್ದು ಕಾಣುತ್ತದೆ. ನಮ್ಮ ದೇಶದ ಇತಿಹಾಸವನ್ನು ಕುರಿತು ಪರಕೀಯರು ಬರೆಯುವಾಗ ಅಲ್ಲಿ ಅನೇಕ ತೊಂದರೆಗಳು ಎದುರಾಗುವುದು ನಿಜ. ಆದರೆ ಶಾಸನ , ಗ್ರಂಥಸ್ಥ, ಸ್ಥಾವರ ದಾಖಲೆಗಳಿರುವಾಗಲೂ ಸೂಫಿಗಳ ಕುರಿತು ಖಚಿತತೆಯ ಹಾದಿಯನ್ನು ಬಿಟ್ಟು, ಐತಿಹ್ಯ, ಪುರಾಣ, ನಂಬಿಕೆ, ಆಚರಣೆಗೆ ಕಟ್ಟು ಬೀಳುವ ಲೇಖಕರ ಉದ್ದೇಶ ಸಹಜ ವಾಗಿಯೇ ವಿದ್ವಾಂಸವಲಯದಲ್ಲಿ ಗುಮಾನಿ ಹುಟ್ಟಿಸಬಹುದು. ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಬದುಕಿ ಬಾಳಿ ಜನಮನ್ನಣೆಗೆ ಪಾತ್ರರಾದ ಸೂಫಿಗಳು ಇಂದು ದೈವತ್ವಕ್ಕೇರಿರಬಹುದು. ಅವರು ಮಿತ್‌ಗಳ ಪ್ರಪಂಚದಲ್ಲಿ ಸುತ್ತಾಡುತ್ತಿರಬಹುದು. ಆದರೂ ಈ ನೆಲದಲ್ಲಿ ಒಂದು ಕಾಲದಲ್ಲಿ ಸಾಮಾನ್ಯರಂತೆ ಅವರೂ ಜೀವನ ನಡೆಸಿದ್ದರಲ್ಲ. ನಿಜವಾಗಿ ಅವರು ಅಂದು ಎದುರಿಸಿದ ಸಂಘರ್ಷ ಸಾಧನೆಯ ಹಾದಿಯಲ್ಲಿ ಬಂದ ಕಷ್ಟ ನಷ್ಟಗಳು, ಇವೆಲ್ಲವನ್ನು ಅವರು ಗೆದ್ದು ನಿಂತ ಬಗೆ ಹೇಗೆ,? ಎಂಬ ಖಚಿತತೆಯ ಇನ್ನೊಂದು ಮುಖದತ್ತ ಲೇಖಕರು ದೃಷ್ಟಿ ಹರಿಸಿದ್ದರೆ ಇನ್ನಷ್ಟು ಅಧಿಕೃತವಾಗುತ್ತಿತ್ತೆನಿಸುತ್ತದೆ ಈ ಅಧ್ಯಯನ. ಇತಿಹಾಸದ ಮುಖಗಳನ್ನು ಬದಿಗೊತ್ತುತ್ತಲೇ ಲೇಖಕರು ಇಲ್ಲಿ ತಮ್ಮ ದೋಣಿಯನ್ನು ದಡದ ಕಡೆಗೆ ಮುಖಮಾಡುತ್ತಾರೆ. ಮಧ್ಯಕಾಲೀನ ಗೊಂದಲಮಯ ಅಸ್ಪಷ್ಟ ರಾಜಕೀಯ ಇತಿಹಾಸವೂ ಇದಕ್ಕೆ ಕಾರಣವಿರಬಹುದು. ಈ ಸಂದರ್ಭದಲ್ಲಿ ನಮಗೆ ಸೇತು ಮಾಧವರಾವ್ ಪಗಡಿ ಅವರು ತುಳಿದ ಹಾದಿ , ಅರ್ಥೈಸಿದ ರೀತಿ ಹೆಚ್ಚು ಅಧಿಕೃತವಾಗಿ ಕಾಣುತ್ತದೆ.

"ಸೂಫಿಗಳು ಯೋಗ ಸಾಧನೆ ಮಾಡಿಕೊಂಡು ದೃಢವಾದ ದೇಹವನ್ನು ಒಳ್ಳೆ ಆರೋಗ್ಯವನ್ನು ಇಟ್ಟುಕೊಂಡವರು. ಬಹಳ ವರ್ಷ ಬದುಕುತ್ತಿದ್ದವರು. ಚಾಂಗದೇವ, ಹಾಡಸಿದ್ದ ಮುಂತಾದ ಯೋಗಿಗಳು ನೂರಾರು ವರ್ಷ ಬದುಕಿದ ಕತೆಗಳ ಅರ್ಥ ಇದೇ. ಆರೋಗ್ಯ ಹಾಗೂ ಆಯಸ್ಸುಗಳಿಗೆ ಕಾರಣ ಅವರಿಗೆ ಗೊತ್ತಿದ್ದ ವೈದ್ಯ ಪದ್ಧತಿ. ಅವರ ಸಾವಿನಲ್ಲಿರುವ ದೊರೆಯ ಮಕ್ಕಳಿಗೆ ಹುಲಿಯ ಹಾಲಿನಿಂದ ಔಷಧಿ ಮಾಡಿಕೊಡುವ ಕತೆಗಳನ್ನಾಗಲಿ ಇತರ ರೋಗ ನಿವಾರಕ ಪವಾಡಗಳನ್ನಾಗಲಿ ಈ ಹಿನ್ನೆಲೆಯಲ್ಲಿ ಗಮನಿಸಬೇಕು" ಇಲ್ಲೆಲ್ಲ ಲೇಖಕರು ಕತೆಗಳ ಐತಿಹ್ಯಗಳ, ಪವಾಡಗಳ ಹಿಂದಿನ ಆಶಯವನ್ನು ಶೋಧಿಸುವುದರ ಕಡೆಗೆ ಹೆಚ್ಚು ಮುತುವರ್ಜಿ ವಹಿಸುತ್ತಾರೆ. ಜನಪರರಂಪರೆಯನ್ನು ಅರ್ಥಮಾಡಿಕೊಳ್ಳುವ ಅಧ್ಯಯನ ಇದಾದುದರಿಂದ ಲೇಖಕರು ಚರಿತ್ರೆಯನ್ನು ಬೆಳಕಾಗಿ ಬಳಸಿಕೊಂಡರೇ ವಿನಃ ಮುಖ್ಯ ಆಕರವನ್ನಾಗಿ ಅಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಸೂಫಿಗಳನ್ನು ಕರ್ನಾಟಕದ ಸೂಫಿಗಳು, ಮಹಾರಾಷ್ಟ್ರದ ಸೂಫಿಗಳು, ಅಥವಾ ಇನ್ನಾವುದೋ ರಾಜ್ಯದ ಸೀಮೆಯವರೆಂಬ ಹಣೆ ಪಟ್ಟಿ ಹಚ್ಚುವ ಕೆಲಸವೂ ಸರ್ವಥಾ ಸರಿಯಲ್ಲ. ಇದು ಕರ್ನಾಟಕ ಸಂಸ್ಕೃತಿ, ಇದು ಮರಾಠಿ ಸಂಸ್ಕೃತಿ, ಎಂದು ಗೆರೆ ಕೊರೆದು ಹಾಕಿದ್ದು ಸಂಶೋಧಕ ವರ್ಗವೇ. ಪ್ರಸ್ತುತ ಕೃತಿಯ ಅಧ್ಯಾಯ ಹನ್ನೊಂದು, ಸೂಫಿಗಳ ನಡುವಿದ್ದ ಬಹುಭಾಷೆಗಳಿಗೆ ಸಂಬಂಧಿಸಿದ್ದು.

"ಮೂಲತಃ ಸೂಫಿಗಳು ಪಾರಸಿಕರು. ಸೂಫಿ ಅನುಭಾವ ಸಾಹಿತ್ಯದ ಮಹಾಪರಂಪರೆ ಫಾರಸಿಯಲ್ಲಿದೆ. ಸೂಫಿಗಳು ಫಾರಸಿ ಆಡಳಿತ ಭಾಷೆಯುಳ್ಳ ಪ್ರಭುತ್ವಗಳ ಜತೆ ಬದುಕಬೇಕಾಯಿತು. ಹೀಗಾಗಿ ಫಾರಸಿ ಭಾರತೀಯ ಸೂಫಿಸಂನ ಅನಿವಾರ್ಯ ಅಂಗವಾಗಿತ್ತು. ಭಾರತದಲ್ಲಿ ಹುಟ್ಟಿದ ಸೂಫಿಗಳು ಸ್ಥಳೀಯ ಭಾಷೆಗಳನ್ನು ಅಭಿವ್ಯಕ್ತಿಗಾಗಿ ತುಡುಕಿದಾಗಲೂ ಫಾರಸಿಯನ್ನು ಬಿಡಲಿಲ್ಲ. ಕರ್ನಾಟಕದ ಸೂಫಿಗಳು ದಖನಿ - ಮರಾಠಿ ಕನ್ನಡಗಳನ್ನು ಆಯ್ದುಕೊಂಡರೂ ಫಾರಸಿ ಬಲ್ಲವರಾಗಿದ್ದರು. ಮಹಿಪತಿದಾಸನು ಮರಾಠಿ ಹಾಗೂ ಕನ್ನಡಗಳಲ್ಲಿ ಬರೆದನು. ಆದರೆ ಆದಿಲಶಾಹಿ ಪ್ರಭುತ್ವದಲ್ಲಿದ್ದ ಅವನಿಗೆ ದಖನಿ - ಫಾರಸಿಗಳು ಗೊತ್ತಿದ್ದವು." ಹೀಗೆ ವಿಚಿತ್ರ ರೀತಿಯಲ್ಲಿ ಸೂಫಿಗಳು ಬಹು ಭಾಷಿಕ ವಾತಾವರಣಕ್ಕೆ ಕಾರಣವಾದ ಬಗೆಯನ್ನು ತೋರಿಸಿಕೊಟ್ಟಿದ್ದಾರೆ. ಭಾಷಾ ಸಮಾರಸ್ಯಕ್ಕೆ ಲೇಖಕರು ಕೊಡುವ ಒಂದು ಸಂದರ್ಭ ಇಲ್ಲಿ ಉಲ್ಲೇಖಿಸಲೇ ಬೇಕು. ಅದು ಗಾದಿಲಿಂಗನ ಜಾತ್ರೆಗೆ ಸಂಬಂಧಿಸಿದ್ದು. "ಗಾದಿಲಿಂಗನಿರುವ ಗೂಳ್ಯಂ ಹಳೇ ಬಳ್ಳಾರಿ ಸೀಮೆಯಲ್ಲಿದೆ. ಒಂದು ಮನೆಯ ಮುಂದೆ ಹರಕೆ ಮಾಡಿಕೊಂಡವರು "ಗೊಗ್ಗಯ್ಯರಾಟ" ಏರ್ಪಡಿಸಿದ್ದರು. ಮೈಲಾರನ ಕತೆಯನ್ನು ಗೊರವರು ನಾಟಕೀಯವಾಗಿ ಅಭಿನಯಿಸುತ್ತಿದ್ದರು. ಕುತೂಹಲವೆಂದರೆ ಶಿವಪಾತ್ರಧಾರಿ ತೆಲುಗಿನಲ್ಲಿ ಮಾತಾಡಿದರೆ, ಪಾರ್ವತಿ ಕನ್ನಡದಲ್ಲಿ ಉತ್ತರಿಸುತ್ತಿದ್ದಳು. ಅಲ್ಲಿ ಸೇರಿದ ಜನರಿಗೆ ಇದೇನು ಹೊಸತಾಗಿರಲಿಲ್ಲ. ಎರಡು ಭಾಷೆಗಳು ಬೆರೆಯುವುದು ಅರಿವಾಗದಷ್ಟು ಸಹಜ ಲಯದಲ್ಲಿ ಒಂದಾಗಿದ್ದವು." ಇದು ಅವರಿಗೆ ಸಹಜವಾದರೆ ಓದುವ ನಮಗೆ ಕಣ್ಣಾರೆ ಕಂಡ ಲೇಖಕರಿಗೆ ತುಸು ಅಚ್ಚರಿಯನ್ನುಂಟು ಮಾಡುತ್ತದೆ. ಮತ - ಮತಗಳ ನಡುವೆ, ಭಾಷೆ ಭಾಷೆಗಳ ಮಧ್ಯೆ ಸಹಜವಾದ ಕೊಳುಪಡೆಯಿತ್ತು. ಬಹು ಭಾಷಿಕತೆ, ಬಹುಸಾಂಸ್ಕೃತಿಕತೆ, ಅವುಗಳ ರೂಪಾಂತರ, ಕೊನೆಗೆ ಲೇಖಕರು ತಳೆಯುವ ನಿರ್ಧಾರ ಯಾರನ್ನೂ ಗಾಢವಾಗಿ ತಟ್ಟಬಲ್ಲದು.

ಇದೊಂದು ಬರೀ ಅಕಡೆಮಿಕ್ ಶಿಸ್ತಿಗೆ ಒಳಪಟ್ಟ, ಅಧ್ಯಯನ ಗ್ರಂಥವಲ್ಲ. ಸೂಫಿ ಸಂತರ ನೆರಳಲ್ಲಿ ಇಲ್ಲಿ ನೆಲೆ ನಿಂತ ಸಂಸ್ಕೃತಿಯ ಅರ್ಥ ವಿವರಣೆಯೂ ಅಷ್ಟೇ ಸಮರ್ಥವಾಗಿ ಅಭಿವ್ಯಕ್ತವಾಗಿದೆ. ಆದ್ದರಿಂದಲೇ ಇದೊಂದು ಸಾಂಸ್ಕೃತಿಕ ಸಂವಾದ ಎಂದು ನಾನು ಆರಂಭದಲ್ಲೇ ಕರೆದದ್ದು. ಬಹುಭಾಷಿಕ ನೆಲೆಯ ಕುರಿತಾದ ಚರ್ಚೆ ಮುಕ್ತಾಯವಾಗುವುದು ಹೀಗೆ, ಈ ಸಮಾಜದ ಸ್ವರೂಪಕ್ಕೂ ಇದರ ಬಹುಭಾಷಿಕತೆಗೂ ನೇರ ಸಂಬಂಧವಿದೆ. ಬಹುಭಾಷಿಕತೆ ಯಾವತ್ತೂ ಬಹುಧರ್ಮೀಯತೆಗೆ ಸೆಳೆದುಕೊಂಡು ಹೋಗುವಂಥದ್ದು. ಶಂಕೆಯೆಂದರೆ, ಸಡಿಲ ರಚನೆಯ ಈ ಸಮನ್ವಯಕಾರಿ ಪಂಥಕ್ಕೆ "ಆಕ್ರಮಣಕಾರಿ ನೆಲೆಯ ಏಕರೂಪೀ ಸನಾತನವಾದವನ್ನು ಎದುರಿಸುವ ದೃಢತೆ ಇದೆಯೇ ? ಸಮುದಾಯಗಳ ಒಳಗೆ ತನ್ನನ್ನು ಚೆಲ್ಲಿಕೊಳ್ಳದ ಯಾವ ಬಹುರೂಪಿ ರಚನೆಗಳೂ ಈಗ ಉಳಿಯುವುದು ಕಷ್ಟವಾಗಿದೆ." ಎಂಬ ವಾಸ್ತವ ಸತ್ಯವನ್ನು ಬಹಿರಂಗಪಡಿಸಿದ್ದಾರೆ.

ನಮ್ಮ ಇತಿಹಾಸವನ್ನು ಬರೆಯುವ ನೆಪದಲ್ಲಿ ವಿದೇಶಿ ವಿದ್ವಾಂಸರು, ನಮ್ಮ ನಡುವೆ ಗೋಡೆಗಳನ್ನು ಬಿತ್ತಿ ಬೆಳೆದರು. ಈ ನಿಟ್ಟಿನಲ್ಲೂ ಲೇಖಕರ ಚಿಂತನೆ ಮುಂದೋಡುತ್ತದೆ. "ಸೂಫಿ ಪಂಥವನ್ನು ಅನುಭಾವಿ ಪಂಥವಾಗಿ ನೋಡುವ ಬದಲು ಒಂದು ಪರಕೀಯ ಮ್ಲೇಚ್ಛ ಧರ್ಮವನ್ನಾಗಿ ನೋಡಿರುವ ದೃಷ್ಟಿಕೋನಗಳು ಕನ್ನಡದಲ್ಲಿವೆ. ಆಶ್ಚರ್ಯವೆಂದರೆ, ೧೭ ನೇ ಶತಮಾನದಲ್ಲಿ ಗೋವಿಂದ ವೈದ್ಯ ತಾಳಿದ ಮನೋಭಾವವು ಈ ಶತಮಾನದ ಆಲೂರು ವೆಂಕಟರಾವ್, , ಗಳಗನಾಥ, ಚಿದಾನಂದಮೂರ್ತಿಯವರಲ್ಲಿ ಮುಂದುವರಿದಿರುವುದು. ವಸಾಹತುಶಾಹಿ ಚರಿತ್ರೆಯ ಆಕರಗಳಿಂದ ಹುಟ್ಟಿದ ಇಂಥ ಮನೋಭಾವಗಳಿಗೆ ಈ ನಾಡಿನಲ್ಲಿ ಬಂದೇನವಾಜ, ತಿಂತಿಣಿಮೋನಪ್ಪ ಇದ್ದರು ಎಂಬ ಅರಿವು ಹತ್ತಿರ ಸುಳಿಯಲೇ ಇಲ್ಲವೆನಿಸುತ್ತದೆ." ಎಂಬ ಮಾತುಗಳಲ್ಲಿ ತಥ್ಯವಿದೆ. ಇದು ಬರೇ ಗಳಗನಾಥ, ಆಲೂರ ಅಥವಾ ಇನ್ನೊಂದಿಬ್ಬರಿಗೆ ಮಾತ್ರ ಸಂಬಂಧಿಸಿದ್ದಲ್ಲ. ವಸಾಹತು ಶಾಹಿ ಚರಿತ್ರೆಯನ್ನು ಯಥಾವತ್ತಾಗಿ ಬೋಧಿಸುವ ನಮ್ಮ ಶೈಕ್ಷಣಿಕ ವ್ಯವಸ್ಥೆ , ಬುದ್ಧಿ ಜೀವಿಗಳೆನಿಸಿಕೊಂಡ ಎಲ್ಲರೂ ಇದಕ್ಕೆ ಕಾರಣರಾಗಿದ್ದಾರೆ.

ಸಾಹಿತ್ಯವನ್ನು ಮತೀಯ ಹಿನ್ನೆಲೆಯಲ್ಲಿ ನೋಡುವ ಕವಿಗಳನ್ನು ಜಾತಿ ಹಿನ್ನೆಲೆಯಲ್ಲಿ ವರ್ಗೀಕರಿಸುವ . ಧರ್ಮ ಎಂದ ತಕ್ಷಣ ಯಾವುದೋ ಒಂದು ಮತವನ್ನು ನೆನಪಿಸಿಕೊಳ್ಳುವ ಮನಸ್ಸುಗಳು ಇಂದು ಜಾಸ್ತಿಯಾಗಿವೆ. . ಈ ಪ್ರವೃತ್ತಿ ಸ್ವಾತಂತ್ರ್ಯ ಪೂರ್ವಕ್ಕಿಂತ ಮಿಗಿಲಾಗಿ ಸ್ವಾತಂತ್ರ್ಯೋತ್ತರದ ಕಾಲದಲ್ಲಿ, ಅದರಲ್ಲೂ ಇತ್ತೀಚೆಗೆ ಬಿರುಸಾಗಿ ನಡೆದಿದೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಬಂದೇನವಾಜ, ತಿಂತಿಣಿ ಮೋನಪ್ಪ ಮೊದಲಾದವರ ಹೆಸರೇ ಕೇಳದ ಇತಿಹಾಸಕಾರರು, ಸಂಶೋಧಕರು ಇದ್ದಾರೆಂದು ಹೇಳಲು ಹಿಂದೆ ಮುಂದೆ ನೋಡಬೇಕಾದ ಅಗತ್ಯವಿಲ್ಲ. ತಿಂತಿಣಿ ಮೋನಪ್ಪ, ಬಂದೇನವಾಜ ಮೊದಲಾದವರನ್ನು ನಮ್ಮ ನಾಡಿನ ಸಾಮಾನ್ಯ ಜನ ಬಲ್ಲರು. ಇತಿಹಾಸಕ್ಕೆ ಇತಿಹಾಸಕಾರರಿಗೆ, ಸೆಕ್ಯೂಲರ್ ವಾದವನ್ನು ಸಾರಿಸುವ ಸಂಕಾರಕ್ಕೆ ಇಂಥವರಿದ್ದರೆಂಬುದೂ ತಿಳಿದಿಲ್ಲ. ಬಹುಶಃ ಇಂಥ ಅಧ್ಯಯನಗಳ ಜರೂರಿರುವುದು ಮನಸುಗಳ ಮಧ್ಯೆ ಎದ್ದು ನಿಂತಿರುವ ಗೋಡೆಗಳನ್ನು ನೆಲಸಮ ಮಾಡುವುದಕ್ಕೆ, ದೃಷ್ಟಿ, ತಿದ್ದುವುದಕ್ಕೆ ಎಂಬ ಮಾತು ಅತಿಶಯೋಕ್ತಿ ಯಾಗಲಾರದು.

ಸಾಂಸ್ಕೃತಿಕ ಸೃಜನಶೀಲತೆಯ ಕುರಿತೂ ಲೇಖಕರು ಮತ್ತೆ ಮತ್ತೆ ಶೋಧದಲ್ಲಿ ತೊಡಗುತ್ತಾರೆ. ಅಲ್ಲದೇ ಸೂಫಿ ಸಂತರಲ್ಲಿ ಕಂಡುಬರುವ ವ್ಯಕ್ತವಾಗುವ ಸಂದರ್ಭ ಸನ್ನಿವೇಶಗಳತ್ತಲೂ ನಮ್ಮನ್ನು ಕರೆದೊಯ್ಯುತ್ತಾರೆ. " ೧೮, ೧೯ ನೇ ಶತಮಾನಗಳ ಈ ದಖನಿ ಕನ್ನಡ ಅವಧೂತರಿಗೆ ಸೂಫಿ ಪರಂಪರೆಗಿಂದ ನಾಥ ಸಿದ್ಧ ಪರಂಪರೆಯ ಸಂಬಂಧಗಳು ಘನಿಷ್ಠವಾದವು. ಆದರೆ ಇಸ್ಲಾಮ್ ಧರ್ಮದ ಆಚರಣೆ ಪುರಾಣಗಳ ಮೂಲಕವೇ ಈ ಸಂಬಂಧಗಳು ಹಾಯುತ್ತಿದ್ದವು. ಲಾ ಇಲಾಹ ಇಲ್ಲಲ್ಲಾಹ (ದೇವರೊಬ್ಬನೇ ಬೇರೆ ದೇವರಿಲ್ಲ) ಎಂಬ ಇಸ್ಲಾಮಿನ ಮೂಲ ಮಂತ್ರವನ್ನು ಹಸನಸಾಬನು ಅಲ್ಲಲ್ಲಾ ಇಲ್ಲಿಲ್ಲಾ ಶಿವನಲ್ಲಿಲ್ಲ."

ಶಿವನೆಲ್ಲಿಲ್ಲಾ ಎಂದು ಮುರಿದು ಕಟ್ಟುವುದನ್ನು ಗಮನನಿಸಬೇಕು. ಶಿಶುನಾಳನಲ್ಲಿ ಇಸ್ಲಾಮಿ ಪುರಾಣದ ನೆನಪು ತುಂಬ ದಟ್ಟವಾಗಿ ಬರುತ್ತದೆ. ರಾಮಾಯಣ, ಆದರಲ್ಲಿಯೂ ಮೊಹರಂ ಪುರಾಣದ ಮಹಾಭಾರತಗಳ ಮಿಥ್‌ಗಳೊಂದಿಗೆ ಇಸ್ಲಾಮಿ ಪುರಾಣವನ್ನು ಸಲೀಸಾಗಿ ಕಲಸುತ್ತಾ ಬೆಡಗಿನ ರೂಪಕಗಳನ್ನು ನಿರ್ಮಿಸುವ ಶಿಶುನಾಳನ ಕೌಶಲ ಕರ್ನಾಟಕ ಸಂಸ್ಕೃತಿಯ ವಿಸ್ಮಯಗಳಲ್ಲಿ ಒಂದು. ಹಲವು ಪರಂಪರೆಗಳ ಜತೆ ಗುದ್ದಾಡಿ ಬಾಷೆಯನ್ನು ತತ್ವವನ್ನು, ಪುರಾಣ ರೂಪಕವನ್ನು ಪಡೆದು ಕೊಳ್ಳುವುದು. ಅರ್ಥಪೂರ್ಣವಾದ ಸಾಂಸ್ಕೃತಿಕ ಸೃಜನಶೀಲತೆ" ಎಂಬ ನಿಲುವಿಗೆ ತಂದು ನಮ್ಮನ್ನು ನಿಲ್ಲಿಸುತ್ತಾರೆ. ಕೆಲವು ಕಡೆ ಪ್ರಶ್ನೆ ಉಪ ಪ್ರಶ್ನೆಗಳ ನೆತ್ತಿ ಉತ್ತರ ಕಂಡುಕೊಳ್ಳಲು ನಮ್ಮನ್ನೇ ತೊಡಗಿಸುತ್ತಾರೆ. ಮತ್ತೆ ಅಲ್ಲಲ್ಲಿ ಯಥಾಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾರೆ. ಒಂದೆರಡು ಕಡೆ ಹಾಗಾಗಬಾರದಿತ್ತು. ಹೀಗೆ ಮಾಡುವುದು ಸರಿಯಲ್ಲವೆ ? ಎಂಬ ಸಮಕಾಲೀನ ವಿದ್ಯಮಾನಗಳ ಬಗೆಗೆ ಪ್ರತಿಭಟನೆಯೂ ನೇರವಾಗಿ ಮೂಡಿ ಬಂದಿದೆ. ಅಲ್ಲಿ ಖಿನ್ನತೆಯಿದೆ; ಹೀಗಾಗುತ್ತಿದೆಯಲ್ಲಾ ಎಂಬ ಬೇಸರವೂ ವ್ಯಕ್ತವಾಗಿದೆ. ಉದಾಹರಣೆಗೆ ಈ ಕೆಳಗಿನ ಸಾಲುಗಳನ್ನು ಗಮನಿಸಬಹುದು.

"ಶಿಶುನಾಳನು ಕಳೆದ ಹತ್ತುವರ್ಷಗಳಿಂದ ಕನ್ನಡ ಸಾಹಿತ್ಯ , ಸಂಸ್ಕೃತಿಗಳ ಚರ್ಚೆಯಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತಿದ್ದಾನೆ. ಸಿನಿಮಾ, ಕ್ಯಾಸೆಟ್ಟು, ಪುಸ್ತಕಗಳ ಮೂಲಕ ಶಿಶುನಾಳ ಕರ್ನಾಟಕದ ಶೈಕ್ಷಣಿಕ ವಲಯಕ್ಕೆ ಈಗೀಗ ಪರಿಚಿತವಾಗಿರಬಹುದು. ಆದರೆ ಅವನು ಮೂಲತಃ ಗದುಗು ಸೀಮೆಯ ಜನಸಮುದಾಯದಲ್ಲಿ ಬೆರೆತು ಹೋಗಿರುವನು. ಸಮಸ್ಯೆ ಎಂದರೆ "ಮುಸ್ಲಿಮ"ನಾಗಿ ಗೋವಿಂದಭಟ್ಟನಂಥ "ಹಿಂದು" ಗುರುವನ್ನು ಪಡೆದು, ಕನ್ನಡದಲ್ಲಿ ಪದರಚನೆ ಮಾಡಿರುವ ಸಂಗತಿಯು ಸಾಮರಸ್ಯವಾದಿಗಳ ಪಾಲಿಗೆ ಸಲೀಸಾಗಿ ಒದಗಿರುವ ನಿದರ್ಶನವಾಗಿರುವುದು. ಸಂಸ್ಕೃತಿಯ ಸೂಕ್ಷ್ಮಗಳಿರುವ ಸಂಗತಿಯೊಂದು, ಧಾರ್ಮಿಕ ಸಾಮರಸ್ಯಕ್ಕೆ ಬೇಡಿಕೆಯಿರುವ ಈ ದಿನಗಳಲ್ಲಿ, ಮಾರಾಟದ ಸರಕಾಗುವುದಕ್ಕೆ, ಶಿಶುನಾಳನ ಬಳಕೆಯೇ ಸಾಕ್ಷಿ. ಸಾಂಸ್ಕೃತಿಕ ಸೂಕ್ಷ್ಮಸಂಗತಿಯೊಂದು ಮಾರಾಟಕ್ಕೆ ಬಳಕೆಯಾಗುತ್ತಿರುವುದರ ಕುರಿತು ಲೇಖಕರು ವ್ಯಕ್ತಪಡಿಸಿರುವ ಖೇದ ಒಂದು ಹಂತದವರೆಗೆ ನಿಜವಾದರೂ ಇದಕ್ಕೆ ಇನ್ನೊಂದು ಮುಖವಿದೆ ಎಂಬುದನ್ನು ನಾವು ಕಂಡುಕೊಳ್ಳಬೇಕಾಗುತ್ತದೆ. ಶರೀಫ ಬರೇ ರ ಗ್ರ ತ್ರಿ ು d ? ಸೂಫಿಗಳನ್ನು ಸಂತರನ್ನು ಯಾವುದೋ ಒಂದು ಪ್ರಾಂತಕ್ಕೆ ಯಾಕೆ ಕಟ್ಟಿಹಾಕಬೇಕು? ಇಂಥವರೂ ನಮ್ಮ ನಡುವೆ ಆಗಿಹೋಗಿದ್ದರೆಂಬ ಅರಿವಿಲ್ಲದೇ ಹೋದರೆ ಭಾವೀ ಜನಾಂಗ ವಸ್ತುಸ್ಥಿತಿಯೇ ನಂಬುದುರ ಗೊಡವೆ ಇಲ್ಲದ ಪ್ರಕೃತ ಇತಿಹಾಸವನ್ನು ಓದಿ ಗೋವಿಂದ ವೈದ್ಯನಂಥ ಮನೋಭಾವವನ್ನು ತಾಳುವ ಸಾಧ್ಯತೆಗಳಿವೆಯಲ್ಲವೇ.? ಇವತ್ತು ಷರೀಫ, ನಾಳೆ ಸೂಫಿಗಳು, ನಾಡಿದ್ದು ತುರ್ತಾಗಿ ಬೇಕಾಗುವ ಮತ್ತಾರೋ ಮಾರಾಟಕ್ಕೆ ವಸ್ತುಗಳಾದರೆ ಆದರಲ್ಲೇನು ಆಶ್ಚರ್ಯವಿಲ್ಲ. ಇದಕ್ಕೆಲ್ಲ ಕಾರಣ ನಮ್ಮ ರಾಜಕಾರಣಿಗಳು ಮಾಡಿರುವ ನೈತಿಕ ದಿವಾಳಿತನವೇ ಆಗಿದೆ. ಯಾವುದನ್ನೂ ನಾವು

ಗಂಭೀರವಾಗಿ ಪರಿಗಣಿಸದೇ, ಸ್ಪಂದಿಸದೇ ನಿರ್ಲಕ್ಷ್ಯದಿಂದಿರುವಾಗ ಸಾಂಸ್ಕೃತಿಕ ಸಂವೇದನೆ ಎಂಬ ಪರಿಕಲ್ಪನೆಯೂ ಸಹ ಅರ್ಥವನ್ನು ಕಳೆದುಕೊಳ್ಳುತ್ತದೆ. "ಬಹಳಷ್ಟು ಅಧ್ಯಯನ" ಸಂಶೋಧನೆಗಳು ಶೈಕ್ಷಣಿಕ ಅವಶ್ಯಕತೆಯಿಂದ ಹುಟ್ಟಿದವು . ಅವಕ್ಕೆ ಸಾಂಸ್ಕೃತಿ ತುರ್ತುಗಳಿಲ್ಲ." ಎಂಬ ಲೇಖಕರ ಮಾತಿನಲ್ಲಿ ನಿಜಾಂಶವಿದೆ. ಈ ಕುರಿತು ನಾವೆಲ್ಲ ಗಂಭೀರವಾಗಿ ಯೋಚಿಸಬೇಕಾದ ಅಗತ್ಯವಿದೆ.

"ಕರ್ನಾಟಕದ ಸೂಫಿಗಳು" ಕೃತಿ ಶೈಕ್ಷಣಿಕ ಅವಶ್ಯಕತೆಯಿಂದ ಕಣ್ಣು ಬಿಟ್ಟ ಕೂಸಲ್ಲ. ಅನೂಚಾನವಾಗಿ ಸಾಗಿ ಬಂದ ವಸಾಹತುಶಾಹಿ ಚಿಂತನಕ್ರಮಕ್ಕಿಂತ , ಭಿನ್ನವಾಗಿ ಯೋಚಿಸುವ, ಕಾಣುವ, ಮುಗ್ಧತೆ, ಕುತೂಹಲ, ಸಾಧ್ಯಾಸಾಧ್ಯತೆ, ಕಳಕಳಿ, ಚಿಕಿತ್ಸಕ ದೃಷ್ಟಿಕೋನ, ಸ್ಪಷ್ಟತೆ ಮೊದಲಾದ ಅಂಶಗಳನ್ನು ಒಳಗೊಂಡ ಅನನ್ಯ ಸಾಂಸ್ಕೃತಿಕ ಹೊಣೆಗಾರಿಕೆಯನ್ನು ಬಿಂಬಿಸುವ ಕೃತಿಯಿದು. ಇತಿಹಾಸಕಾರರು ಬರೆದ ಚರಿತ್ರೆಗಿಂತ ಜನಸಮುದಾಯಗಳು ಕಟ್ಟಿಕೊಟ್ಟ, ತಲತಲಾಂತರದಿಂದ ಅವರು ಹೊತ್ತು ತಂದ ಚರಿತ್ರೆ ಇಲ್ಲಿ ದಾಖಲಾಗಿದೆ. ಸಾಂಸ್ಕೃತಿಕ ನಿಜಾಂಶವನ್ನು ಕಂಡುಕೊಳ್ಳಲು ಹಪಹಪಿಸುವ ಲೇಖಕರ ಶ್ರದ್ಧೆ ಶ್ರಮ ಸಾರ್ಥಕವಾಗಿದೆ. ಇಲ್ಲಿರುವುದು ಬರೇ ಸಮಕಾಲೀನ ಸಮುದಾಯಗಳ ಸೃಜನಶೀಲ ಹುಡುಕಾಟ ಮಾತ್ರವಲ್ಲ, ಸಾಂಗತ್ಯ ವಿರುವ ಸೃಜನಶೀಲ ಅಧ್ಯಯನವೂ ಅರ್ಥಪೂರ್ಣವಾಗಿ ಪಡಿಮೂಡಿದೆ. ಇಂದು ನಿಜವಾಗಿ ನಡೆಯಬೇಕಾದ ಅಧ್ಯಯನಕ್ಕೊಂದು ಮಾರ್ಗವನ್ನು ಲೇಖಕರಿಲ್ಲಿ ಹಾಕಿಕೊಟ್ಟಿದ್ದಾರೆ.

ವರಾಹ

ಡಿ.ಬಿ. ರಾಮಚಂದ್ರಾಚಾರ್

ಭಗವಂತ ಭಾರತದಲ್ಲಿ ಹತ್ತು ಸಲ ಅವತರಿಸಿ, ಈ ದೇಶದ ಪರಮ ಸೋಮಾರಿಗಳಾದ ಪ್ರಜಾಕೋಟಿಯನ್ನು ತಿದ್ದಲು, ಯತ್ನಿಸಿ ಸೋತು ಸುಣ್ಣವಾದ ಸಂಗತಿ ಅಬಾಲ ವೃದ್ಧರಿಗೂ ಪರಿಚಿತವಾಗಿರುವುದೇ ಈ ದೇಶದ ಜನ ತಮಗಾಗಿ ದೇವರು ಪದೇ ಪದೇ ಅವತರಿಸುವುದನ್ನು ಕಂಡು, ಉಳಿದ ದೇಶದವರಂತೆ ಮೈ ಮುರಿದು ದುಡಿಯುವುದು ಪೆದ್ದುತನವೆಂದು ಭಾವಿಸಿ ಹಗಲು - ರಾತ್ರಿ ಭಗವನ್ನಾಮ ಸಂಕೀರ್ತನೆ ಎಂಬ ಅತ್ಯಂತ ಸಲಭವೂ, ನಿದ್ರಾಭೋಗ ಮಾರ್ಗವೂ ಆದ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡು ಮಗು ಅತ್ತು ಅಮ್ಮನ ಗಮನ ಸೆಳೆಯುವಂತೆ ತಮ್ಮ ಆದ್ರ್ರ ಸ್ವರವನ್ನು ತಾರಕಕ್ಕೇರಿಸಿ, ಭಗವಂತನನ್ನು ಭೂಮಿಗಿಳಿಸಲು ಯತ್ನಿಸುತ್ತಿರುವುದನ್ನು ತಾವೆಲ್ಲ ಬಲ್ಲಿರಿ.

ಭಾರತದ ಬಡ ಜನರ ಗೋಳಿನ ಧ್ವನಿಗೆ ವೈಕುಂಠದಲ್ಲಿ ನಿದ್ರೆ ಬಾರದೆ ಮಹಾವಿಷ್ಣು ತಾನೇ ಸ್ವತಃ ಕೊಲವೊಮ್ಮೆ ತನ್ನ ಅಂಶ ಶಕ್ತಿಗಳಿಂದ ಜನ ಸಹಾಯಾರ್ಥ ಅವತರಿಸಿರುವುದಲ್ಲದೆ ಈ ದೇಶದ ಜನ ಸಿಕ್ಕಿ ಸಿಕ್ಕಿದ ಕಡೆ ನಿರ್ಮಿಸಿರುವ ದೇವಸ್ಥಾನಗಳೆಂಬ 'ರೆಸ್ಟ್‌ಹೌಸ್' ಗಳಲ್ಲೂ ತಂಗಿ ಈ ಜನರ ಅವಹಾಲುಗಳನ್ನು ಸ್ವೀಕರಿಸುತ್ತಾ ತನ್ನ ಬೇಸರವನ್ನು ಕಳೆದುಕೊಳ್ಳುತ್ತಿದ್ದಾನೆ. ಹೀಗೆ ಭಾರತದವರಿಗಾಗಿ ಭಗವಂತ ಖುದ್ದಾಗಿ ಅವತರಿಸಿದ ಅವತಾರಗಳಲ್ಲಿ ಒಂದು , ವರಾಹ ಅವತಾರ.

ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪು ಎಂಬ ಅದ್ವಿತೀಯ ಸಾಮರ್ಥ್ಯ ಶಾಲಿಗಳಾದ ಸಹೋದರರು ಇದ್ದ ಕಾಲದಲ್ಲಿ, ದೇವತೆಗಳು ಎಂದೆನಿಸಿಕೊಳ್ಳುತ್ತಿದ್ದವರು ಚಡ್ಡಿಯಲ್ಲಿಯೇ 'ಒಂದಾ' ಮಾಡಿಕೊಳ್ಳುವ ಮಕ್ಕಳಂತೆ ಇದ್ದರು.

ಹಿರಣ್ಯಾಕ್ಷ, ಅಮೆರಿಕಾದ 'ರಕ್‌ಬಿ' ಗಳಂತೆ ಭೂಮಿಯನ್ನು ಕೊರಕುಳಲ್ಲಿ ಇಟ್ಟುಕೊಂಡು ಪಾತಾಳಕ್ಕೆ ಹೊರಟು ಹೋದನಂತೆ! ಅಹಾ! ಎಂಥ್ಯ ದಿವ್ಯ ಸಾಹಸ,

ಆ ಹಿರಣ್ಯಾಕ್ಷನ ಶಕ್ತಿ ಎಷ್ಟಿರಬಹುದು.

ಆತನ ಆಕಾರ ಹೇಗಿದ್ದಿರಬಹುದು.

ಭೂಮಿಯನ್ನು ಅವುಚಿ ಹಿಡಿದ ಅವನ ಕೊಂಕಳ 'ವ್ಯಾಸ' ಎಷ್ಟಿರಬಹುದು?

ಅಂದಹಾಗೆ ಅವನು ಭೂಮಿಯನ್ನು ಎಡಕೊಂಕಳಲ್ಲಿ ಅವುಚಿಕೊಂಡನೆ ಅಥವಾ ಬಲಕೊಂಕಳಲ್ಲಿ ಅವುಚಿಕೊಂಡನೆ ?

ಆತನ ಗಾತ್ರ ತೂಕ ಎತ್ತರಗಳ ಬಗ್ಗೆ ಮನಸ್ಸು ಕಲ್ಪಿಸಿಕೊಳ್ಳಲು ಯತ್ನಿಸಿ ಸೋಲುತ್ತದೆ.

ಆಗ 'ಚುಲ್ಬಾ' ದೇವತೆಗಳೆಲ್ಲಾ ಮಾಮೂಲಿನಂತೆ ಬ್ರಹ್ಮನ ಬಳಿ ಹೋಗಿ ಗೋಗೆರೆದರು.

ಮನುಷ್ಯ ಲೋಕದಲ್ಲಿನ ಋಷಿ ಮುನಿಗಳೆಂಬ ತಮ್ಮ ಚಮಚಾಗಳು ಕಾಲ - ಕಾಲಕ್ಕೆ ಹವಿಸ್ಸು, ಸೋಮ, ಬಲಿಗಳನ್ನು ಸಂದಾಯ ಮಾಡುತ್ತಿದ್ದರು.

ಈಗ ಅದೆಲ್ಲಾ 'ಏಕ್‌ದಂ' ನಿಂತುಹೋಗಿದೆ.

ಉಪ್ಪು ಖಾರವಿಲ್ಲದ ಅಮೃತವನ್ನು ಕುಡಿದೂ, ಕುಡಿದೂ, ನಾಲಗೆ ಇದ್ದರೂ ಸತ್ತಂತೆ ಆಗಿದೆ.ಮನುಷ್ಯರ ಮೈ ಬೆವರಿನ ಸುವಾಸನೆ ಇಲ್ಲದೆ ನಮ್ಮ ಕಾಮ ಕೆರಳುವುದಿಲ್ಲ.

ಈಗ ಹೋಮದ ಧೂಮವೂ ಇಲ್ಲ, ಅತ್ತ ಕಾಮದಾಟವೂ ಇಲ್ಲ, ಇತ್ತ ಬೇಟೆ ಮತ್ತು ಬೇಟೆ ಯಿಲ್ಲದೆ ಹೊತ್ತೇ ಹೋಗುತ್ತಿಲ್ಲ.

ದಿನ ನಿತ್ಯ ಮನುಷ್ಯರು ನಮ್ಮನ್ನು ಪ್ರಾರ್ಥಿಸುತ್ತಾ , ವ್ರತ , ಉಪವಾಸಗಳನ್ನು ಮಾಡುತ್ತಾ, ಅದು ಬೇಕು, ಇದು ಬೇಕು ಎಂದು ಕೇಳುತ್ತಾ ಇರುವಾಗ ನಮಗೂ ಒಂದು ದೌಲತ್ತು , ಗೌರವ , ಘನತೆ, ಬೇಡುವವರೇ ಇಲ್ಲದಿದ್ದರೆ ನಮ್ಮ ಐಶ್ವರ್ಯಕ್ಕಾದರೂ ಏನು ಬೆಲೆ.

ಈ ಹಾಳು ಹಿರಣ್ಯಾಕ್ಷ ನಮ್ಮ ಮೇಲೆ ಯುದ್ಧಕ್ಕೆ ಬರಲಿಲ್ಲ.

ನಮ್ಮನ್ನು ನಿರಾಶ್ರಿತರನ್ನಾಗಿಸಲಿಲ್ಲ.

ನಮ್ಮ ಹೆಂಗಸರನ್ನು ಕದ್ದು ಅಥವಾ ಗೆದ್ದು ಒಯ್ಯಲಿಲ್ಲ.

ಸ್ವರ್ಗದ ಸಂಪತ್ತನ್ನು ಲೂಟಿ ಮಾಡಲಿಲ್ಲ.

ಆದರೆ ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ಅಹಂಕಾರದ ಮೂಲಕ್ಕೇ ಕೊಡಲಿ ಹಾಕಿದ್ದಾನೆ. ನಮ್ಮ ಆಶ್ರಯದಲ್ಲಿಯೇ ಬದುಕಿ ಬಾಳುತ್ತಿದ್ದ ಭೂದೇವಿ ಈಗ ಆ ರಾಕ್ಷಸನ ಕೊಂಕಳಲ್ಲಿ ಸಿಕ್ಕಿಬಿಟ್ಟಿದ್ದಾಳೆ. ಅವಳನ್ನು ರಕ್ಷಿಸದೇ ಅವನ ವಶದಲ್ಲಿಯೇ ಬಿಟ್ಟು ಬಿಟ್ಟರೆ, ಅವಳು ನಮ್ಮ 'ಡೂಪ್ಲಿಕೇಟ್' ಸೆಂಟನ್ನು ತಿರಸ್ಕರಿಸಿ, ಅವನ 'ಒರಿಜಿನಲ್ ಸೆಂಟಿಗೆ' ಮಾತ್ರವಲ್ಲ, ಮೈ ಮುದುಡುವಂತೆ ಆ ಮೂಲಕ ಜುಮ್ ಜುಮ್ ಎನ್ನುವಂತೆ ಅಪ್ಪುಗೆಯ ಸುಖವನ್ನು ನೀಡುತ್ತಿರುವ ಅವನ ಬಲಕ್ಕೆ ಆಕರ್ಷಿತಳಾಗಿ, ನಮ್ಮನ್ನು ಸಂಪೂರ್ಣ ತಿರಸ್ಕರಿಸಿಬಿಡುವ ಭಯಂಕರ ಸಾಧ್ಯತೆಗಳಿವೆ.

ಓ. ಮಹಾಪ್ರಭು, ಕರುಣೆ ತೋರು, ಸ್ವಲ್ಪ ಆಲೋಚಿಸು.

ನಮಗೋಸ್ಕರ ಸ್ವಲ್ಪ ಸರಸ್ವತಿಯ ಬಾಹುಗಳಿಂದ ಬಿಡಿಸಿಕೊ.

ಅವಳು ನಿನ್ನ ಮೂರು ವದನಗಳ ಆರು ತುಟಿಗಳನ್ನು ಸದಾ ಚುಂಬಿಸುತ್ತಲೇ ಇರಲಿ.

ಒಂದು ಮುಖವನ್ನಾದರೂ ಇತ್ತ ತಿರುಗಿಸಿ, ನಮ್ಮ ಕಷ್ಟ ಸುಖಗಳನ್ನು ವಿಚಾರಿಸಬೇಡವೇ ಪ್ರಭು.

ಇದು ಎಂಥ ಅನ್ಯಾಯ.

ನಮ್ಮ ಕಾಮ ಕೆರಳದೆ, ನಾವೆಲ್ಲ ನಪುಂಸಕರಂತೆ ಆಗಿಹೋಗಿರುವಾಗ, ನೀನೊಬ್ಬನೇ ಸರಸ್ವತಿಯೊಡನೆ ರತಿಯಲ್ಲಿ ತೊಡಗಿರುವುದು ಅತಿಯಾಯಿತು.

ಇದು ನ್ಯಾಯವೇ?

ಇದು ಸಂಪೂರ್ಣ 'ಕ್ಯಾಪಿಟಲಿಸ್ಟ' ಟೆಂಡೆನ್ಸಿ ಯಲ್ಲವೇ?

ಎಂದು ಕೋಪ, ವ್ಯಂಗ್ಯ ದೈನ್ಯಗಳ ಸಂಮಿಶ್ರವಾದ ಧ್ವನಿಯಲ್ಲಿ , ಬ್ರಹ್ಮನ ಅರಮನೆಯ ಅಂಗಳದಲ್ಲಿ 'ಘೇರಾಯಿಸಿ' ಬೊಬ್ಬೆ ಹಾಕಿದಾಗ 'ವ್ಯಾಟಿಕನ್' ನಲ್ಲಿ 'ಪೋಪರು' 'ಬಾಲ್ಕನಿ'ಯಲ್ಲಿ ಕಾಣಿಸಿಕೊಂಡು ಭಕ್ತರಿಗೆ ದರ್ಶನಕೊಡುವಂತೆ.

ಬ್ರಹ್ಮ ತನ್ನ ಪದ್ಮ ಸದನದ 'ಬಾಲ್ಕನಿ'ಯಲ್ಲಿ ಕಾಣಿಸಿಕೊಂಡ.

ತಕ್ಷಣ ದೇವತೆಗಳ ಗಲಭೆ ಅಡಗಿತು.

ತಲೆಗಳು ಗೌರವದಿಂದ, ಭಕ್ತಿಯಿಂದ ಬಾಗಿದವು.

ಬ್ರಹ್ಮ ಮುಖ ಗಂಟಿಕ್ಕಿ, ಸ್ವಲ್ಪ ಏರಿದ ಧ್ವನಿಯಲ್ಲಿ ಉವಾಚಿಸಿದ.

ಓ ದೇವತೆಗಳೇ,

ನಿಮ್ಮ ಕಷ್ಟಕ್ಕೆ ನಾನು ಕಾರಣನಲ್ಲ.

ನನಗೇಕೆ ನೀವು ಪದೇ ಪದೇ ತೊಂದರೆ ಕೊಡುತ್ತೀರಿ.

ನಾನು ಶುದ್ಧ ಆರ್ಯ.

ಅನಾರ್ಯರ ಗೊಡವೆಯೇ ಬೇಡವೆಂದು, ಯಾರೂ ಬರಲಾಗದ ಇಲ್ಲಿ ಮನೆ ಮಾಡಿ, ನನ್ನ ಪಾಡಿಗೆ ನಾನು ಸೃಷ್ಟಿ ಕ್ರಿಯೆಯಲ್ಲಿದ್ದರೂ ನೀವುಗಳು ಪದೇ ಪದೇ ಘೇರಾಯಿಸಿ ನನ್ನ ಏಕಾಂತಕ್ಕೆ ಭಂಗ ತರುವುದು ಸರಿಯಲ್ಲ. ನೀವುಗಳು ದೇವರೆಂದು ಪೂಜಿಸುವ ರುದ್ರ, ತನ್ನ ಅನಾರ್ಯ 'ಪ್ರೊಜೆನಿ' ಗೆ ತಕ್ಕಂತೆ, ಪಕ್ಕಾ ಅನಾರ್ಯರಾದ ರಾಕ್ಷಸರಿಗೆ ಸದಾ ವರ ಕೊಟ್ಟು, ಕೊಟ್ಟು ಕೊಬ್ಬಿಸಿಬಿಡುತ್ತಾನೆ. ನಿಮಗೆಲ್ಲಾ ಗೊತ್ತಿರುವಂತೆ ಅವನು ಬ್ರಹ್ಮಲೋಕಕ್ಕೆ 'ವಿಸಿಟ್'

ಕೊಡುವುದಿಲ್ಲ. ಯಾವುದಕ್ಕೂ ನಮ್ಮನ್ನು 'ಕನ್‌ಸಲ್ಟ್' ಮಾಡುವುದಿಲ್ಲ. ಅವನು 'ಬೈ ಬರ್ತ್'ಅರೋಗೆಂಟ್ ಇವೆಲ್ಲಾ ನಿಮ್ಮ ಹತ್ತಿರ ಹೇಳೋಮಾತಲ್ಲ.

'ಇಟಿಸ್ ಆಲ್ ಅವರ್ ಇನ್‌ಟರ್‌ನಲ್ ಪ್ರಾಬ್ಲಮ್ಸ್.'

ಆದ್ದರಿಂದ ನೀವೆಲ್ಲಾ ರುದ್ರನ ಬಳಿಗೆ ಹೋಗಿ ಎಂದು ಸುಮ್ಮನಾದ.

ಆಗ ದೇವತೆಗಳ ಮುಂದಾಳುವಾದ ದೇವೇಂದ್ರನೆಂಬ 'ಕ್ಲಿಂಟನ್' ಕಡಿತ, ದ ಕಚ್ಚೆ ಹರುಕ ಪಟೇಲ ಮುಂದೆ ಬಂದು, ಬ್ರಹ್ಮನಿಗೆ ಮುಜುರೆ ಸಲ್ಲಿಸಿ ಬಿನ್ನವಿಸಿಕೊಂಡ.

ಖಾವಂದಿರು ಸಿಟ್ಟುಮಾಡದೆ ಪರಾಂಭರಿಸಬೇಕು.

ನೀವು ಹೇಳಿದ್ದೆಲ್ಲಾ ಸತ್ಯ.

ತಾವು ಸತ್ಯಲೋಕದ ಸ್ವಾಮಿ.

ರುದ್ರನ ಬಳಿ ಹೋಗಿ ಎಂದು ನಮ್ಮನ್ನು ದಯವಿಟ್ಟು ಅಟ್ಟಬೇಡಿ

ಈಗಾಗಲೇ ನಿಮ್ಮ ಖಾಸಾ ಪುತ್ರ ಮನ್ಮಥ, ನಮ್ಮ ಪರವಾಗಿ ಆತನ ಬಳಿಗೆ ಹೋಗಿ ಸುಟ್ಟು ಬೂದಿಯಾಗಿದ್ದಾನೆ.

ತಮ್ಮ ಮತ್ತೊಬ್ಬ ಪುತ್ರ ದಕ್ಷ ಬ್ರಹ್ಮನಿಗೆ ಆತ ನೀಡಿದ ಶಿಕ್ಷೆಯನ್ನು ನೆನಪಿಸಿಕೊಳ್ಳಿ ಪ್ರಭು. ನಾವೆಲ್ಲಾ ನಿಮ್ಮ ಕಡೆಯವರು.

ದಕ್ಷ ಬ್ರಹ್ಮನ ಯಜ್ಞದಲ್ಲಿ ಭಾಗವಹಿಸಿದ್ದವರು ಎಂಬುದನ್ನು ಆತ ಮರೆತಿರಲಾರ.

ಅಷ್ಟೇಕೆ ? ಮಹಾ ಪ್ರಭುಗಳ ಐದನೆ ಶಿರವನ್ನು ಕತ್ತರಿಸಿ, ಅದನ್ನು ಸದಾ ನೆನಪಿನ ವಸ್ತುವನ್ನಾಗಿ , ತನ್ನ ಅಮೋಘ ಪರಾಕ್ರಮದ ಗುರುತಿಗಾಗಿ ಕೈಯಲ್ಲಿಯೇ ಯಾವಾಗಲೂ ಹಿಡಿದಿರುತ್ತಾನೆ. ಆರ್ಯರು ಯಾವಾಗಲೂ ನಾಜೂಕು.

ಅನಾರ್ಯರು ಒರಟರು.

ಅವನು ಸಮಯ ಸಿಕ್ಕಿದಾಗಲೆಲ್ಲಾ ಬೆಂಕಿಯ ಕಣ್ಣನ್ನು ತೆರೆಯಲು ಸಿದ್ಧನಾಗಿಯೇ ಇರುತ್ತಾನೆ.

ಓ ಪ್ರಭು,

ನೀವೇ ನಮ್ಮ ದಿಕ್ಕು.

ನೀವೇ ನಮ್ಮ ರಕ್ಷಣೆ.

ನಿಮ್ಮನ್ನೇ 'ಕೇರ್' ಮಾಡದ ರುದ್ರ ನಮ್ಮನ್ನು 'ಕೇರ್' ಮಾಡ್ತಾನೆಯೇ. ನೀವೆ ಯೋಚಿಸಿ ತಂದೆ.

ಎಂದು ಹೇಳುತ್ತಿರುವಾಗಲೇ ದುಃಖ ಒತ್ತಿಬಂದು ಗಳಗಳನೆ ಅಳಲು ಶುರುಮಾಡಿದ. ಶಚಿಯೂ

ಪತಿಯನ್ನು ಅನುಸರಿಸಿ, ತನ್ನ ಸೀರೆಯ ಸೆರಗಿನಿಂದ ಕಣ್ಣು ಮೂಗುಗಳನ್ನು ಒರೆಸಿಕೊಳ್ಳುತ್ತಿರುವಾಗಲೇ

ತಮಿಳರು ಚಾವುಪಾಟ್ ಹಾಡುತ್ತಲೇ ಸಾಮೂಹಿಕವಾಗಿ ಆಕ್ರಂದನ ಮಾಡುವಂತೆ, ಅಲ್ಲಿ ನೆರೆದಿದ್ದ ಸಮಸ್ತ ಪುಲ್ಲಿಂಗ ದೇವತೆಗಳು, ಹಾಗೂ ಅವರವರ ಸ್ತ್ರೀಲಿಂಗಗಳು. ಸಮೂಹ ರೋದನಕ್ಕೆ ತೊಡಗಿಯೇ ಬಿಟ್ಟರು.

ಅವರ ಕರುಳು ಕಲಕುವ ಆ ವಿಕಾರ ಶಬ್ದಕ್ಕೆ ಬ್ರಹ್ಮನ ಹಂಸ, ಸರಸ್ವತಿಯ ನವಿಲು ಹಾಗೂ ಅವುಗಳ ಸಂತಾನಗಳೆಲ್ಲಾ ದಿಕ್ಕೆಟ್ಟು ಓಡಲು - ಹಾರಲು ಯತ್ನಿಸಿ ರೆಕ್ಕೆ ಪುಕ್ಕಗಳನ್ನು ತರಿದುಕೊಂಡು ಅವೂ ದೇವತೆಗಳ ವಿಕಾರ ಧ್ವನಿಯೊಡನೆ ತಮ್ಮ ಧ್ವನಿಯನ್ನು ಸೇರಿಸಿದವು.

ಪದ್ಮಸದನದ ಅಂಗಳವೆಲ್ಲಾ ರೋಧನ ಸರೋವರವಾದುದನ್ನು ಕಂಡು ಬ್ರಹ್ಮ ದೇವನಿಗೂ ಅಳು ಬರುವಂತೆ ಆಯಿತು.

ಛೇ, ಈಗ ನಾನೇನು ಮಾಡಲಿ?

ನನ್ನ ಬ್ರಹ್ಮ ದಂಡದ ವಿನಃ ಉಳಿದಾವ ಅಂಗಾಂಗಗಳೂ ಅಪಾಯದಲ್ಲಿ ಕೆಲಸ ಮಾಡುವ ಸ್ಥಿತಿಯಲ್ಲಿಲ್ಲವಲ್ಲ ಎಂದು ಚಿಂತಾಕ್ರಾಂತನಾಗಿ

ಬೆಪ್ಪನಂತೆ ಬೊಮ್ಮ ನಿಂತಿರುವಾಗ....

ತಮ್ಮ ಏಕಾಂತಕ್ಕೆ ಉಂಟಾದ ತೊಂದರೆಗೆ ಸಿಡಿಮಿಗೊಳ್ಳುತ್ತಾ ಸರಸ್ವತಿ , ಗಂಡ ಮತ್ತು ತಂದೆಯ 'ಡಬ್ಬಲ್ ರೋಲ್' ನ ತನ್ನ ಪುರುಷನನ್ನು ಸ್ವಲ್ಪ ಒಳಗೆ ಬನ್ನಿ ಎಂದು ಕರೆದು ನೀವು ದೇವತೆಗಳ ಮತ್ತು ರುದ್ರನ ನಡುವೆ ಸಿಕ್ಕಿಕೊಂಡು ಭೂಲೋಕದ 'ಕೆ. ಎಸ್. ಆರ್. ಟಿ.ಸಿ.' ವಾಹನದಡಿ ಸಿಕ್ಕಿಕೊಂಡ ಅನಾಥ ಶುನಕದಂತೆ ಆಗಿಬಿಡಬೇಡಿ ಎಂದು ಸಮಯೋಚಿತ ಸಲಹೆ ನೀಡಿ, ಈ ನಿದ್ರಾಗೇಡಿಗಳನ್ನು ನಮ್ಮ ತಾತ ಉರೂಫ್ ನನ್ನ ಮಾವ ನಿಮ್ಮ ತಂದೆಯ ಬಳಿಗೆ ಸಾಗು ಹಾಕಿ.

ನಮ್ಮ ತಾತ ಇಂತಹ ವಿಚಾರಗಳಲ್ಲೆಲ್ಲಾ ಕಿಲಾಡಿ.

ನಿಮ್ಮ 'ಬ್ರೈನು' ನಾಲ್ಕು ತಲೆಗಳಲ್ಲಿ ಹಂಚಿ ಹೋಗಿರುವುದರಿಂದ ಭೂಲೋಕದ 'ಟ್ಯೂಬ್ ಲೈಟಿನ' ತರಹ ನಿಮ್ಮ ನಿರ್ಧಾರ, ಉಪಾಯಗಳೆಲ್ಲಾ ಬಲು ನಿಧಾನ ಎಂದು ಕಿವಿಕಚ್ಚಿದ ಮೇಲೆ ಬೊಮ್ಮ ಮತ್ತೆ ಬಾಲ್‌ಕನಿಯಲ್ಲಿ ಕಾಣಿಸಿಕೊಂಡ.

ಬ್ರಹ್ಮನ ವದನಾರವಿಂದದಲ್ಲಿ ಅರಳಿದ್ದ ಕಿರುನಗೆಯ ಬೆಳದಿಂಗಳು, ಕೆನ್ನೆಯ ಮೇಲೆ ಹಸಿ ಹಸಿ ಯಾಗಿ ಮೂಡಿದ್ದ ಹೊಸ 'ಲಿಪ್‌ಸ್ಟಿಕ್' ನ ಹಳೆಯ ತುಟಿಗಳ ಗುರುತುಗಳನ್ನು ಕಂಡು ದೇವತೆಗಳೆಲ್ಲಾ ಹರ್ಷೋದ್ಗಾರ ಮಾಡಿದರು.

ಬ್ರಹ್ಮ ಗತ್ತಿನಿಂದ ಎಲ್ಲಾ ದೇವತೆಗಳ ಮೇಲೆ ತನ್ನ ಕಟಾಕ್ಷವನ್ನು ಚೆಲ್ಲಿ

ದೇವೇಂದ್ರ ಆದಿಯಾಗಿ ಎಲ್ಲಾ ದೇವತೆಗಳೇ ಕೇಳಿ,

'ಅಫೀಷಿಯಲ್ ಸೀಕ್ರೆಟ್ ಆ್ಯಕ್ಟ್' ನ ಪ್ರತಿಜ್ಞೆಯನ್ನು ಮುರಿದು ನಿಮಗೊಂದು ಗುಟ್ಟು ಹೇಳ್ತಾ ಇದ್ದೇನೆ ಎಂದಾಗ

ದೇವತೆಗಳೆಲ್ಲಾ ಬಿಟ್ಟ ಬಾಯಿ ಬಿಟ್ಟ ಕಣ್ಣುಳ್ಳವರಾಗಿ ಬ್ರಹ್ಮನನ್ನೇ ವೀಕ್ಷಿಸುತ್ತಾ ನಿಂತರು.

ಅತಲ ವಿತಲ ರಸಾತಲ ಪಾತಾಳದ ಪದಿನಾಲ್ಕು ಲೋಕಗಳಲ್ಲಿ ಈಗ ಹುಟ್ಟಿರುವ ಯಾವ ಜೀವದಿಂದಲಾಗಲಿ, ಈಗ ಸೃಷ್ಟಿಗೊಂಡಿರುವ ಯಾವ ಆಯುಧದಿಂದಾಗಲಿ, ಹಿರಣ್ಯಾಕ್ಷನಿಗೆ ಮರಣ ಬಾರದಂತೆ ರುದ್ರ ವರ ನೀಡಿದ್ದಾನೆ.

'ಸೋ ಐ ಕಾಂಟ್ ಹೆಲ್ಪ್ ಯು' ಎಂದು ಬ್ರಹ್ಮ ಸುಮ್ಮನಾದ. ದೇವತೆಗಳೆಲ್ಲಾ ಮುಹೂರ್ತಕಾಲ ಗರ ಬಡಿದವರಂತೆ ಚೇತೋವಿಹೀನರಾಗಿ ಮತ್ತೆ ಸಮೂಹ ರೋದನಕ್ಕೆ ಮೊದಲಿಟ್ಟರು. ಅಮಂಗಳಕರವಾದ ದೇವತೆಗಳ ರೋದನ ಬ್ರಹ್ಮನ ನರಮಂಡಲದ ಮೇಲೆ ತೀವ್ರ ಪರಿಣಾಮವುಂಟು ಮಾಡುತ್ತಾ ಇರಲು, ಒಳಗೆ ಸರಸ್ವತಿಯ ಸಿಡಿಮಿಯೂ ಹೆಚ್ಚಿತು.

ಬ್ರಹ್ಮನಿಗೆ ಮಾತ್ರ ಕಾಣುವಂತೆ, ದೇವತೆಗಳನ್ನು ಸಾಗುಹಾಕುವಂತೆ ಸನ್ನೆ ಮಾಡತೊಡಗಿದಳು.

ಆಗ ಮೊದಲ ಬಾರಿಗೆ ಬ್ರಹ್ಮನ ಮನಸ್ಸಿಗೆ ಆಯಾಸದ ಅರಿವಾಗಲು ಪ್ರಾರಂಭವಾಯಿತು. ನಾಲ್ಕು ರುಂಡ, ಒಂದು ಮುಂಡ ಇರುವುದರ ಬದಲು, ಒಂದೊಂದು ಮುಂಡಕ್ಕೆ ಒಂದೊಂದು ರುಂಡ ಇದ್ದಿದ್ದರೆ, ಒಂದು ರುಂಡ ಪ್ಲಸ್ ಮುಂಡವನ್ನು ಸದಾ ಸರಸ್ವತಿಯ ಹತ್ತಿರ ಸರದಿ ಪ್ರಕಾರ ಬಿಟ್ಟಿರುತ್ತಾ, ಉಳಿದ ಮೂರು 'ರುಮು'ಗಳಿಗೆ ಕೊಂಚವಾದರೂ, ರೆಸ್ಟ್ ಸಿಗುತ್ತಿತ್ತು. ಅಥವಾ ಮುಂಡ ವಿಭಿನ್ನಗೊಂಡಿದ್ದರೆ ಬ್ರಹ್ಮದಂಡದ ಸಾಮರ್ಥ್ಯವೇ ಕ್ಷೀಣಿಸಿ ಹೋಗುತ್ತಿತ್ತೋ. ಇತ್ಯಾದಿ ಇತ್ಯಾದಿ ಆಲೋಚನೆ ಪುಂಖಾನುಪುಂಖವಾಗಿ ಬೆಳೆಯುತ್ತಿರುವಾಗಲೇ

ದೇವೇಂದ್ರ ತನ್ನ ಅಳುವನ್ನು ತಹಬಂದಿಗೆ ತಂದುಕೊಂಡು , ಮೂಗನ್ನು ಶಚಿಯ ಸೆರಗಿನಲ್ಲಿ ಹಿಂಡಿ ಶುದ್ಧ ಗೊಳಿಸಿಕೊಂಡು, ಗದ್ಗದವಾಗಿದ್ದ ಗಂಟಲನ್ನು ಕ್ಯಾಕರಿಸಿ , ಪದ್ಮಸದನದ ಮಣಿಯ ಅಂಗಳದಲ್ಲಿ ತೊಂಡೆಯನ್ನು ಉಗಿಯಲಾರದೆ, ಸಿಂಗಪುರದಲ್ಲಿ ಕಳವಳಗೊಳ್ಳುವ ಭಾರತೀಯನಂತೆ ತೊಳಲಿ ಕಡೆಗೆ ತೊಂಡೆಯನ್ನು ಹಾಗೆಯೇ ನುಂಗಿಕೊಂಡು ಮತ್ತೊಮ್ಮೆ ಬೊಮ್ಮನನ್ನು ಉದ್ದೇಶಿಸಿ ಮಾತನಾಡಲು ತೊಡಗಿದ.

ಪ್ರಭು-

ನನ್ನ ವಜ್ರಾಯುಧವನ್ನು ಎಲ್ಲಾ ಆಯುಧಗಳಿಗಿಂತ ಶ್ರೇಷ್ಠ ಅಂತ ಅನ್ನುತ್ತಾರಲ್ಲಾ ತಂದೆ. ಆದರಿಂದ ಆ ಹಿರಣ್ಯಾಕ್ಷನನ್ನು ಕೊಲ್ಲಲು ಆಗದಿದ್ದರೂ , ಕೆಲವು ಕಾಲ ಅತ್ತಿತ್ತ ಜರುಗದಂತೆ ಒಂದು 'ಮೇಜರ್ ಫ್ರಾಕ್ಚರ್' ನನ್ನಾದರೂ ಮಾಡಲು ಸಾಧ್ಯವಿಲ್ಲವೇ.

ತಮ್ಮ ಭಾಷಣದ ಮಧ್ಯೆ ಪ್ರಶ್ನೆ ಕೇಳಲು ಎದ್ದ ವಿದ್ಯಾರ್ಥಿಯನ್ನು ಕಂಡು ಪ್ರಾಧ್ಯಾಪಕರು ಕೆಂಡ ಕಾರುವಂತೆ, ತನ್ನ 'ಪರ್ಸನಲ್ ಪ್ರಾಬ್ಲಮ್' ಬಗ್ಗೆ ಆಲೋಚಿಸುತ್ತಿರುವಾಗ ಅದಕ್ಕೆ ತಡೆಯೊಡ್ಡಿದ ದೇವೇಂದ್ರನನ್ನು ಕೆಕ್ಕರಿಸಿ ನೋಡುತ್ತಾ-

ಬ್ರಾಹ್ಮಣ ಮುದುಕನೊಬ್ಬನ ಬೆನ್ನಿನ ಮೂಳೆಯನ್ನು ದೊಡ್ಡ ಆಯುಧವೆಂದು ಬಾವಿಸುವ

ನೀನು ದಡ್ಡನೇ ಸರಿ.

ವೃತಾಸುರನೊಬ್ಬ ಅನಾರ್ಯ.

ಅನಾರ್ಯರಿಗೆ ಮೂಳೆ, ತಲೆಯೋಡುಗಳೇ ಪರಮ ಆಯುಧಗಳು.

ನಿನ್ನದೊಂದು ಆಯುಧವೆ ?

ವೃತನ ನಂತರ ಎಷ್ಟು ಜನರನ್ನು ಅದರಿಂದ ಕೊಂದಿದ್ದೀಯೇ ಎಂದು ತಿರಸ್ಕಾರದಿಂದ ಹಂಗಿಸಿದಾಗ.

ದೇವೇಂದ್ರ ನಾಚಿ ನೀರಾದ.

ಬ್ರಹ್ಮನಿಗೆ ಕೋಪ ಬಂದಿರುವುದನ್ನು ಅರಿತು ದೇವತೆಗಳು ಗದರಿಕೊಂಡಾಗ ಮಗು ಅಳು ನಿಲ್ಲಿಸುವಂತೆ ಅಳುವುದನ್ನು ನಿಲ್ಲಿಸಿ ಸುಮ್ಮನಾದರು.

ಬ್ರಹ್ಮನಿಗೆ ದೇವತೆಗಳ ಅವಸ್ಥೆ ಕಂಡು ಅಯ್ಯೋ ಎಂದೆನಿಸಿತು.

ಕಿಟಕಿಯಲ್ಲಿ ಸರಸ್ವತಿ ಕಂಡು ಮರೆತಿದ್ದ ಮಾತು ನೆನಪಾಯಿತು.

ನೋಡಿ ದೇವತೆಗಳೇ

ಈಗ ಉಂಟಾಗಿರುವ ತೊಡಕನ್ನು ನಿವಾರಿಸಲು ರುದ್ರನೇ ಸರಿ.

ಆದರೆ ನೀವು ಅವನನ್ನು ಕಂಡು ಮಾತನಾಡಲು ಹೆದರುತ್ತಾ ಇದ್ದೀರಿ. ಹೋಗಲಿ ಬಿಡಿ. ನೀವುಗಳೆಲ್ಲಾ ವೈಕುಂಠಕ್ಕೆ ಹೋಗಿ ನಮ್ಮ ತಂದೆಯಾದ ಮಹಾವಿಷ್ಣುವನ್ನು ಕಾಣಿರಿ. ಆತ ನಿಮ್ಮನ್ನು ರಕ್ಷಿಸಬಲ್ಲ.

ಅವನಿಗೂ , 'ರುದ್ರನಿಗೂ ಡಿಪ್ಲೊಮ್ಯಾಟಿಕ್ ರಿಲೇಷನ್' ತುಂಬಾ ಚೆನ್ನಾಗಿದೆ.

ಮತ್ತೊಂದು ಗುಟ್ಟಿನ ವಿಚಾರವನ್ನು ತಿಳಿಸುತ್ತೇನೆ.

ಭೂದೇವಿಯ ಲಾವಣ್ಯ ನಮ್ಮಪ್ಪನನ್ನು ಸೆಳೆದಿದೆ.

ಭೂದೇವಿಯನ್ನು ಹಿರಣ್ಯಾಕ್ಷ ಮೋಹಿಸಿ ಅಪಹರಿಸಿಕೊಂಡು ಹೋಗಿದ್ದಾನೆ. ಬಲಾತ್ಕಾರದಿಂದ ಅವಳನ್ನು ವಶಪಡಿಸಿಕೊಳ್ಳಬಹುದು ಎಂದು ಸೂಚಿಸಿಬಿಡಿ. ತಾನು ಕಣ್ಣು ಹಾಕಿದವಳನ್ನು ಇನ್ನೊಬ್ಬ ಪಡೆಯಲು ನಮ್ಮಪ್ಪ ಎಂದಿಗೂ ಬಿಡುವುದಿಲ್ಲ. ಎಂದು ಹೇಳಿ ಸುಮ್ಮನಾದ.

ದೇವತೆಗಳಿಗೆಲ್ಲಾ ಬ್ರಹ್ಮನ ಮಾತಿನಿಂದ ಮಹಾದಾನಂದ ವಾಗಿ ಸೋನಿಯಾಗಾಂಧಿಗೆ, ಕೇಸರಿ, ಮುಖರ್ಜಿ, ಗಾಡ್ಗಿಲ್ , ಮುಂತಾದ ಮುದುಕರೆಲ್ಲಾ ಜೈಕಾರ ಹಾಕುವಂತೆ, ಬ್ರಹ್ಮನಿಗೆ ಜೈಕಾರ ಹಾಕುತ್ತಾ ಪದ್ಮಸದನದ ಅಂಗಳದಿಂದ ನಿರ್ಗಮಿಸಲು ಪ್ರಾರಂಭಿಸಿದರು.

ಲಕ್ಕೂಬಾಯಿ ಪಾಠಕ್ ನಿಧನರಾದ ವಾರ್ತೆ ಕೇಳಿ ನಿಶ್ಚಿಂತರಾದ ಪಿ.ವಿ.ಯಂತೆ ಬ್ರಹ್ಮ ನಿಶ್ಚಿಂತೆಯಿಂದ 'ಬಾಲ್‌ಕನಿ' ಯಿಂದ ಬೆಡ್‌ರೂಮ್‌ಗೆ ಸಾಗಿದ.

ದೇವತೆಗಳು ಬರುವ ಮುನ್ನವೇ ತನ್ನ 'ಸಿ.ಐ.ಡಿ.' ವಿಭಾಗದ ಮುಖ್ಯಸ್ಥ ನಾರದನಿಂದ ಎಲ್ಲಾ ವಿಚಾರವನ್ನು ತಿಳಿದಿದ್ದ ಮಹಾವಿಷ್ಣು, ದೇವತೆಗಳ ನಿಯೋಗವನ್ನು ಎದರು ನೋಡುತ್ತಾ ವೈಕುಂಠದರಮನೆಯ 'ಡ್ರಾಯಿಂಗ್‌ರೂಮ್' ನಲ್ಲಿ ಆಸೀನನಾಗಿದ್ದನು. ದೇವತೆಗಳ ನಾಯಕ ದೇವೇಂದ್ರನನ್ನು ಕಂಡು ಎದ್ದಂತೆ ಮಾಡಿ ಕೈಕಲುಕಿದ. ಆರ್ಡಿನರಿ ಡಿ.ಸಿ. ಯನ್ನು ಸಿ.ಎಂ. ಬರಮಾಡಿಕೊಳ್ಳುವಂತೆ.

ಕೊಡಗಿನಲ್ಲಿ ಕಿರಿಯರು ಹಿರಿಯರ ಕಾಲನ್ನು ಶಾಸ್ತ್ರಕ್ಕೆ ಮುಟ್ಟುವಂತೆ ಎಲ್ಲಾ ದೇವತೆಗಳೂ ವಿಷ್ಣುವಿನ ಪಾದಗಳನ್ನು ಮುಟ್ಟಿದಂತೆ ಮಾಡಿದರು.

ದೇವೇಂದ್ರ ತಮಗೆ ಒದಗಿದ್ದ ಕಷ್ಟವನ್ನು ತಿಳಿಸಲು ಬಾಯಿ ತೆರೆಯುತ್ತಿದ್ದಾಗಲೇ 'ಐ ನೋ ಎವ್ವೆರಿ ಥಿಂಗ್' ಹಿರಣ್ಯಾಕ್ಷನ ಕೈಯಿಂದ ಭೂರಮಣಿಯನ್ನು ಬಿಡಿಸುವ ಜವಾಬ್ದಾರಿ ತನಗಿರಲಿ ಎಂದು ಆಶ್ವಾಸನೆ ನೀಡುತ್ತಲೇ ಜನಗಳತ್ತ 'ವೈಪರ್' ನಂತೆ ಕೈಬೀಸಿನಡೆದ ಸೋನಿಯಾಳಂತೆ ಸಂದರ್ಶನ ಮುಗಿಸಿ ಮೇಲೆದ್ದ.

ಹಿರಣ್ಯಾಕ್ಷ ಭೂದೇವಿಯನ್ನು ಬಲಾತ್ಕಾರವಾಗಿ ವಶಪಡಿಸಿಕೊಂಡು ಬಿಡಬಹುದು ಎಂಬುದನ್ನು ಒತ್ತಿಹೇಳಲು ಯತ್ನಿಸುತ್ತಿರುವಾಗಲೇ 'ಯೂ ನೀಡ್ ನಾಟ್ ವರಿ' ಎಂದು ಹೇಳುತ್ತಲೇ ಒಳನಡೆದ. ದೇವತೆಗಳು ಸಂತೃಪ್ತರಾಗಿ ಪ್ರಿಯಂಕಳ ವದನ ನೋಡಿ ಹರ್ಷಗೊಂಡ ಕಾಂಗ್ರೆಸ್ ಎಂ.ಪಿ. ಗಳಂತೆ ಹಸನ್ಮುಖರಾಗಿ ಹಿಂದುರುಗಿದರು.

ಈಗ ಇರುವ ಯಾವ ಜೀವದಿಂದಲಾಗಲಿ, ಆಯುಧದಿಂದಲಾಗಲಿ ತಮಗೆ ಸಾವು ಬಾರದಂತೆ ವರಕೇಳಿ, ತಾವು ಚಿರಂಜೀವಿಗಳೆಂದು ಭ್ರಮಿಸಿರುವ ಸಹೋದರರ ಮೂರ್ಖತನಕ್ಕೆ ವಿಷ್ಣುವಿಗೂ ಅಯ್ಯೋ ಎಂದೆನಿಸಿತು. ಚಿರಲಾವಣ್ಯವತಿಯೂ, ಅನುಪಮ ಸುಗಂಧಿನಿಯೂ ಆದ ಭೂ ವನಿತೆಗಾಗಿ ಆಸೆ ಪಟ್ಟ ಹಿರಣ್ಯಾಕ್ಷನ ಬಗ್ಗೆ ಸಿಟ್ಟು ಕೆದರಿತು. ಪ್ರಣಯ ಸ್ಪರ್ಧೆ ಹೂಂಕರಿಸಿತು.

ಹಿಂದೆಂದೂ ಯಾರೂ ನೋಡಿರದ, ಕೇಳಿರದ , ಬೃಹತ್ ಗಾತ್ರದ ರೋಷದ, ಮಾಹಾನ್ ಶಕ್ತಿಯ ಮೂರ್ತಕ ಸ್ವರೂಪದ ಆದರೆ ಗಾತ್ರ ಅಳತೆಗೆ ಸಿಗದ ರೂಪವನ್ನು ತಳೆದು ಹಿರಣ್ಯಾಕ್ಷನ ಮುಂದೆ ಗಕ್ಕನೆ ಪ್ರತ್ಯಕ್ಷನಾದ.

ಹಿರಣ್ಯಾಕ್ಷನಿಗೆ ಆಶ್ಚರ್ಯ ಆಂತಕಗಳು ಏಕಕಾಲದಲ್ಲಿ ಉಂಟಾದವು.

ರಹಮತ ತರೀಕೆರೆ ಅವರ "ಕರ್ನಾಟಕದ ಸೂಫಿಗಳು"

ಗಣೇಶ್ ಕಿರಾಡಿ

ತಿಳುವಳಿಕೆಯ ಪರಿಪೇಕ್ಷ್ಯವನ್ನು ಕಟ್ಟಿಕೊಡುವ ಕೆಲಸದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಕಾರ್ಯನಿರತವಾಗಿದೆ. ಈ ಪ್ರಯತ್ನದಲ್ಲಿ ಅದು ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ ಎಂಬುದು ಬೇರೆ ಮಾತು. ಆದರೊಂದು ನಾಲ್ಕು ಕಾಲ ಉಳಿಯಬಲ್ಲ ಹತ್ತಾರು ಉತ್ತಮ ಕೃತಿಗಳನ್ನು ಅದು ಪ್ರಕಟಿಸಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಹಲವಾರು ಮಂದಿ ಸೇರಿ ಪಾಕ ಕೆಡಿಸಿದರೆಂಬಂತೆ 'ಶೈಲಿ ಕೈಪಿಡಿ' ಯಂಥ ಸಾಂಗತ್ಯವಿಲ್ಲದ ಪುಸ್ತಕಗಳನ್ನು ಅದು ಕನ್ನಡಿಗರ ಕೈಗಿತ್ತಿದೆ. ಯಾವುದು ಒಳ್ಳೆಯ ಪುಸ್ತಕ, ಯಾವುದು ಕೆಟ್ಟ ಪುಸ್ತಕ ಎಂಬುದನ್ನು ನಾನಿಲ್ಲಿ ಪಟ್ಟಿ ಮಾಡಹೊರಟಿಲ್ಲ. ನಾನು ಇತ್ತೀಚೆಗೆ ಓದಿದ , ನನಗೆ ಬಹಳ ಇಷ್ಟವಾದ, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ ಹಂಪಿ ಪ್ರಕಟಿಸಿದ, ಪ್ರತಿಭಾವಂತ ವಿಮರ್ಶಕ ಡಾ.ರಹಮತ್ ತರೀಕೆರೆ ಅವರ 'ಕರ್ನಾಟಕದ ಸೂಫಿಗಳು' ಕೃತಿಯ ಕಿರು ಸಮೀಕ್ಷೆಯ ಪ್ರಯತ್ನ ಈ ಲೇಖನ.

ಕರ್ನಾಟಕ ಸಂಸ್ಕೃತಿಗೆ ಸೂಫಿ ಸಂತರ ಕೊಡುಗೆಯೇನೆಂಬುದನ್ನು ಬಹುಮಟ್ಟಿಗೆ ಸಮಗ್ರವಾಗಿ ಕಟ್ಟಿಕೊಡುವ ಕಾರ್ಯವನ್ನು ರಹಮತ್ ತರೀಕೆರೆ ಅವರು ಇಲ್ಲಿ ಯಶಸ್ವಿಯಾಗಿ ಮಾಡಿದ್ದಾರೆ. ಕನ್ನಡದ ಸಂದರ್ಭದಲ್ಲಿ ಇದೊಂದು ಗಮನಾರ್ಹ ಕೃತಿ. ಸೂಫಿ ಸಂತರ ಚೂರೂಪಾರೂ ಚರಿತ್ರೆಯ ಬೆಳಕಿನಲ್ಲಿ ಲೇಖಕರು ಈ ಕೃತಿಯಲ್ಲಿ ನಡೆಸಿದ ಸಾಂಸ್ಕೃತಿಕ ಸಂವಾದಕ್ಕೆ ಸಾಂದರ್ಭಿಕ ಮಹತ್ವವಿದೆ. ಕನ್ನಡ ಸಂಸ್ಕೃತಿಯ ಶೋಧವಿಲ್ಲಿ ಹೊಸ ಆಯಾಮ ವನ್ನು ಪಡೆದುಕೊಂಡು ವಿನೂತನ ಮಾರ್ಗದಲ್ಲಿ ಕ್ರಮಿಸಿರುವುದು ಯಾರ ಗಮನಕ್ಕೂ ಬಾರದೇ ಹೋಗುದು. ಶಂಭಾ, ಕಪಟರಾಳ್ ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆದಾಗ್ಯೂ ಲೇಖಕರಲ್ಲಿ ತಮ್ಮದೇ ಆದ ಹಾದಿಯನ್ನು ಕಂಡುಕೊಂಡಿದ್ದಾರೆ. ಸೂಫಿ ಸಂತರ ಕೂಡುಗೆಯನ್ನು ಕಂಡುಕೊಂಡಿದ್ದಾರೆ. ಸೂಫಿಸಂತರ ಕೊಡುಗೆಯನ್ನು ತಿಳಿಹೇಳುವ ಕೃತಿಗಳು ಬೇರೆ ಬೇರೆ ಬಾರತೀಯ ಭಾಷೆಗಳಲ್ಲಿ ಈಗಾಲೇ ಬೆಳಕು ಕಂಡಿವೆ . ಸಾಂಸ್ಕೃತಿಕ ಸಂಶೋಧಕ ಸೇ.ತು. ಮಾಧವರಾವ್ ಪಗಡಿ ಅವರು ಮರಾಠಿಯಲ್ಲಿ ಸೂಫಿಗಳ ಕುರಿತು ಅನನ್ಯವಾದ ಕೃತಿಯನ್ನು ರಚಿಸಿದ್ದಾರೆ. ಕನ್ನಡದಲ್ಲಿ ಈ ಕೊರತೆಯನ್ನು ರಹಮತ್ ತರೀಕೆರೆ ಅವರು ನೀಗಿಸಿ ಕೊಟ್ಟಿದ್ದಾರೆ. ಆ ಮೂಲಕ ಕಾಲ ಕಾಲಕ್ಕೆ ವಿಶಾಲ ಕರ್ನಾಟಕದಲ್ಲಿ ನಡೆವ ಸಾಸ್ಕೃತಿಕ ಸಂಘರ್ಷದ ಕಥನವನ್ನು ಅವರು

ನಮ್ಮೆದುರು ಬಿಚ್ಚಿಡುತ್ತಾ ಸಾಗಿದ್ದಾರೆ.

'ಸೂಫಿಸಂ' ಒಂದು ತತ್ವವಾಗಿದೆ. ಅದೊಂದು ಅನುಭಾವ ಪಂಥ. ಅದು ಇಸ್ಲಾಂ ಧರ್ಮ ಅಲ್ಲ. "ಶೂಫಿವಾದಕ್ಕೂ ಇಸ್ಲಾಮ್ ಧರ್ಮಕ್ಕೂ ಸಂಬಂಧ ಇಲ್ಲವೆಂತಲ್ಲ. ಇದೆ ಅದು ವಿಚಿತ್ರವಾಗಿದೆ. ಜಗತ್ತಿನ ಎಲ್ಲ ಕಡೆ ಮನುಭಾವಿ ಪಂಥಗಳಿರುವಂತೆ ಸೂಫಿ ಪಂಥವು ಮಧ್ಯ ಪಪ್ಶ್ಯಾದ ಇಸ್ಲಾಮಿ ಜಗತ್ತಿನಲ್ಲಿ ರೂಪ ಪಡೆದ ಒಂದು ತತ್ವ" ಎಂಬುದನ್ನು ಲೇಖಕರು ಈ ಸಾಂಸ್ಕೃತಿ ಶೋಧದ ಶುರುವಿನಲ್ಲೇ ಸ್ಪಷ್ಟಪಡಿಸಿದ್ದಾರೆ. ಇಸ್ಲಾಮಿನ ಅನುಭಾವ ಶಾಖೆಗಿಂತ ಸೂಫಿವಾದ ತೀರಾ ಭಿನ್ನವಾದುದು. ಯಾವುದನ್ನು ಇಸ್ಲಾಂ ಎಂದು ಧರ್ಮ ಶಾಸ್ತ್ರಜ್ಞರು ಮಂಡಿಸುತ್ತಿದ್ದರೊ, ಆ ಪರಿಕಲ್ಪನೆಗೆ ಪರ್ಯಾಯವಾಗಿ ಚಿಂತಿಸುತ್ತ, ಬದುಕುತ್ತ ಬಂದವರು ಸೂಫಿ ಗಳು" ಎಂಬುದನ್ನು ಸೋದಾಹರಣವಾಗಿ ನಮಗೆ ಮನದಟ್ಟು ಮಾಡಿಕೊಡುವಲ್ಲಿ ಅವರು ಯಶಸ್ವಿಯಾಗಿದ್ದಾರೆ.

ಕರ್ನಾಟಕದ ಸೂಫಿಗಳು ಎದುರಿಸಿದ ನಾನಾರೀತಿಯ ಸಂಘರ್ಷ , ಸವಾಲುಗಳ ಕುರಿತೂ ಲೇಖಕರು ನಮ್ಮ ಗಮನವನ್ನು ಸೆಳೆಯುತ್ತಾರೆ. "ಕರ್ನಾಟಕದ ಸೂಫಿಗಳು ಈ ನಾಡಿನಲ್ಲಿ ಬರೀ ದೋಸ್ತಾರವನ್ನಷ್ಟೇ ಮಾಡಿಲ್ಲ. ಅನೇಕ ಗುದ್ದಾಟವನ್ನೂ ರಾಜಿಗಳನ್ನೂ ಮಾಡಿಕೊಂಡಿದ್ದಾರೆ. ಈ ಗೆಳೆತನ ಗುದ್ದಾಟಗಳ ಪರಿಯನ್ನು ಹುಡುಕುವುದು ತುಂಬ ಸ್ವಾರಸ್ಯಕರವಾದುದು. ಕರ್ನಾಟಕದ ಸೂಫಿ ಸಂತರ ಬಗ್ಗೆ ತಿಳಿಯುವುದು ಅಂದರೆ, ಅದು ಗತಕಾಲದ ಕಥನ ಮಾತ್ರವಲ್ಲ. ಈ ಹೊತ್ತಿನಲ್ಲಿ ಈ ನಾಡಿನ ಜನಸಮುದಾಯಗಳ ಕಥನ ಕೂಡಾ. ಯಾಕೆಂದರೆ, ಒಂದು ಕಾಲದಲ್ಲಿ ಜೀವಂತ ವ್ಯಕ್ತಿಗಳಾಗಿ ಬದುಕಿದ್ದ ಸೂಫಿಗಳು, ಈಗ ದೈವಗಳಾಗಿ ಬೇರೊಂದು ರೀತಿಯಲ್ಲಿ ಬದುಕಿದ್ದಾರೆ. ಇದೊಂದು ಬಗೆಯ ರೂಪಾಂತರ. ಈ ರೂಪಾಂತರಗಳ ಬೆನ್ನುಹತ್ತಿಹೋದರೆ, ಸೂಫಿ ಚರಿತ್ರೆಯ ಜತೆ ಜತೆಗೇ ಅವರನ್ನು ತಮ್ಮ ಮನದ ಕೊನೆಯಲ್ಲಿ ಬದುಕಗೊಟ್ಟಿರುವ ಜನಸಮುದಾಯಗಳ ಪಾಡಿನ ದರ್ಶನ ಮಾಡಿದಂತಾಗುತ್ತದೆ. ಜನರ ಆರ್ಥಿಕ ಸಾಮಾಜಿಕ ಪಾಡಷ್ಟೇ ಅಲ್ಲ. ಅವರ ಸಾಂಸ್ಕೃತಿಕ ಸೃಜನ ಶೀಲತೆ ಕೂಡಾ ಗೊತ್ತಾಗುತ್ತದೆಂಬುದನ್ನು" ಬಹಳ ಸಂಯಮದಿಂದ ತೋರಿಸಿಕೊಡುವ ಪ್ರಯತ್ನವನ್ನು ಈ ಕೃತಿಯಲ್ಲಿ ಲೇಖಕರು ಮಾಡಿದ್ದಾರೆ.

ಈ ಕೃತಿಯಲ್ಲಿ ಲೇಖಕರು ನಡೆಸುವ ಚಿಂತನಮಂಥನಗಳು ಬರೇ ಕರ್ನಾಟಕಕ್ಕೆ ಮಾತ್ರ ಸಂಬಂಧಪಟ್ಟದ್ದಲ್ಲ. ಅದು ಸೂಫಿವಾದದ ಮೂಲವನ್ನು ಶೋಧಿಸುವ ಹಂತದಲ್ಲಿ ಬಿಜಾಪುರದಿಂದ ಬಾಗ್ದಾದಿನತ್ತ ಮುಖಮಾಡುತ್ತದೆ. "ಹೇಗೆ ನೋಡಿದರೂ ಕರ್ನಾಟಕದ ಸೂಫಿಗಳ ಬೇರುಗಳು ಬಾಗ್ದಾದು ದೆಹಲಿಗಳಿಂದ ದೌಲತಾಬಾದು ಕರ್ನೂಲುಗಳ ತನಕ ಬೇರೆ ದೇಶ ರಾಜ್ಯಗಳಿಗೆ ಹೋಗಿ ಬಿಡುತ್ತವೆ. ಸೂಫಿಸಂ ಏಕಕಾಲಕ್ಕೆ ಜಾಗತಿಕವೂ ಪ್ರದೇಶಬದ್ಧವೂ ಆಗಿತ್ತು. ಆದ್ದರಿಂದ ಕರ್ನಾಟಕದ ಸೂಫಿಗಳು ಎಂದರೆ ಈಗಣ ಮಹಾರಾಷ್ಟ್ರ

, ಆಂಧ್ರಗಳಿಗೆ ಸೇರಿದ , ಸೊಲ್ಲಾಪುರ, ಅಕ್ಕಲ ಕೋಟೆ, ಕೌತಾಳ, ಹೊಸ್ಸೂರು, ಎಳ್ಳಾರತಿ, ಹೊಳಲುಗುಂದಿ ಮುಂತಾದ ಊರುಗಳಲ್ಲಿರುವ ಸೂಫಿಗಳು ಕೂಡ. ಈಗಲೂ ಇವರು ಸಾಂಸ್ಕೃತಿಕವಾಗಿ ಕರ್ನಾಟಕದವರಾಗಿಯೇ ಇದ್ದಾರೆ. ಇಲ್ಲಿ ಕನ್ನಡದ ಜತೆ ಉರ್ದು, ಮರಾಠಿ, ತೆಲುಗು ಭಾಷೆಗಳಿವೆ." ಎಂಬ ಸತ್ಯಾಂಶಗಳನ್ನೂ ಇಲ್ಲಿ ಲೇಖಕರು ಕಂಡುಕೊಂಡಿದ್ದಾರೆ. ಭಾಷೆಯ ಹೆಸರಲ್ಲಿ ಧರ್ಮದ ಕಾರಣದಿಂದ, ಗಡಿ ಸಮಸ್ಯೆಯ ನೆಪದಲ್ಲಿ ರಾಜಕಾರಣ ಸಾಮಾನ್ಯ ಜನರ ನೆಮ್ಮದಿ ಕೆಡಿಸಿದ್ದನ್ನೂ ಲೇಖಕರಿಲ್ಲಿ ತರಾಟೆಗೆತ್ತಿಕೊಳ್ಳುತ್ತಾರೆ. ಇವರಿಗೆ ಜನ ನೆಮ್ಮದಿಯಿಂದ ಸಾಮರಸ್ಯದಿಂದ ಬದುಕುವುದನ್ನು ಕಂಡು ಸಹಿಸಲಾಗುತ್ತಿಲ್ಲ. "ಸೂಫಿ ಸಂತರನ್ನು ಕುರಿತ ಮಿತ್‌ಗಳು, ಆಚರಣೆಗಳು ಸಮುದಾಯಗಳ ಆರ್ಥಿಕ ಸಾಮಾಜಿಕ ಧಾರ್ಮಿಕ ಬಾಳಿನಲ್ಲಿ ಸಹಜವಾಗಿ ಇರುವಂಥವು. ಉದಾರವಾದವು ಇದನ್ನು ಕೋಮು ಸಾಮರಸ್ಯದ ನಿದರ್ಶನಗಳಾಗಿ ಮಂಡಿಸುತ್ತದೆ. ಆದರೆ ಸಮುದಾಯಗಳಿಗೆ ಕೋಮುವಾದವೆಂಬ ರೋಗಕ್ಕೆ ಔಷಧಿಯಂತಿರುವ ಮೌಲ್ಯವನ್ನು ತಾವು ಬದುಕುತ್ತಿದ್ದೇವೆ ಎಂಬ ಅರಿವಿಲ್ಲ. ಹೀಗಿರುವ, ಈ ವಿವರಗಳನ್ನು ಸೆಕ್ಯುಲರ್ ರಾಜಕೀಯ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳುವುದರ ಔಚಿತ್ಯವೇನು? ಕೋಮುವಾದದ ಹಾಗೆ ಕೋಮು ಸಾಮರಸ್ಯವಾದ ಕೂಡ ಆಧುನಿಕ ರಾಜಕಾರಣದ ಭಾಗವಾಗಿರುವುದರಿಂದ ಈ ಸಮಸ್ಯೆ ಜಟಿಲವಾಗಿದೆ." ಎಂಬ ಲೇಖಕರ ಮಾತು ಅಕ್ಷರಸಹ ನಿಜವಾಗಿದೆ. ಈ ಸಮುದಾಯಗಳು ಕೋಮುಸಾಮರಸ್ಯವನ್ನು ಅರಿವಿಲ್ಲದೇ ಮೈಗೂಡಿಸಿಕೊಂಡು ಬಾಳುತ್ತಿವೆ ಎಂಬ ಶೋಧವೂ ನಮ್ಮ ದೃಷ್ಟಿಯನ್ನು ತಿದ್ದುವುದಕ್ಕೆ, ನಾವು ಕಟ್ಟಿಕೊಂಡಿರುವ ಪೂರ್ವಗ್ರಹಗಳನ್ನು ಮೂಲೆಗೊತ್ತಲು ಸಹಾಯಕಾರಿಯಾಗಿದೆ. ಅಧ್ಯಯನದ ಸಾರ್ಥಕತೆ ಇರುವುದು ಇಲ್ಲಿಯೇ ಎಂಬುದು ಗಮನೀಯ ಅಂಶ.

ಕರ್ನಾಟಕದ ಸೂಫಿಗಳು ಕೃತಿಯ ಮುಖ್ಯ ಕಾಳಜಿ ಇತಿಹಾಸದ ಪುನಾರಚನೆಯ ಕುರಿತಾದುದಲ್ಲ. ದಂತ ಕತೆಯಾಗಿರುವ , ಜನರ ನಂಬಿಕೆಯಿಂದ ಅವರ ಬದುಕಿನ ಅವಿಭಾಜ್ಯ ಅಂಗವಾಗಿರುವ ಸೂಫಿಗಳು ಕಾಲ ದೇಶ ಮತ ಪಂಥಗಳನ್ನು ಮೀರುತ್ತಾರೆ. ಆದ್ದರಿಂದಲೇ ಲೇಖಕರು ಸೂಫಿಸಂತರ ಚರಿತ್ರೆಯನ್ನು ಕಟ್ಟುವುದೆಂದರೆ "ಹುಟ್ಟಿಲ್ಲದ ದೋಣಿಯಲ್ಲಿ ಕುಳಿತು ಹರಿವ ನದಿಯಲ್ಲಿ ಪಯಣ ಹೊರಟಂತೆ. ಸೆಳವು ಬಂದತ್ತ ಹೋಗುವ ಆಕರ್ಷಣೆಯೂ ಇದೆ. ಬೇಕಾದ ಕಡೆ ಹೋಗಲಾಗದ ಸಮಸ್ಯೆಯೂ ಇದೆ. ವೇಷ ಮರೆಸಿಕೊಂಡು ಹಲವು ರೂಪಗಳಲ್ಲಿ ಸುಳಿದಾಡುವ ಚರಿತ್ರೆ, ಇಲ್ಲಿ ದೈವವಿದ್ದಂತೆ. ಇದೆ ಎಂದರೆ ಇದೆ. ಇಲ್ಲ ಎಂದರೆ ಇಲ್ಲ. ಇಲ್ಲಿ ಚರಿತ್ರೆ, ಪುರಾಣವಾಗಿ, ನಂಬಿಕೆಯಾಗಿ, ಆಚರಣೆಯಾಗಿ ಹೋಗಿರುತ್ತದೆ. ಮತ್ತು ನಿರಂತರವಾಗಿ ಬದಲಾಗುತ್ತಲೇ ಇರುತ್ತದೆ." ಎಂಬ ನಿರ್ಣಯಕ್ಕೆ ಬಂದಿದ್ದಾರೆ. "ಮೋಡಗಳಂತೆ ಬದಲಾಗುತ್ತಲೆ ಇರುವ ಈ ಮಿತ್‌ಗಳ ಮೂಲಕ ಸೂಫಿ ಸಂತರ ಅಧ್ಯಯನ ಮಾಡುವಾಗ ಖಚಿತತೆಯನ್ನು ಬೇಡುವ ಚರಿತ್ರಕಾರರು, ಅದರಲ್ಲಿಯೂ ಯುರೋಪಿನವರು ಪಡಬಾರದ ಪಾಡು ಪಡುತ್ತಾರೆ." ಈ ಅಧ್ಯಯನವನ್ನು ಆ ಪಾಡಿನಿಂದ ಮುಕ್ತಗೊಳಿಸುವ ಉದ್ದೇಶವೂ

ಈ ಅಧ್ಯಯನದಲ್ಲಿ ಎದ್ದು ಕಾಣುತ್ತದೆ. ನಮ್ಮ ದೇಶದ ಇತಿಹಾಸವನ್ನು ಕುರಿತು ಪರಕೀಯರು ಬರೆಯುವಾಗ ಅಲ್ಲಿ ಅನೇಕ ತೊಂದರೆಗಳು ಎದುರಾಗುವುದು ನಿಜ. ಆದರೆ ಶಾಸನ, ಗ್ರಂಥಸ್ಥ, ಸ್ಥಾವರ ದಾಖಲೆಗಳಿರುವಾಗಲೂ ಸೂಫಿಗಳ ಕುರಿತು ಖಚಿತತೆಯ ಹಾದಿಯನ್ನು ಬಿಟ್ಟು ಐತಿಹ್ಯ, ಪುರಾಣ, ನಂಬಿಕೆ, ಆಚರಣೆಗೆ ಕಟ್ಟು ಬೀಳುವ ಲೇಖಕರ ಉದ್ದೇಶ ಸಹಜ ವಾಗಿಯೇ ವಿದ್ವಾಂಸವಲಯದಲ್ಲಿ ಗುಮಾನಿ ಹುಟ್ಟಿಸಬಹುದು. ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಬದುಕಿ ಬಾಳಿ ಜನಮನ್ನಣೆಗೆ ಪಾತ್ರರಾದ ಸೂಫಿಗಳು ಇಂದು ದೈವತ್ವಕ್ಕೇರಿರಬಹುದು. ಅವರು ಮಿಥ್‌ಗಳ ಪ್ರಪಂಚದಲ್ಲಿ ಸುತ್ತಾಡುತ್ತಿರಬಹುದು. ಆದರೂ ಈ ನೆಲದಲ್ಲಿ ಒಂದು ಕಾಲದಲ್ಲಿ ಸಾಮಾನ್ಯರಂತೆ ಅವರೂ ಜೀವನ ನಡೆಸಿದ್ದರಲ್ಲ. ನಿಜವಾಗಿ ಅವರು ಅಂದು ಎದುರಿಸಿದ ಸಂಘರ್ಷ ಸಾಧನೆಯ ಹಾದಿಯಲ್ಲಿ ಬಂದ ಕಷ್ಟ ನಷ್ಟಗಳು, ಇವೆಲ್ಲವನ್ನು ಅವರು ಗೆದ್ದು ನಿಂತ ಬಗೆ ಹೇಗೆ,? ಎಂಬ ಖಚಿತತೆಯ ಇನ್ನೊಂದು ಮುಖದತ್ತ ಲೇಖಕರು ದೃಷ್ಟಿ ಹರಿಸಿದ್ದರೆ ಇನ್ನಷ್ಟು ಅಧಿಕೃತವಾಗುತ್ತಿತ್ತೆನಿಸುತ್ತದೆ ಈ ಅಧ್ಯಯನ. ಇತಿಹಾಸದ ಮುಖಗಳನ್ನು ಬದಿಗೊತ್ತುತ್ತಲೇ ಲೇಖಕರು ಇಲ್ಲಿ ತಮ್ಮ ದೋಣಿಯನ್ನು ದಡದ ಕಡೆಗೆ ಮುಖಮಾಡುತ್ತಾರೆ. ಮಧ್ಯಕಾಲೀನ ಗೊಂದಲಮಯ ಅಸ್ಪಷ್ಟ ರಾಜಕೀಯ ಇತಿಹಾಸವೂ ಇದಕ್ಕೆ ಕಾರಣವಿರಬಹುದು. ಈ ಸಂದರ್ಭದಲ್ಲಿ ನಮಗೆ ಸೇತು ಮಾಧವರಾವ್ ಪಗಡಿ ಅವರು ತುಳಿದ ಹಾದಿ, ಅರ್ಥೈಸಿದ ರೀತಿ ಹೆಚ್ಚು ಅಧಿಕೃತವಾಗಿ ಕಾಣುತ್ತದೆ.

"ಸೂಫಿಗಳು ಯೋಗ ಸಾಧನೆ ಮಾಡಿಕೊಂಡು ದೃಢವಾದ ದೇಹವನ್ನು ಒಳ್ಳೆ ಆರೋಗ್ಯವನ್ನು ಇಟ್ಟುಕೊಂಡವರು. ಬಹಳ ವರ್ಷ ಬದುಕುತ್ತಿದ್ದವರು. ಚಾಂಗದೇವ, ಕಾಡಸಿದ್ಧ ಮುಂತಾದ ಯೋಗಿಗಳು ನೂರಾರು ವರ್ಷ ಬದುಕಿದ ಕತೆಗಳ ಅರ್ಥ ಇದೇ. ಆರೋಗ್ಯ ಹಾಗೂ ಆಯುಸ್ಸುಗಳಿಗೆ ಕಾರಣ ಅವರಿಗೆ ಗೊತ್ತಿದ್ದ ವೈದ್ಯ ಪದ್ಧತಿ. ಅವರ ಸಾವಿನಲ್ಲಿರುವ ದೊರೆಯ ಮಕ್ಕಳಿಗೆ ಹುಲಿಯ ಹಾಲಿನಿಂದ ಔಷಧಿ ಮಾಡಿಕೊಡುವ ಕತೆಗಳನ್ನಾಗಲಿ ಇತರ ರೋಗ ನಿವಾರಕ ಪವಾಡಗಳನ್ನಾಗಲಿ ಈ ಹಿನ್ನೆಲೆಯಲ್ಲಿ ಗಮನಿಸಬೇಕು" ಇಲ್ಲೆಲ್ಲ ಲೇಖಕರು ಕತೆಗಳ ಐತಿಹ್ಯಗಳ, ಪವಾಡಗಳ ಹಿಂದಿನ ಆಶಯವನ್ನು ಶೋಧಿಸುವುದರ ಕಡೆಗೆ ಹೆಚ್ಚು ಮುತುವರ್ಜಿ ವಹಿಸುತ್ತಾರೆ. ಜನಪರರಂಪರೆಯನ್ನು ಅರ್ಥಮಾಡಿಕೊಳ್ಳುವ ಅಧ್ಯಯನ ಇದಾದುದರಿಂದ ಲೇಖಕರು ಚರಿತ್ರೆಯನ್ನು ಬೆಳಕಾಗಿ ಬಳಸಿಕೊಂಡರೇ ವಿನಃ ಮುಖ್ಯ ಆಕರವನ್ನಾಗಿ ಅಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಸೂಫಿಗಳನ್ನು ಕರ್ನಾಟಕದ ಸೂಫಿಗಳು, ಮಹಾರಾಷ್ಟ್ರದ ಸೂಫಿಗಳು, ಅಥವಾ ಇನ್ನಾವುದೋ ರಾಜ್ಯದ ಸೀಮೆಯವರೆಂಬ ಹಣೆ ಪಟ್ಟಿ ಹಚ್ಚುವ ಕೆಲಸವೂ ಸರ್ವಥಾ ಸರಿಯಲ್ಲ. ಇದು ಕರ್ನಾಟಕ ಸಂಸ್ಕೃತಿ, ಇದು ಮರಾಠಿ ಸಂಸ್ಕೃತಿ, ಎಂದು ಗೆರೆ ಕೊರೆದು ಹಾಕಿದ್ದು ಸಂಶೋಧಕ ವರ್ಗವೇ. ಪ್ರಸ್ತುತ ಕೃತಿಯ ಅಧ್ಯಾಯ ಹನ್ನೊಂದು, ಸೂಫಿಗಳ ನಡುವಿದ್ದ ಬಹುಭಾಷೆಗಳಿಗೆ ಸಂಬಂಧಿಸಿದ್ದು.

"ಮೂಲತಃ ಸೂಫಿಗಳು ಪಾರಸಿಕರು. ಸೂಫಿ ಅನುಭಾವ ಸಾಹಿತ್ಯದ ಮಹಾಪರಂಪರೆ ಫಾರಸಿಯಲ್ಲಿದೆ. ಸೂಫಿಗಳು ಫಾರಸಿ ಆಡಳಿತ ಭಾಷೆಯುಳ್ಳ ಪ್ರಭುತ್ವಗಳ ಜತೆ ಬದುಕಬೇಕಾಯಿತು.ಹೀಗಾಗಿ ಫಾರಸಿ ಭಾರತೀಯ ಸೂಫಿಸಂನ ಅನಿವಾರ್ಯ ಅಂಗವಾಗಿತ್ತು. ಭಾರತದಲ್ಲಿ ಹುಟ್ಟಿದ ಸೂಫಿಗಳು ಸ್ಥಳೀಯ ಭಾಷೆಗಳನ್ನು ಅಭಿವ್ಯಕ್ತಿಗಾಗಿ ತುಡುಕಿದಾಗಲೂ ಫಾರಸಿಯನ್ನು ಬಿಡಲಿಲ್ಲ. ಕರ್ನಾಟಕದ ಸೂಫಿಗಳು ದಖನಿ - ಮರಾಠಿ ಕನ್ನಡಗಳನ್ನು ಆಯ್ದುಕೊಂಡರೂ ಫಾರಸಿ ಬಲ್ಲವ ರಾಗಿದ್ದರು. ಮಹಿಪತಿದಾಸನು ಮರಾಠಿ ಹಾಗೂ ಕನ್ನಡಗಳಲ್ಲಿ ಬರೆದನು. ಆದರೆ ಆದಿಲಶಾಹಿ ಪ್ರಭುತ್ವದಲ್ಲಿದ್ದ ಅವನಿಗೆ ದಖನಿ - ಫಾರಸಿಗಳು ಗೊತ್ತಿದ್ದವು." ಹೀಗೆ ವಿಚಿತ್ರ ರೀತಿಯಲ್ಲಿ ಸೂಫಿಗಳು ಬಹು ಭಾಷಿಕ ವಾತಾವರಣಕ್ಕೆ ಕಾರಣವಾದ ಬಗೆಯನ್ನು ತೋರಿಸಿಕೊಟ್ಟಿದ್ದಾರೆ. ಭಾಷಾ ಸಮಾರಸ್ಯಕ್ಕೆ ಲೇಖಕರು ಕೊಡುವ ಒಂದು ಸಂದರ್ಭ ಇಲ್ಲಿ ಉಲ್ಲೇಖಿಸಲೇ ಬೇಕು. ಅದು ಗಾದಿಲಿಂಗನ ಜಾತ್ರೆಗೆ ಸಂಬಂಧಿಸಿದ್ದು. "ಗಾದಿಲಿಂಗನಿರುವ ಗೂಳ್ಯಂ ಹಳೇ ಬಳ್ಳಾರಿ ಸೀಮೆಯಲ್ಲಿದೆ. ಒಂದು ಮನೆಯ ಮುಂದೆ ಹರಕೆ ಮಾಡಿಕೊಂಡವರು "ಗೊಗ್ಗಯ್ಯರಾಟ" ಏರ್ಪಡಿಸಿದ್ದರು. ಮೈಲಾರನ ಕತೆಯನ್ನು ಗೊರವರು ನಾಟಕೀಯವಾಗಿ ಅಭಿನಯಿಸುತ್ತಿದ್ದರು. ಕುತೂಹಲವೆಂದರೆ ಶಿವಪಾತ್ರಧಾರಿ ತೆಲುಗಿನಲ್ಲಿ ಮಾತನಾಡಿದರೆ, ಪಾರ್ವತಿ ಕನ್ನಡದಲ್ಲಿ ಉತ್ತರಿಸುತ್ತಿದ್ದಳು. ಅಲ್ಲಿ ಸೇರಿದ ಜನರಿಗೆ ಇದೇನು ಹೊಸತಾಗಿರಲಿಲ್ಲ. ಎರಡು ಭಾಷೆಗಳು ಬೆರೆಯುವುದು ಅರಿವಾಗದಷ್ಟು ಸಹಜ ಲಯದಲ್ಲಿ ಒಂದಾಗಿದ್ದವು." ಇದು ಅವರಿಗೆ ಸಹಜವಾದರೆ ಓದುವ ನಮಗೆ ಕಣ್ಣಾರೆ ಕಂಡ ಲೇಖಕರಿಗೆ ತುಸು ಆಶ್ಚರ್ಯವನ್ನುಂಟು ಮಾಡುತ್ತದೆ. ಮತ - ಮತಗಳ ನಡುವೆ. ಭಾಷೆ ಭಾಷೆಗಳ ಮಧ್ಯೆ ಸಹಜವಾದ ಕೊಳುಕೊಡೆಯಿತ್ತು. ಬಹು ಭಾಷಿಕತೆ, ಬಹುಸಾಂಸ್ಕೃತಿಕತೆ, ಅವುಗಳ ರೂಪಾಂತರ, ಕೊನೆಗೆ ಲೇಖಕರು ತಳೆಯುವ ನಿರ್ಧಾರ ಯಾರನ್ನೂ ಗಾಢವಾಗಿ ತಟ್ಟಬಲ್ಲದು.

ಇದೊಂದು ಬರೀ ಅಕೆಡೆಮಿಕ್ ಶಿಸ್ತಿಗೆ ಒಳಪಟ್ಟ ಅಧ್ಯಯನ ಗ್ರಂಥವಲ್ಲ. ಸೂಫಿ ಸಂತರ ನೆರಳಲ್ಲಿ ಇಲ್ಲಿ ನೆಲೆ ನಿಂತ ಸಂಸ್ಕೃತಿಯ ಅರ್ಥ ವಿವರಣೆಯೂ ಅಷ್ಟೇ ಸಮರ್ಥವಾಗಿ ಅಭಿವ್ಯಕ್ತವಾಗಿದೆ. ಆದ್ದರಿಂದಲೇ ಇದೊಂದು ಸಾಂಸ್ಕೃತಿಕ ಸಂವಾದ ಎಂದು ನಾನು ಆರಂಭದಲ್ಲೇ ಕರೆದದ್ದು. ಬಹುಭಾಷಿಕ ನೆಲೆಯ ಕುರಿತಾದ ಚರ್ಚೆ ಮುಕ್ತಾಯವಾಗುವುದು ಹೀಗೆ, ಈ ಸಮಾಜದ ಸ್ವರೂಪಕ್ಕೂ ಇದರ ಬಹುಭಾಷಿಕತೆಗೂ ನೇರ ಸಂಬಂಧವಿದೆ. ಬಹುಭಾಷಿಕತೆ ಯಾವತ್ತೂ ಬಹುಧರ್ಮೀಯತೆಗೆ ಸೆಳೆದುಕೊಂಡು ಹೋಗುವಂಥದ್ದು. ಶಂಕೆಯೆಂದರೆ, ಸಡಿಲ ರಚನೆಯ ಈ ಸಮನ್ವಯಕಾರಿ ಪಂಥಕ್ಕೆ "ಆಕ್ರಮಣಕಾರಿ ನೆಲೆಯ ಏಕರೂಪೀ ಸನಾತನವಾದವನ್ನು ಎದುರಿಸುವ ದೃಢತೆ ಇದೆಯೇ ? ಸಮುದಾಯಗಳ ಒಳಗೆ ತನ್ನನ್ನು ಚೆಲ್ಲಿಕೊಳ್ಳದ ಯಾವ ಬಹುರೂಪಿ ರಚನೆಗಳೂ ಈಗ ಉಳಿಯುವುದು ಕಷ್ಟವಾಗಿದೆ." ಎಂಬ ವಾಸ್ತವ ಸತ್ಯವನ್ನು ಬಹಿರಂಗಪಡಿಸಿದ್ದಾರೆ.

ನಮ್ಮ ಇತಿಹಾಸವನ್ನು ಬರೆಯುವ ನೆಪದಲ್ಲಿ ವಿದೇಶಿ ವಿದ್ವಾಂಸರು, ನಮ್ಮ ನಡುವೆ ಗೋಡೆಗಳನ್ನು ಬಿತ್ತಿ ಬೆಳೆದರು. ಈ ನಿಟ್ಟಿನಲ್ಲೂ ಲೇಖಕರ ಚಿಂತನೆ ಮುಂದೋಡುತ್ತದೆ. "ಸೂಫಿ ಪಂಥವನ್ನು ಅನುಭಾವಿ ಪಂಥವಾಗಿ ನೋಡುವ ಬದಲು ಒಂದು ಪರಕೀಯ ಮ್ಲೇಚ್ಛ ಧರ್ಮವನ್ನಾಗಿ ನೋಡಿರುವ ದೃಷ್ಟಿಕೋನಗಳು ಕನ್ನಡದಲ್ಲಿವೆ. ಆಶ್ಚರ್ಯವೆಂದರೆ, ೧೭ ನೇ ಶತಮಾನದಲ್ಲಿ ಗೋವಿಂದ ವೈದ್ಯ ತಾಳಿದ ಮನೋಭಾವವು ಈ ಶತಮಾನದ ಆಲೂರು ವೆಂಕಟರಾವ್, , ಗಳಗನಾಥ, ಚಿದಾನಂದಮೂರ್ತಿಯವರಲ್ಲಿ ಮುಂದುವರಿದಿರುವುದು. ವಸಾಹತುಶಾಹಿ ಚರಿತ್ರೆಯ ಆಕರಗಳಿಂದ ಹುಟ್ಟಿದ ಇಂಥ ಮನೋಭಾವಗಳಿಗೆ ಈ ನಾಡಿನಲ್ಲಿ ಬಂದೇನವಾಜ, ತಿಂತಿಣಿಮೋನಪ್ಪ ಇದ್ದರು ಎಂಬ ಅರಿವು ಹತ್ತಿರ ಸುಳಿಯಲೇ ಇಲ್ಲವೆನಿಸುತ್ತದೆ." ಎಂಬ ಮಾತುಗಳಲ್ಲಿ ತಥ್ಯವಿದೆ. ಇದು ಬರೀ ಗಳಗನಾಥ, ಆಲೂರ ಅಥವಾ ಇನ್ನೊಂದಿಬ್ಬರಿಗೆ ಮಾತ್ರ ಸಂಬಂಧಿಸಿದ್ದಲ್ಲ. ವಸಾಹತು ಶಾಹಿ ಚರಿತ್ರೆಯನ್ನು ಯಥಾವತ್ತಾಗಿ ಬೋಧಿಸುವ ನಮ್ಮ ಶೈಕ್ಷಣಿಕ ವ್ಯವಸ್ಥೆ , ಬುದ್ಧಿ ಜೀವಿಗಳೆನಿಸಿಕೊಂಡ ಎಲ್ಲರೂ ಇದಕ್ಕೆ ಕಾರಣರಾಗಿದ್ದಾರೆ.

ಸಾಹಿತ್ಯವನ್ನು ಮತೀಯ ಹಿನ್ನೆಲೆಯಲ್ಲಿ ನೋಡುವ ಕವಿಗಳನ್ನು ಜಾತಿ ಹಿನ್ನೆಲೆಯಲ್ಲಿ ವರ್ಗೀಕರಿಸುವ , ಧರ್ಮ ಎಂದ ತಕ್ಷಣ ಯಾವುದೋ ಒಂದು ಮತವನ್ನು ನೆನಪಿಸಿಕೊಳ್ಳುವ ಮನಸ್ಸುಗಳು ಇಂದು ಜಾಸ್ತಿಯಾಗಿವೆ. . ಈ ಪ್ರವೃತ್ತಿ ಸ್ವಾತಂತ್ರ್ಯ ಪೂರ್ವಕ್ಕಿಂತ ಮಿಗಿಲಾಗಿ ಸ್ವಾತಂತ್ರ್ಯೋತ್ತರದ ಕಾಲದಲ್ಲಿ, ಅದರಲ್ಲೂ ಇತ್ತೀಚೆಗೆ ಬಿರುಸಾಗಿ ನಡೆದಿದೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಬಂದೇನವಾಜ, ತಿಂತಿಣಿ ಮೋನಪ್ಪ ಮೊದಲಾದವರ ಹೆಸರೇ ಕೇಳದ ಇತಿಹಾಸಕಾರರು, ಸಂಶೋಧಕರು ಇದ್ದಾರೆಂದು ಹೇಳಲು ಹಿಂದೆ ಮುಂದೆ ನೋಡಬೇಕಾದ ಅಗತ್ಯವಿಲ್ಲ. ತಿಂತಿಣಿ ಮೋನಪ್ಪ, ಬಂದೇನವಾಜ ಮೊದಲಾದವರನ್ನು ನಮ್ಮ ನಾಡಿನ ಸಾಮಾನ್ಯ ಜನ ಬಲ್ಲರು. ಇತಿಹಾಸಕ್ಕೆ ಇತಿಹಾಸಕಾರರಿಗೆ, ಸೆಕ್ಯೂಲರ್ ವಾದವನ್ನು ಸಾರಿಸುವ ಸರಂಕಾರಕ್ಕೆ ಇಂಥವರಿದ್ದರೆಂಬುದೂ ತಿಳಿದಿಲ್ಲ. ಬಹುಶಃ ಇಂಥ ಅಧ್ಯಯನಗಳ ಜರೂರಿರುವುದು ಮನಸುಗಳ ಮಧ್ಯೆ ಎದ್ದು ನಿಂತಿರುವ ಗೋಡೆಗಳನ್ನು ನೆಲಸಮ ಮಾಡುವುದಕ್ಕೆ, ದೃಷ್ಟಿ ತಿದ್ದುವುದಕ್ಕೆ ಎಂಬ ಮಾತು ಅತಿಶಯೋಕ್ತಿ ಯಾಗಲಾರದು.

ಸಾಂಸ್ಕೃತಿಕ ಸೃಜನಶೀಲತೆಯ ಕುರಿತೂ ಲೇಖಕರು ಮತ್ತೆ ಮತ್ತೆ ಶೋಧದಲ್ಲಿ ತೊಡಗುತ್ತಾರೆ. ಅಲ್ಲದೇ ಸೂಫಿ ಸಂತರಲ್ಲಿ ಕಂಡುಬರುವ ವ್ಯಕ್ತವಾಗುವ ಸಂದರ್ಭ ಸನ್ನಿವೇಶಗಳತ್ತಲೂ ನಮ್ಮನ್ನು ಕರೆದೊಯ್ಯುತ್ತಾರೆ. " ೧೮, ೧೯ ನೇ ಶತಮಾನಗಳ ಈ ದಖನಿ ಕನ್ನಡ ಅವಧೂತರಿಗೆ ಸೂಫಿ ಪರಂಪರೆಗಿಂದ ನಾಥ ಸಿದ್ಧ ಪರಂಪರೆಯ ಸಂಬಂಧಗಳು ಘನಿಷ್ಠವಾದವು. ಆದರೆ ಇಸ್ಲಾಮ್ ಧರ್ಮದ ಆಚರಣೆ ಪುರಾಣಗಳ ಮೂಲಕವೇ ಈ ಸಂಬಂಧಗಳು ಹಾಯುತ್ತಿದ್ದವು. ಲಾ ಇಲಾಹ ಇಲ್ಲಲ್ಲಾಹ (ದೇವರೊಬ್ಬನೇ ಬೇರೆ ದೇವರಿಲ್ಲ) ಎಂಬ ಇಸ್ಲಾಮಿನ ಮೂಲ ಮಂತ್ರವನ್ನು ಹಸನಸಾಬನು ಅಲ್ಲಲ್ಲಾ ಇಲ್ಲಿಲ್ಲಾ ಎನ್ನಲಿಲ್ಲ."

ಶಿವನೆಲ್ಲಿಲ್ಲಾ ಎಂದು ಮುರಿದು ಕಟ್ಟುವುದನ್ನು ಗಮನಿಸಬೇಕು. ಶಿಶುನಾಳನಲ್ಲಿ ಇಸ್ಲಾಮಿ ಪುರಾಣದ ನೆನಪು ತುಂಬ ದಟ್ಟವಾಗಿ ಬರುತ್ತದೆ. ರಾಮಾಯಣ, ಅದರಲ್ಲಿಯೂ ಮೊಹರಂ ಪುರಾಣದ ಮಹಾಭಾರತಗಳ ಮಿತ್‌ಗಳೊಂದಿಗೆ ಇಸ್ಲಾಮಿ ಪುರಾಣವನ್ನು ಸಲೀಸಾಗಿ ಕಲಸುತ್ತಾ ಬೆಡಗಿನ ರೂಪಕಗಳನ್ನು ನಿರ್ಮಿಸುವ ಶಿಶುನಾಳನ ಕೌಶಲ ಕರ್ನಾಟಕ ಸಂಸ್ಕೃತಿಯ ವಿಸ್ಮಯಗಳಲ್ಲಿ ಒಂದು. ಹಲವು ಪರಂಪರೆಗಳ ಜತೆ ಗುದ್ವಾಡಿ ಬಾಷೆಯನ್ನು ತತ್ವವನ್ನು, ಪುರಾಣ ರೂಪಕವನ್ನು ಪಡೆದು ಕೊಳ್ಳುವುದು. ಅರ್ಥಪೂರ್ಣವಾದ ಸಾಂಸ್ಕೃತಿಕ ಸೃಜನಶೀಲತೆ" ಎಂಬ ನಿಲುವಿಗೆ ತಂದು ನಮ್ಮನ್ನು ನಿಲ್ಲಿಸುತ್ತಾರೆ. ಕೆಲವು ಕಡೆ ಪ್ರಶ್ನೆ ಉಪ ಪ್ರಶ್ನೆಗಳ ನೆತ್ತಿ ಉತ್ತರ ಕಂಡುಕೊಳ್ಳಲು ನಮ್ಮನ್ನೇ ತೊಡಗಿಸುತ್ತಾರೆ. ಮತ್ತೆ ಅಲ್ಲಲ್ಲಿ ಯಥಾಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾರೆ. ಒಂದೆರಡು ಕಡೆ ಹಾಗಾಗಬಾರದಿತ್ತು. ಹೀಗೆ ಮಾಡುವುದು ಸರಿಯಲ್ಲವೆ ? ಎಂಬ ಸಮಕಾಲೀನ ವಿದ್ಯಮಾನಗಳ ಬಗೆಗೆ ಪ್ರತಿಭಟನೆಯೂ ನೇರವಾಗಿ ಮೂಡಿ ಬಂದಿದೆ. ಅಲ್ಲಿ ಖಿನ್ನತೆಯಿದೆ; ಹೀಗಾಗುತ್ತಿದೆಯಲ್ಲಾ ಎಂಬ ಬೇಸರವೂ ವ್ಯಕ್ತವಾಗಿದೆ. ಉದಾಹರಣೆಗೆ ಈ ಕೆಳಗಿನ ಸಾಲುಗಳನ್ನು ಗಮನಿಸಬಹುದು.

"ಶಿಶುನಾಳನು ಕಳೆದ ಹತ್ತುವರ್ಷಗಳಿಂದ ಕನ್ನಡ ಸಾಹಿತ್ಯ , ಸಂಸ್ಕೃತಿಗಳ ಚರ್ಚೆಯಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತಿದ್ದಾನೆ. ಸಿನಿಮಾ, ಕ್ಯಾಸೆಟ್ಟು, ಪುಸ್ತಕಗಳ ಮೂಲಕ ಶಿಶುನಾಳ ಕರ್ನಾಟಕದ ಶೈಕ್ಷಣಿಕ ವಲಯಕ್ಕೆ ಈಗೀಗ ಪರಿಚಿತವಾಗಿರಬಹುದು. ಆದರೆ ಅವನು ಮೂಲತಃ ಗದುಗು ಸೀಮೆಯ ಜನಸಮುದಾಯದಲ್ಲಿ ಬೆರೆತು ಹೋಗಿರುವವನು. ಸಮಸ್ಯೆ ಎಂದರೆ "ಮುಸ್ಲಿಮ"ನಾಗಿ ಗೋವಿಂದಭಟ್ಟನಂಥ "ಹಿಂದು" ಗುರುವನ್ನು ಪಡೆದು, ಕನ್ನಡದಲ್ಲಿ ಪದರಚನೆ ಮಾಡಿರುವ ಸಂಗತಿಯು ಸಾಮರಸ್ಯವಾದಿಗಳ ಪಾಲಿಗೆ ಸಲೀಸಾಗಿ ಒದಗಿರುವ ನಿದರ್ಶನವಾಗಿರುವುದು. ಸಂಸ್ಕೃತಿಯ ಸೂಕ್ಷ್ಮಗಳಿರುವ ಸಂಗತಿಯೊಂದು, ಧಾರ್ಮಿಕ ಸಾಮರಸ್ಯಕ್ಕೆ ಬೇಡಿಕೆಯಿರುವ ಈ ದಿನಗಳಲ್ಲಿ, ಮಾರಾಟದ ಸರಕಾಗುವುದಕ್ಕೆ, ಶಿಶುನಾಳನ ಬಳಕೆಯೇ ಸಾಕ್ಷಿ. ಸಾಂಸ್ಕೃತಿಕ ಸೂಕ್ಷ್ಮಸಂಗತಿಯೊಂದು ಮಾರಾಟಕ್ಕೆ ಬಳಕೆಯಾಗುತ್ತಿರುವುದರ ಕುರಿತು ಲೇಖಕರು ವ್ಯಕ್ತಪಡಿಸಿರುವ ಖೇದ ಒಂದು ಹಂತದವರೆಗೆ ನಿಜವಾದರೂ ಇದಕ್ಕೆ ಇನ್ನೊಂದು ಮುಖವಿದೆ ಎಂಬುದನ್ನು ನಾವು ಕಂಡುಕೊಳ್ಳಬೇಕಾಗುತ್ತದೆ. ಶರೀಫ ಬರೇ Ô ್ರ ್ರಿ ್ರ d ? ಸೂಫಿಗಳನ್ನು ಸಂತರನ್ನು ಯಾವುದೋ ಒಂದು ಪ್ರಾಂತಕ್ಕೆ ಯಾಕೆ ಕಟ್ಟಿಹಾಕಬೇಕು? ಇಂಥವರೂ ನಮ್ಮ ನಡುವೆ ಆಗಿಹೋಗಿದ್ದರೆಂಬ ಅರಿವಿಲ್ಲದೇ ಹೋದರೆ ಭಾವೀ ಜನಾಂಗ ವಸ್ತುಸ್ಥಿತಿಯೇ ನಂಬುದುರ ಗೊಡವೆ ಇಲ್ಲದ ಪ್ರಕೃತ ಇತಿಹಾಸವನ್ನು ಓದಿ ಗೋವಿಂದ ವೈದ್ಯನಂಥ ಮನೋಭಾವವನ್ನು ತಾಳುವ ಸಾಧ್ಯತೆಗಳಿವೆಯಲ್ಲವೇ.? ಇವತ್ತು ಷರೀಫ, ನಾಳೆ ಸೂಫಿಗಳು, ನಾಡಿದ್ದು ತುರ್ತಾಗಿ ಬೇಕಾಗುವ ಮತ್ತಾರೋ ಮಾರಾಟಕ್ಕೆ ವಸ್ತುಗಳಾದರೆ ಅದರಲ್ಲೇನು ಆಶ್ಚರ್ಯವಿಲ್ಲ. ಇದಕ್ಕೆಲ್ಲ ಕಾರಣ ನಮ್ಮ ರಾಜಕಾರಣಗಳು ಮಾಡಿರುವ ನೈತಿಕ ದಿವಾಳಿತನವೇ ಆಗಿದೆ. ಯಾವುದನ್ನೂ ನಾವು

ಗಂಭೀರವಾಗಿ ಪರಿಗಣಿಸದೇ, ಸ್ಪಂದಿಸದೇ ನಿರ್ಲಕ್ಷ್ಯದಿಂದಿರುವಾಗ ಸಾಂಸ್ಕೃತಿಕ ಸಂವೇದನೆ ಎಂಬ ಪರಿಕಲ್ಪನೆಯೂ ಸಹ ಅರ್ಥವನ್ನು ಕಳೆದುಕೊಳ್ಳುತ್ತದೆ. "ಬಹಳಷ್ಟು ಅಧ್ಯಯನ" ಸಂಶೋಧನೆಗಳು ಶೈಕ್ಷಣಿಕ ಅವಶ್ಯಕತೆಯಿಂದ ಹುಟ್ಟಿದವು. ಅವಕ್ಕೆ ಸಾಂಸ್ಕೃತಿ ತುರ್ತುಗಳಿಲ್ಲ." ಎಂಬ ಲೇಖಕರ ಮಾತಿನಲ್ಲಿ ನಿಜಾಂಶವಿದೆ. ಈ ಕುರಿತು ನಾವೆಲ್ಲ ಗಂಭೀರವಾಗಿ ಯೋಚಿಸಬೇಕಾದ ಅಗತ್ಯವಿದೆ.

"ಕರ್ನಾಟಕದ ಸೂಫಿಗಳು" ಕೃತಿ ಶೈಕ್ಷಣಿಕ ಅವಶ್ಯಕತೆಯಿಂದ ಕಟ್ಟಿ ಬಿಟ್ಟ ಕೂಸಲ್ಲ. ಅನೂಚಾನವಾಗಿ ಸಾಗಿ ಬಂದ ವಸಾಹತುಶಾಹಿ ಚಿಂತನಕ್ರಮಕ್ಕಿಂತ, ಭಿನ್ನವಾಗಿ ಯೋಚಿಸುವ, ಕಾಣುವ, ಮುಗ್ಧತೆ, ಕುತೂಹಲ, ಸಾಧ್ಯಾಸಾಧ್ಯತೆ, ಕಳಕಳಿ, ಚಿಕಿತ್ಸಕ ದೃಷ್ಟಿಕೋನ, ಸ್ಪಷ್ಟತೆ ಮೊದಲಾದ ಅಂಶಗಳನ್ನು ಒಳಗೊಂಡ ಅನನ್ಯ ಸಾಂಸ್ಕೃತಿಕ ಹೊಣೆಗಾರಿಕೆಯನ್ನು ಬಿಂಬಿಸುವ ಕೃತಿಯಿದು. ಇತಿಹಾಸಕಾರರು ಬರೆದ ಚರಿತ್ರೆಗಿಂತ ಜನಸಮುದಾಯಗಳು ಕಟ್ಟಿಕೊಟ್ಟ, ತಲೆತಲಾಂತರದಿಂದ ಅವರು ಹೊತ್ತು ತಂದ ಚರಿತ್ರೆ ಇಲ್ಲಿ ದಾಖಲಾಗಿದೆ. ಸಾಂಸ್ಕೃತಿಕ ನಿಜಾಂಶವನ್ನು ಕಂಡುಕೊಳ್ಳಲು ಹಪಹಪಿಸುವ ಲೇಖಕರ ಶ್ರದ್ಧೆ ಶ್ರಮ ಸಾರ್ಥಕವಾಗಿದೆ. ಇಲ್ಲಿರುವುದು ಬರೀ ಸಮಕಾಲೀನ ಸಮುದಾಯಗಳ ಸೃಜನಶೀಲ ಹುಡುಕಾಟ ಮಾತ್ರವಲ್ಲ, ಸಾಂಗತ್ಯ ವಿರುವ ಸೃಜನಶೀಲ ಅಧ್ಯಯನವೂ ಅರ್ಥಪೂರ್ಣವಾಗಿ ಪಡಿಮೂಡಿದೆ. ಇಂದು ನಿಜವಾಗಿ ನಡೆಯಬೇಕಾದ ಅಧ್ಯಯನಕ್ಕೊಂದು ಮಾರ್ಗವನ್ನು ಲೇಖಕರಿಲ್ಲಿ ಹಾಕಿಕೊಟ್ಟಿದ್ದಾರೆ.

ಮೀಡಿಯಂ ಪಿಡುಗು: ಒರೆಕ್ಕನ ಚಾಳಿ

ಚಂದ್ರಶೇಖರ ಪಾಟೀಲ

ನನ್ನ ಬಂಧು ನಟರಾಜ ಗೌರಿಕೆರೆಮಠ -(ಧಾರವಾಡದಲ್ಲಿರುವ ಅವರ ಚಂದನ ಮುದ್ರಣದಲ್ಲಿಯೇ 'ಸಂಕ್ರಮಣ' ಪ್ರಿಂಟಾಗಿ ನಿಮ್ಮೆಲ್ಲರ ಕೈ ಸೇರುತ್ತಿರುವುದು.) ನಿನ್ನೆ ಅದು ಇದು ಮಾತಾಡುತ್ತ ಗೌರಿಯ ಶಿಕ್ಷಣದ ಬಗ್ಗೆ ಹೇಳುತ್ತಿದ್ದರು.

ಗೌರಿ ನಟರಾಜರ ಒಬ್ಬಳೇ ಮಗಳು. ಯಾವುದನ್ನೂ ಹೆಚ್ಚು ಸೀರಿಯಸ್ ತೆಗೆದುಕೊಳ್ಳದೇ, ಎಷ್ಟು ಬೇಕೋ ಅಷ್ಟು ಸ್ಟಡಿ ಮಾಡುತ್ತಾ, ಟೀವಿ ನೋಡುತ್ತಾ, ಸೂಟಿ ಬಂದಾಗ ಮುಂಜಾನೆ ಹತ್ತರ ವರೆಗೆ ಬಿದ್ದೆ ಹೊಡೆಯುತ್ತಾ, ಹರಟೆ ಹೊಡೆಯುತ್ತಾ, ಕುಲು ಕುಲು ನಗುತ್ತಾ ಕಾಡು ಹೂವಿನಂತೆ, ಅಥವಾ ಅಷ್ಟೇ ಸಹಜವಾಗಿ ಬೆಳೆಯುವ ಕುಂಡಲೆಯ ಗಿಡದಂತೆ, ಬೆಳೆಯುತ್ತಿರುವವಳು ಗೌರಿ. ಮನೆಯ ಸಮೀಪದ ಒಂದು ಒಳ್ಳೆಯ ಶಾಲೆಯಲ್ಲಿ ಶಿಕ್ಷಣ. ಕನ್ನಡ ಮಾಧ್ಯಮ. ರ್‍ಯಾಂಕು - ಮಾರ್ಕುಗಳ ಬಗ್ಗೆ ತಲೆಗೆ ಹಚ್ಚಿಕೊಳ್ಳದಿದ್ದರೂ ಎಲ್ಲ ವಿಷಯಗಳಲ್ಲಿ ಅರವತ್ತೋ ಎಪ್ಪತ್ತೋ ಅಂಕ ಗಳಿಕೆ.

ಸಮಸ್ಯೆ ಸುರುವಾದದ್ದು ಗೌರಿ ನಾಲ್ಕನೇ ಇಯತ್ತೆ ಪಾಸಾದನಂತರ. ಗೌರಿ 'ಜಾಣ' ವಿದ್ಯಾರ್ಥಿನಿಯರಲ್ಲಿ ಒಬ್ಬಳಾಗಿದ್ದರಿಂದ ಅವಳನ್ನು ಕೆಲವೇ ಕೆಲವರಲ್ಲಿ ಒಬ್ಬಳನ್ನಾಗಿ 'ಆಯ್ಕೆ' ಮಾಡಿ ಐದನೇ ತರಗತಿಯಿಂದ ಅದೇ ಶಾಲೆಯಲ್ಲಿ ಸಮಾನಾಂತರದಲ್ಲಿ ನಡೆಯುತ್ತಿದ್ದ ಇಂಗ್ಲಿಷ್ ಮೀಡಿಯಂಗೆ ಹಾಕಿಕೊಳ್ಳುವುದಾಗಿ ಹೇಳಿದರು ಶಾಲೆಯ ಹೆಡ್ ಮ್ಯಾಡಂ ಅವರು. ಪಾಲಕರಿಗೆ ಸ್ವಲ್ಪ ಆತಂಕದ ವಿಷಯವೇ. ಈ ಬಗ್ಗೆ ಗೌರಿಯ 'ಅಭಿಪ್ರಾಯ' ಕೇಳಿದರೋ ಇಲ್ಲವೋ ತಿಳಿಯದು. ಆದರೆ ಶಾಲೆಗೆ ಒಳ್ಳೇ ಶಾಲೆ ಎಂಬ ಹೆಸರಿದೆ. ಕ್ರಿಶ್ಚನ್ ಸಂಸ್ಥೆಯಾದ್ದರಿಂದ ಕಲಿಕೆಯ ಕ್ವಾಲಿಟಿಯ ಬಗ್ಗೆ ಚಿಂತಿಸಬೇಕಾಗಿಲ್ಲ. ಗೌರಿ ಇಂಗ್ಲಿಷ್ ಪಿಕಪ್ ಮಾಡಿಕೊಂಡಾಳು ಎಂಬ ನಿರೀಕ್ಷೆಯಿಂದ ಆ ಮೀಡಿಯಂಗೆ ಹಾಕಲಾಯಿತು.

ಮುಂದೆ ೨ - ೩ ತಿಂಗಳ ನಂತರ ನಟರಾಜ ಮತ್ತು ಜಯಶ್ರೀ ಇಬ್ಬರ ದನಿಯಲ್ಲಿನ್ನೂ ಕಾತರ

ಮೂಡಿತ್ತು. ಕಾರಣ: ಈ ಮೊದಲು ಎಲ್ಲ ವಿಷಯಗಳಲ್ಲಿ ತೃಪ್ತಿಕರ ಎನ್ನಬಹುದಾದ ರೀತಿಯಲ್ಲಿ ಅಂಕ ಗಳಿಸುತ್ತಿದ್ದ ಮಗಳು ಈಗ ಅದೇ ವಿಷಯಗಳಲ್ಲಿ ಫೇಲ್ ಆಗುತ್ತಿದ್ದಾಳೆ! ಅಲ್ಲದೆ ಆಗೀಗ ದೈಹಿಕ ಅನಾರೋಗ್ಯ, ಜಡ್ಡು, ಜಾಪತ್ರಿ. ಏನು ಮಾಡೋಣ ಅಂದರು ನಟರಾಜ. ಇಂಥ ಅನೇಕ ಕೇಸುಗಳನ್ನು ಬಲ್ಲ ನಾನು, ಈಗಿಂದೀಗಲೇ ಗೌರಿಯನ್ನು ಕನ್ನಡ ಮೀಡಿಯಮ್ಮಿಗೆ ಹಾಕಿರಿ ಅಂತ 'ಉಚಿತ' ಸಲಹೆ ಕೊಟ್ಟೆ. ಏನು ಮಾಡಿದರೋ ಗೊತ್ತಿಲ್ಲ.

ಮೊನ್ನೆ ಧಾರವಾಡಕ್ಕೆ ಹೋದಾಗ ಗೌರಿ ಐದನೇ ಇಯತ್ತೆ ಪಾಸಾಗಿ ಆರಕ್ಕೆ ಬಂದಿದ್ದಳು. ಯಾವ ಮೀಡಿಯಂ, ಯಾವ ವಿಷಯದಲ್ಲಿ ಎಷ್ಟು ಸ್ಕೋರು ಇತ್ಯಾದಿ ಏನೂ ಕೇಳಲು ಹೋಗಲಿಲ್ಲ. ಅವಳೂ ಹೇಳಲಿಲ್ಲ.

*

ಮೇಲಿನ ಪ್ರಸಂಗ ನಾನು ವಿವರಿಸಿದ್ದು, ಕನ್ನಡ ಮಾಧ್ಯಮ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಇಂಗ್ಲಿಷ್ ಮಾಧ್ಯಮಕ್ಕಿಂತ ಒಳ್ಳೆಯದು ಎಂಬ ನನ್ನ ವಾದಕ್ಕೆ ಪೂರಕವಾಗಿ ಅಂತ ಅಲ್ಲ. ಇಂದು ಮೀಡಿಯಂ ಎಂಬುದು ಕೇವಲ ಶೈಕ್ಷಣಿಕ ಸಮಸ್ಯೆಯಾಗಿ ಉಳಿಯದೆ ಮಾನಸಿಕ ಸ್ಥಿತಿಯ, ಕೌಟುಂಬಿಕ ವಾತಾವರಣದ ಹಾಗೂ ಸಮುದಾಯದ ಸೌಖ್ಯದ ಸಮಸ್ಯೆಯಾಗಿದ್ದರೂ ಅದರ ಬಗ್ಗೆ ನಾವು ಗಂಭೀರವಾಗಿ ಯೋಚನೆ ಮಾಡುತ್ತಿಲ್ಲವಲ್ಲ - ಇದು ನನ್ನ ಕಳವಳ.

ಎಷ್ಟೋ ವರ್ಷದ ಹಿಂದೆ, ಯಾವಾಗಲೋ ಎಲ್ಲಿಂದಲೋ ಎಲ್ಲಿಗೋ ಟ್ರೇನಿನಲ್ಲಿ ಹೊರಟಿದ್ದೆ. ಸೆಕೆಂಡ್ ಕ್ಲಾಸ್ ಬೋಗಿ. ಎದುರಿನ ಸೀಟಿನಲ್ಲಿ ತಾಯಿ ಮತ್ತು ಮಗ. ನೋಡಿದರೇ ಗೊತ್ತಾಗಬೇಕು ಸುಸಂಸ್ಕೃತ ಹಿನ್ನೆಲೆ. ಮಗ ಕಿಡಕಿಯಲ್ಲಿ ಹಣಿಕೆ ಹಾಕಿ ಅದೇನು ಅಮ್ಮಾ ಅದೇನು ಅಮ್ಮಾ ಅಂತ ಕೇಳುತ್ತಿದ್ದಾನೆ. ತಾಯಿ ಗಂಭೀರವದನೆ. (ಸೆಕೆಂಡ್ ಕ್ಲಾಸ್‌ನಲ್ಲಿ ಕುಂತವರು ಅಷ್ಟುಯಾಕೆ ಮೈ - ಮುಖ ಬಿಗಿ ಹಿಡಿಯಬೇಕೋ ನನಗೆ ಅರ್ಥವಾಗಲಿಲ್ಲ) ಮಗ ಸಹಜವಾಗಿ ಕನ್ನಡದಲ್ಲಿ ಪ್ರಶ್ನೆ ಕೇಳಿದಾಗೆಲ್ಲ ತಾಯಿ ತನ್ನ ಸ್ಟೈಲಿಶ್ ಆದ ಇಂಗ್ಲಿಷಿನಲ್ಲಿ ಅವನಿಗೆ ದಬಾಯಿಸುತ್ತ, ಬುದ್ಧಿ ಹೇಳುತ್ತಿದ್ದಳು. ಮಗನಿಗೆ ಇಂಗ್ಲಿಷ್ ತಿಳಿಯುತ್ತದೆ, ಆದರೆ ಕನ್ನಡದಲ್ಲಿ ಮಾತು. ತಾಯಿ ಕೂಡ ಕನ್ನಡಾಂಬೆಯೇ ಆದರೆ ಮಾತೆಲ್ಲ ಇಂಗ್ಲಿಷ್.

ಇಂಥ ಪ್ರಸಂಗಗಳು ನಡೆಯುತ್ತಿರುವಾಗೆಲ್ಲ ನಾನು ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತೇನೆ- ಎದುರಿಗಿದ್ದವರ ಗಮನಕ್ಕೆ ಬಾರದ ಹಾಗೆ. ಆ ತಾಯಿಯನ್ನು ಕೇಳಬೇಕೆಂದುಕೊಂಡು ಅನೇಕ ಪ್ರಶ್ನೆಗಳನ್ನು ಮನಸ್ಸಿನಲ್ಲೇ ಕಂಪೋಜ್ ಮಾಡುತ್ತಿದ್ದೆ. ಕನ್ನಡದಲ್ಲಿ ಕೇಳಲೋ ಇಂಗ್ಲಿಷ್‌ನಲ್ಲಿ ಕೇಳಲೋ ಎಂಬ ಹ್ಯಾಮ್ಲೆಟ್ - ದ್ವಂದ್ವ ನನಗೆ. ಕನ್ನಡದಲ್ಲಿ ಏನಾದರೂ ಕೇಳಿದರೆ ಅವಳು 'ಗೆಟೌ ಶಟಪ್' ಅಂದು ಬಿಟ್ಟರೆ ? ಹಾಗೆ ಅನ್ನದಿದ್ದರೂ ಕಣ್ಣಿನ ನೋಟದಲ್ಲಿ, ತುಟಿಯ ಬಿಗಿತದಲ್ಲಿ ಅಂಥದೇ ಮಾತನ್ನು ಮೌನದಲ್ಲಿ ಸೂಚಿಸಿದರೆ ? ಇಷ್ಟೆಲ್ಲ ಗೊಂದಲದಲ್ಲಿ ನಾನು ಮುಳುಗಿದಾಗ ಮಗನ ಕನ್ನಡ ಹಾಗೂ ತಾಯಿಯ ಇಂಗ್ಲಿಷ್ ಜುಗಲ್‌ಬಂದಿ ನಡೆದೇ

ಇತ್ತು. ಯಾವುದೋ ಸ್ಟೇಶನ್ನಿನಲ್ಲಿ ಇಳಿದರು. ಆ ಪ್ರಸಂಗ ನನ್ನೊಳಗೆ ಇಂಗಿ ಇಂಗಿ ನನ್ನ ಅಗಾಧ ಅಂತರ್ಜಲದ ನಿಧಿಯಲ್ಲಿ ಒಂದು ಬಿಂದುವಾಗಿ ಸೇರಿ ಹೋಯಿತು.

*

ಇದಕ್ಕೆ ಹೊಂದಿಕೊಂಡೇ ಇನ್ನೊಂದು ಪ್ರಸಂಗದ ನೆನಪು. ನೆನಪು ಅಂದರೆ ಅನೇಕ ವರ್ಷಗಳ ಹಿಂದಿನದೇ ಅಲ್ಲವೇ?.. ಮಗನನ್ನೋ ಮಗಳನ್ನೋ ಶಾಲೆಗೆ ಬಿಡಲು ಹೋಗಿದ್ದೆ. ಅದೇ ಶಾಲೆ. ಈಗ ಗೌರಿ ಕಲಿಯುತ್ತಿರುವುದು. ಪರಿಚಿತರೊಬ್ಬರು ಮಗನೊಂದಿಗೆ ಬಂದಿದ್ದರು. ಶಾಲೆಯ ಕನ್ನಡ ಮಾಧ್ಯಮಕ್ಕೆ ಅವನನ್ನು ಸೇರಿಸಬೇಕಿತ್ತು.

'ನೋಡ್ರಿ ಸಾಹೇಬ್ರ. ನನ್ನ ಹೇಣ್ತಿ ಕೂಡ ಜಗಳಾಡಿ ಈ ಹುಡಗನ್ನ ಇಲ್ಲಿಗೆ ಕರಕಂಡು ಬಂದನಿ ನೋಡ್ರಿ' ಅಂದರವರು. ಇಂಥ ಮಾತನ್ನು ಅನೇಕ ಬಾಯಿಗಳಿಂದ ಕೇಳಿದ್ದ ನನಗೆ ಆಶ್ಚರ್ಯವಾಗಲಿಲ್ಲ. ಪಾನಗೋಷ್ಠಿಗಳಲ್ಲಿ ನನ್ನ ಅನೇಕ ಸ್ನೇಹಿತರು ಈ ಬಗೆಯ ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಮತ್ತೆ ಮತ್ತೆ ಅವರು ಬೊಟ್ಟು ಮಾಡಿ ತೋರಿಸುವುದು ಮನೆಯ ಹೆಣ್ಣುಮಕ್ಕಳನ್ನೇ.

ಮನೆಯೆ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು. ಇಂಥ ಜನನಿಯೇ ಇಂದು ಕನ್ನಡ ನಾಡಿನಲ್ಲಿ ಕನ್ನಡ - ವಿರೋಧಿಯಾಗಿದ್ದಾಳೆಯೇ ?

ನಮ್ಮ ಮನೆ ಮಗ್ಗುಲಿಗೆ ಶ್ರೀಮಂತರೊಬ್ಬರ ಮನೆ. ಆಗರ್ಭ ಶ್ರೀಮಂತರೇನಲ್ಲ. ಹಳ್ಳಿಯ ಮೂಲದಿಂದ ಬಂದು ವ್ಯಾಪಾರ ಗೀಪಾರ ಮಾಡಿ ಉಳ್ಳವರಾದವರು. ಸುಶಿಕ್ಷಿತರಲ್ಲ. ವ್ಯವಹಾರಕ್ಕೆಷ್ಟು ಬೇಕೋ ಅಷ್ಟು ಕನ್ನಡ ಕಲಿತವರು. ಆದರೆ ಅವರ ಮೊಮ್ಮಕ್ಕಳು ಮಾತ್ರ ಕಾನ್ವೆಂಟ್ ಕಂದಮ್ಮಗಳು. ಒಮ್ಮೆ ಆ ಮನೆಯ ಯಜಮಾನಿ (ಅವಳಿಗೇ ಸ್ವತಃ ಸಹಿ ಮಾಡಲು ಬರುವುದಿಲ್ಲ.) ಬಹಳ ಉಮೇದಿನಿಂದ, ಖುಶಿಯಿಂದ ಹೇಳುತ್ತಿದ್ದಳು ಮೊಮ್ಮಗಳೊಬ್ಬಳ ಬಗ್ಗೆ : "ನೋಡ್ರಿ, ಅಣ್ಣಾರ. ನಮ್ಮ ಟಿಂಕಿ ಕನ್ನಡದಾಗs ಪೇಲಾಗ್ಯಾಳ್ರಿ"

ಕನ್ನಡದಲ್ಲಿ ' ಪೇಲ್' ಆಗುವುದು ಈ ಮದುಕಿಗೆ ಅಭಿಮಾನದ ಸಂಗತಿ! ಇದು ಪ್ರತಿಷ್ಠೆಯೋ, ಅಜ್ಞಾನವೋ, ಕೀಳರಿಮೆಯೋ , ಮೇಲರಿಮೆಯೋ ಗೊತ್ತಾಗದಂಥ ಪರಿಸ್ಥಿತಿ. ವಿಚಿತ್ರವೆಂದರೆ, ನನ್ನ ಯುನಿವರ್ಸಿಟಿ ಕಲೀಗರೊಬ್ಬರು ತಮ್ಮ ಸಂತಾನವೊಂದರ ಬಗ್ಗೆ ಇದೇ ಮಾತನ್ನು ಇಷ್ಟೇ ಆನಂದದಿಂದ ಹೇಳುತ್ತಿದ್ದರು.

ನಮ್ಮ ಶಹರಗಳ ಮಧ್ಯಮ ವರ್ಗದ ಸ್ಥಿತಿ ನೋಡಿರಿ. ತಂದೆ ಆಫೀಸಿಗೆ ಹೋಗುತ್ತಾನೆ. ಅಥವಾ ಆಫೀಸೆಂದು ಹೇಳಿ ಅಂತೂ ಮನೆ ಬಿಟ್ಟು ಹೋಗುತ್ತಾನೆ. ಮಕ್ಕಳ ಜವಾಬ್ದಾರಿ ತಾಯಿಯದು. ಮಗ್ಗಲು ಮನೆಯಲ್ಲಿ ಕಾರು ಇದೆ, ಕಲರ್ ಟೀವಿ ಇದೆ. ಆ ಮನೆಯ ಮಕ್ಕಳು ಟ್ರಿಮ್ಮಾಗಿ ಡ್ರೆಸ್ ಮಾಡಿಕೊಂಡು ಕಾಲ್‌ಗೇಟ್ ನಗೆ ಚೆಲ್ಲುತ್ತ ಸ್ಕೂಲಿಗೆ ಹೋಗುವ ಮುಂದೆ ಮಮ್ಮಿ ಬಾಗಿಲಿಗೆ ಒರಗಿ ನಿಂತು ಬಾಯ್ ಅನ್ನುತ್ತಾಳೆ. ಈ ಮನೆಯ ಮಗು ಇವನ್ನೆಲ್ಲ

ಕಣ್ತುಂಬ ತುಂಬಿಕೊಳ್ಳುತ್ತದೆ. ಆ ಕಣ್ಣಿನ ಕನಸು, ಆ ಕನಸಿನ ನೋವು, ತಾಯಿಗೆ ಅರ್ಥವಾಗುತ್ತದೆ. ಅವರಿಗಿಂತ ನಾವೇನು ಕಡಿಮೆ? ಬರೋಬರಿ. ಗಂಡ ಸಂಜೆಯ ವೇಳೆಗೆ ಆಫೀಸಿನಿಂದ ವಾಪಾಸಾದ ಮೇಲೆ ಕಿರಿಕಿರಿ ಪ್ರಾರಂಭ. ಮಕ್ಕಳ ಶಿಕ್ಷಣದ ಮೀಡಿಯಂನಂಥ 'ಸಣ್ಣ' ವಿಷಯದ ಬಗ್ಗೆ ಹಗಲೂ ರಾತ್ರಿ ಹೆಂಡತಿ ಕೂಡ ಜಗಳಾಡಿ ಸುಖ ವಂಚಿತನಾಗಬೇಕೇ ಗಂಡ ?

ಗೆಳೆಯರೊಂದಿಗೆ ಗೋಳಾಟ : ನಮ್ಮ ಮನೀ ಹೆಣ್ಣುಮಕ್ಕಳ ಮಾತು ಹ್ಯಾಂಗ ಮೀರಬೇಕ್ರಿ.

ಆದರೆ ಹೆಂಡಂದಿರ ಗೆರೆಗಳನ್ನು ಮೀರಲಾಗದ ಇಂಥ ಈ ಲೋಕದ ಗಂಡರ ವಾದ ವೈಖರಿಯನ್ನು ಮೈಸೂರಿನ ನಮ್ಮ ಮೀರಾ ನಾಯಕ ಅವರು ಒಪ್ಪುವದಿಲ್ಲ. (ಮೀರಾ ಅವರು ಮೈಸೂರು ಜಿಲ್ಲಾ ಕನ್ನಡ ಜಾಗೃತಿ ಸಮಿತಿಯ ಸದಸ್ಯೆ. ಪ್ರಾಧ್ಯಾಪಕಿ. ಜಿ.ಎಚ್. ನಾಯಕ ಅವರ ಬಾಳಸಂಗಾತಿ) ಅವರು ಎದುರಿಗೆ ಕುಳಿತ (ನಮ್ಮಂಥ) ಗಂಡಸರನ್ನು ನೇರವಾಗಿ ಝಾಡಿಸುತ್ತಾರೆ : "ನಿಮಗ ಹೆಂಡ ಕುಡಿಯೋಮುಂದ ಹೆಂಡತಿ ಪರ್ಮಿಶನ್ ಬೇಕಾಗೋದಿಲ್ಲ. ಜೂಜು ಆಡೋಮುಂದ ಅವರ ಅಭಿಪ್ರಾಯ ಕೇಳೋದಿಲ್ಲ. ಈ ವಿಷಯಕ್ಕೆ ಮಾತ್ರ ಯಾಕೆ ಹೆಂಡಂದಿರ ಹೆಸರು ಮುಂದೆ ಮಾಡ್ತೀರಿ?"

*

ನಿಜ. ಹೆಂಡಂದಿರ ಮೇಲೆ ಅಪವಾದ ಹೊರಿಸಿ, ಪಲಾಯನ ಗೈಯುವ ಅನೇಕ ಗಂಡಂದಿರು ಕೂಡ ಒಳಗೊಳಗೇ ತಮ್ಮ ಮಕ್ಕಳು ಇಂಗ್ಲಿಷ್ ಮೀಡಿಯಂದಲ್ಲಿ ಓದಲಿ ಎಂದೇ ಬಯಕೆ ಹೊಂದಿರುತ್ತಾರೆ. ಸಾರ್ವಜನಿಕ ವೇದಿಕೆಗಳ ಮೇಲಿಂದ ಕನ್ನಡದ ಪಾಂಚಜನ್ಯ ಊದುವವರು ಮಾತ್ರ ತಮ್ಮ ಮಕ್ಕಳು, ಮೊಮ್ಮಕ್ಕಳ ಬಗ್ಗೆ ಇನ್ನೂ 'ಗಂಭೀರ' ವಾದ ವಾದಗಳ ಆಶ್ರಯ ಪಡೆಯಬೇಕಾಗುತ್ತದೆ.: (೧) ಇಂಗ್ಲಿಷ್ ಶಿಕ್ಷಣದಿಂದ ವಂಚಿತರಾಗಿ ನಮ್ಮ ಮಕ್ಕಳು ಎರಡನೇ ದರ್ಜೆಯ ನಾಗರಿಕರಾಗುವುದು ಬೇಡ (೨). ಸರಕಾರಿ ಕನ್ನಡ ಶಾಲೆಗಳ ಪರಿಸ್ಥಿತಿ ಅಧೋಗತಿಗಿಳಿದಿದೆ. ಅವು ಮುಂಚೆ ಸುಧಾರಣೆಯಾಗಲಿ. ಅನಂತರ ನೋಡೋಣ... ಇತ್ಯಾದಿ.

ನಮ್ಮ 'ಸರಕಾರಿ' ಶಾಲೆಗಳ ಪರಿಸ್ಥಿತಿ ನಿಜವಾಗಿಯೂ ಇಷ್ಟು ಕೆಟ್ಟು ಹೋಗಿದೆಯೇ? ವಿಚಾರಿಸಬೇಕಾದ ವಿಷಯವಿದು. ಬೆಂಗಳೂರಿನ ಕಾರ್ಪರೇಶನ್ ಶಾಲೆಗಳ ಬಗ್ಗೆ ಅಂಥ ಶಾಲೆಯೊಂದರ ಮುಖ್ಯಾಧ್ಯಾಪಕರೊಬ್ಬರು ಹೇಳಿದ ಮಾತು ನೆನಪಿಗೆ ಬರುತ್ತದೆ. ಕಾರ್ಪೋರೇಶನ್ ಶಾಲೆಗಳಲ್ಲಿ ಸರಿಯಾದ ವಿದ್ಯಾರ್ಹತೆ ಮತ್ತು ತರಬೇತಿ ಪಡೆದ ಶಿಕ್ಷಕರಿರುತ್ತಾರೆ. ಎಲ್ಲ ಪರಿಕರಗಳೂ ಸಮರ್ಪಕವಾಗಿರುತ್ತವೆ. ಇಷ್ಟೆಲ್ಲ ಗೊತ್ತಿದ್ದರೂ ರಾಜಧಾನಿಯ 'ಕನ್ನಡ' ಪಾಲಕರು ತಮ್ಮ ಮಕ್ಕಳನ್ನು ಯಾಕೆ ಖಾಸಗೀ ಇಂಗ್ಲಿಷ್ ಮೀಡಿಯಂ ಶಾಲೆಗಳಿಗೆ ಕ್ಯೂನಲ್ಲಿ

ನಿಂತು ಪ್ರವೇಶ ಫಾರ್ಮ್ ಪಡೆದು , ಅವರಿವರ ಪಶೀಲಿ ಹಚ್ಚಿ ಕೇಳಿದಷ್ಟು ಡೊನೇಶನ್ ಸುರಿದು ಕಳಿಸುತ್ತಾರೆ ?

ಸರಕಾರಿ ಶಾಲೆಗಳನ್ನು ಟೀಕಿಸುವವರಿಗೆ ಖಾಸಗಿ ಕಾನ್ವೆಂಟ್ ಶಾಲೆಗಳ ಸ್ಥಿತಿಯ ಬಗ್ಗೆ ವಿಪರೀತ ಭ್ರಮೆಗಳು. ದೊಡ್ಡ ಪಟ್ಟಣಗಳಲ್ಲಿ ಏನೋ ಹತ್ತಾರು ಒಳ್ಳೆಯ ಕಾನ್ವೆಂಟ್ ಇರಬಹುದು. ಆದರೆ ಇಂದು ರಾಜಧಾನಿಯ ಬಡಾವಣೆಗಳಲ್ಲಿ, ಜಿಲ್ಲಾ ಕೇಂದ್ರ, ತಾಲೂಕಾ ಸ್ಥಳಗಳಲ್ಲಿ ಪುದು ಪುದು ಎಂದು ಎದ್ದು ನಿಂತಿರುವ ಕಾನ್ವೆಂಟ್ ಶಾಲೆಗಳಿಗೆ ಹೋಗಿ ನೋಡಿರಿ. ಒಂದು ಚಿಕ್ಕ ರೂಮಿನಲ್ಲಿ ೫೦ - ೬೦ ಮಕ್ಕಳನ್ನು ತುರುಕುತ್ತಾರೆ. ಕೂಡ್ರಲು ವ್ಯವಸ್ಥೆ ಇಲ್ಲ. ಗಾಳಿ ಆಡುವುದಿಲ್ಲ. ಕಲಿಸುವವರಿಗೆ ಮಿನಿಮಂ ಡಿಗ್ರಿ ಇರುವುದಿಲ್ಲ. ಅವರಿಗೆ ತಿಂಗಳಿಗೆ ಇನ್ನೂರೋ ಮುನ್ನೂರೋ ಪಗಾರ. ನೌಕರಿಯ ಭದ್ರತೆ ಅಂತೂ ಇಲ್ಲವೇ ಇಲ್ಲ. ಡ್ರೆಸ್ಸೋ, ಪುಸ್ತಕವೋ, ಗ್ಯಾದರಿಂಗೋ, ಬಿಲ್ಡಿಂಗ್ ಫಂಡೋ ಅಂತ ರೊಕ್ಕ ಕೇತ್ತುತ್ತಲೇ ಇರುತ್ತಾರೆ. ಪಾಲಕರು ಧಾರಾಳವಾಗಿ, ತಮ್ಮ ಸಂತಾನಗಳ ಭವ್ಯ ಭವಿಷ್ಯತ್ತಿಗಾಗಿ ಬ್ರ ಅನ್ನದೆ ಸುರಿಯುತ್ತಲೇ ಹೋಗುತ್ತಾರೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿ ನಾನೂ ಅನೇಕ ಕಾನ್‌ವೆಂಟ್‌ಗಳನ್ನು ನೋಡಿದ್ದೇನೆ. ಒಂದು ಶಾಲೆಯಲ್ಲಿ ನನ್ನ ಹಳೆಯ ವಿದ್ಯಾರ್ಥಿನಿಯೊಬ್ಬಳು ಶಿಕ್ಷಕಿ. ನಾನು ಕೇಳಿದ ಕೆಲವು ಪ್ರಶ್ನೆಗಳಿಗೆ ಅವಳು ಉತ್ತರಿಸಿದ ಇಂಗ್ಲಿಷ್ ವಾಕ್ಯಗಳನ್ನು ನೋಡಿ ನನಗೆ ನಾಚಿಗೆ ಆಗಿತ್ತು. ಹೊಸಪೇಟೆಯ ಒಂದು ಪ್ರತಿಷ್ಠಿತ ಕಾನ್ವೆಂಟ್ ಶಾಲೆಗೆ ಹೋದಾಗ ಸಂಜೆಯ ವೇಳೆ. ಕಲಿಸುವವರು ಕಲಿಯುವವರು ಯಾರೂ ಇರಲಿಲ್ಲ. ಕ್ಲಾಸ್ ರೂಮಿಗೆ ಹೋಗಿ ಕಪ್ಪು ಹಲಗೆಯ ಮೇಲೆ ಬರೆದದ್ದು ಗಮನಿಸಿದಾಗ - ಎಂಟು ಇಂಗ್ಲಿಷ್ ವಾಕ್ಯಗಳಲ್ಲಿ ಹನ್ನೊಂದು ತಪ್ಪುಗಳು ?

ನಮ್ಮ ಪಾಲಕರಿಗೆ ಇವೆಲ್ಲ ತಿಳಿಯುವುದೇ ಇಲ್ಲ. ಪರೀಕ್ಷೆಗಳಲ್ಲಿ ಬರೆದ ಉತ್ತರಗಳಲ್ಲಿ ಅನೇಕ ಅನಾಹುತಗಳಿದ್ದರೂ ವಿದ್ಯಾರ್ಥಿ ಪಡೆಯುವುದು ಶೇಕಡಾ ತೊಂಬತ್ತಕ್ಕಿಂತ ಹೆಚ್ಚು ಅಂಕಗಳನ್ನು. ಅಂಕ ಪಟ್ಟಿ ನೋಡಿದ ಯಾವ ತಂದೆ - ತಾಯಿಗಳ ಬಾಯಿಂದ 'ಆಹಾ' ಎಂಬ ಶಬ್ದ ಹೊರಡಲಿಕ್ಕಿಲ್ಲ? ಬ್ರಹ್ಮಾನಂದಕ್ಕಿಂತ ಮಿಗಿಲಾದ ಭ್ರಮಾನಂದದಲ್ಲಿ ಲೀನರಾದ ಅವರಿಗೆ ತಮ್ಮ ಮಗ ಅಥವಾ ಮಗಳ ಭವಿಷ್ಯದ ಮುಖ ಕಾಣುವುದು ಇಂಗ್ಲಂಡ್ - ಅಮೇರಿಕೆಗಳ ಉಪಗ್ರಹಗಳಲ್ಲಿ, ಕಂಪ್ಯೂಟರ್‌ಗಳಲ್ಲಿ.

ಈ ಭ್ರಮೆ ಎಲ್ಲಿಯವರೆಗೆ.?

ಪ್ರೊ. ಸುಧಾಕರ ಮೇಲಿಂದ ಮೇಲೆ ತಮ್ಮ ಮನೆಯದೇ ಒಂದು ಪ್ರಸಂಗ ಹೇಳುತ್ತಾರೆ. (ಸುಧಾಕರ : ಕನ್ನಡ ಕತೆಗಾರ ; ಮೈಸೂರು ವಿಶ್ವವಿದ್ಯಾಲಯದಿಂದ ನಿವೃತ್ತರಾಗಿ ಸದ್ಯ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನಕ ಪೀಠದ ಅಧ್ಯಕ್ಷ ; ನಮ್ಮ ಪ್ರಾಧಿಕಾರದ

ರಾಜ್ಯ ಸಮಿತಿಯ ಸದಸ್ಯ) ಸುಧಾಕರ ತಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಹಾಕಿದರೆ, ಡಾಕ್ಟರ್ ವೃತ್ತಿಯ ಅವರ ಸೋದರ ತಮ್ಮ ಮಕ್ಕಳನ್ನು ಚನ್ನರಾಯಪಟ್ಟಣದಿಂದ ಮೈಸೂರು ನಗರಕ್ಕೆ ಕಳಿಸಿ ಅಲ್ಲಿಯ ಇಂಗ್ಲಿಷ್ ಮೀಡಿಯಂ ಶಾಲೆಗೆ ಹಾಕಿದ್ದರು. ಮಕ್ಕಳು ಮಕ್ಕಳ ನಡುವೆ ಪೈಪೋಟಿ. ಡಾಕ್ಟರರ ಮಕ್ಕಳಿಗೆ ಪ್ರತಿಯೊಂದು ಸಬ್ಜೆಕ್ಟಿನಲ್ಲಿ ಎಂಬತ್ತು ತೊಂಬತ್ತು. ಮಾಸ್ತರರ ಮಕ್ಕಳಿಗೆ ಕಡಿಮೆ. ಪರಸ್ಪರ ಹೀಯಾಳಿಕೆ, ಮೂದಲಿಕೆ, ಎಸ್ ಎಸ್ ಎಲ್ ಸಿ ತನಕ ಈ ಆಟ.

ಕಾಲೇಜಿಗೆ ಪಿಯುಸಿ ಹಂತಕ್ಕೆ ಬಂದಾಗ ಡಾಕ್ಟರರ ಮಕ್ಕಳು ಪರೀಕ್ಷೆಗಳಲ್ಲಿ ಡುಮ್ಕಿ. ಸುಧಾಕರರ ಮಕ್ಕಳು, ಮೊದಲ ಹಂತದಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿದವರು ಅನಂತರ ಇಂಗ್ಲಿಷ್ ಭಾಷೆಯನ್ನು ಸರಿಯಾಗಿ ಗ್ರಹಿಸಿಕೊಂಡು, ಮುಂದೆ ದೊಡ್ಡ ಹುದ್ದೆಗಳನ್ನು ಪಡೆದಿದ್ದಾರೆ. ನಾನು ಹೋದಲ್ಲೆಲ್ಲ ಒಂದು ಜೋಕು ಹೇಳುತ್ತೇನೆ. ಯಾರೋ ಎಲ್ಲೋ ಹೇಳಿದ್ದು, ಜೋಕುಗಳೆಲ್ಲ ಜಾನಪದ ಸಾಹಿತ್ಯದ ಹಾಗೆ. ಉಂಡವನದೇ ಊಟ, ಬಡಿದವನದೇ ಗೂಟ.

ಪ್ರಾಥಮಿಕ ಶಾಲೆಯಲ್ಲಿ ಕನ್ನಡದಲ್ಲಿಯೇ ಎಲ್ಲ ಕಲಿತವ ಮುಂದೆ ಮುಂದೆ ಹೋಗಿ ಇಂಗ್ಲಿಷನ್ನೂ ಕೈವಶ ಮಾಡಿಕೊಂಡು ಡಾಕ್ಟರ್ ಆಗುತ್ತಾನೆ. ಆದರೆ ಮೊದಲೇ ಇಂಗ್ಲಿಷ್ ಮೀಡಿಯಂಗೆ ಜೋತುಬಿದ್ದ ವಿದ್ಯಾರ್ಥಿ ಮುಂದೆ ಬಹಳ ಅಂದರೆ ಮೆಡಿಕಲ್ ರಿಪ್ರಜೆಂಟೆಟಿವ್ ಮಾತ್ರ ಆಗುತ್ತಾನೆ. ನಿಮಗೆ ಗೊತ್ತಲ್ಲ. ಬಾಯಿಪಾಠ ಮಾಡಿದ ಹನ್ನೊಂದು ವಾಕ್ಯ ಅವನಿಗೆ ಗೊತ್ತು. ಇನ್ನೊಂದು ಪ್ರಶ್ನೆ ಕೇಳಿದಿರೋ, ಥ್ಯಾಂಕ್ಯೂ ಅಂತ ಹೇಳಿ ಕೈಕುಲುಕಿ ಕಣ್ಮರೆಯಾಗುತ್ತಾನೆ.

ನಮ್ಮ ಗ್ರಹಿಕೆಗೆ ಸುಲಭವಾಗಿ ದಕ್ಕದ ಇನ್ನೊಂದು ಸಾಂಸ್ಕೃತಿಕ ಅಪಾಯದ ಬಗ್ಗೆಯೂ ನಾವು ಚಿಂತಿಸಬೇಕಾಗಿದೆ. ತಲೆ ತುಂಬ ಚಿಕ್ಕ ವಯಸ್ಸಿನಲ್ಲಿಯೇ ಇಂಗ್ಲಿಷಿನ ಟೆಸ್ ಪ್ರುಸ್ ತುಂಬಿಕೊಂಡ ನಮ್ಮ ಎಳೆಯರು 'ಕನ್ನಡ' ಕ್ಕೆ ಸಂಬಂಧಪಟ್ಟ ಸಾಹಿತ್ಯ , ಕಲೆ, ಸಂಸ್ಕೃತಿ, ಪರಂಪರೆಗಳ ಬಗ್ಗೆಯೂ ಹಿನಾಕಾರಣ ತುಚ್ಛ ಭಾವನೆ ತಳೆಯುತ್ತಾರೆ. ಈ ನೆಲದ ಬೇರುಗಳನ್ನೇ ಕಡಿದುಕೊಳ್ಳುವ ಈ ಜೀವಗಳು ಆಕಾಶದಲ್ಲಿ ಯಾವ ಟೊಂಗೆಗಳನ್ನು ಹರಡಲು ಸಾಧ್ಯ ; ಬರೀ ಕಾಮಿಕ್ಸ್, ಡಿಸ್ಕೋ, ಪತ್ತೇದಾರಿಗಳ ಪ್ರಪಂಚದಲ್ಲಿ ಸುತ್ತಾಡುತ್ತಾ ಪ್ರಬುದ್ಧ ವಯಸ್ಸಿಗೆ ಬಂದಾಗ ಮಾದಕ ವಸ್ತುಗಳ ಚಟಗಳ ತೃಪ್ತಿಗಾಗಿ ಕ್ರಿಮಿನಲ್‌ಗಳಾಗಿ ಪರಿವರ್ತಿತರಾಗುತ್ತಿರುವ ದುರಂತವನ್ನು ನಾವು ಕಾಣುತ್ತಿದ್ದೇವೆ.

ಮಗನನ್ನೋ ಮಗಳನ್ನೋ ಒಂದು ಕಾನ್ವೆಂಟಿಗೆ ಹಾಕಿ ಕೈ ತೊಳೆದುಕೊಂಡು ಬಿಡುವ ನಮ್ಮ ಪಾಲಕರನೇಕರು ಮಕ್ಕಳೊಂದಿಗಿರಬೇಕಾದ ಸಹಜ ಪ್ರೀತಿ ಮತ್ತು ಕಾಳಜಿಯ ಸಂಬಂಧಗಳ ಕೊಂಡಿಗಳನ್ನೂ ಕಳಚಿಕೊಂಡು, ತಲೆಗೆ ಬಡಿದಾಗ ಮಾತ್ರ ಅಯ್ಯೋ ಎಂದು ಗೋಳಾಡುತ್ತಾರೆ. ಶ್ರೀಮಂತ ವರ್ಗಕ್ಕೆ ಸೀಮಿತವಾಗಿದ್ದ ಈ ವಿದ್ಯಮಾನ ಈಗ ಮಧ್ಯಮ ವರ್ಗಕ್ಕೂ ಪ್ರವೇಶ ಪಡೆದಿದೆ.

*

"ಪನೀ, ಕಾಯಿಪಲ್ಲೆ ಮಾರುವವರು, ಟಾಂಗಾ ಹೊಡೆಯುವವರು ಕೂಡ ಈಗ ತಮ್ಮ ಮಕ್ಕಳನ್ನು ಕಾನ್ವೆಂಟುಗಳಿಗೆ ಹಾಕಲು ಹಾತೊರೆಯುತ್ತಿದ್ದಾರೆ" ಎಂಬುದು, ಈಗಾಗಲೇ ಕಾನ್ವೆಂಟ್ ಸಾಮ್ರಾಜ್ಯಕ್ಕೆ ದಾಖಲಾದ ಕೆಲ ವರ್ಗಗಳ ತಕರಾರು. ಇಂಥವರನ್ನು ಕಂಡರೆ ನನಗೆ ಬಲು ಸಿಟ್ಟು. ತಮ್ಮ ತಮ್ಮ ಜಾತಿ, ಉಪಜಾತಿಗಳಿಗಾಗಿ ಜಗದ್ಗುರುವನ್ನು ಸೃಷ್ಟಿಸಿಕೊಂಡು, ಮಠಗಳನ್ನು ಕಟ್ಟಿಕೊಂಡ ಮೇಲುವರ್ಗದವರು, ಕೆಳವರ್ಗದವರೂ ಕೂಡ ಹಾಗೆ ಮಾಡಿದಾಗ ತೋರುವ ಅಸಹನೆ, ತಿರಸ್ಕಾರಗಳ ರೀತಿಯದೇ ಇದು: ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ - ಎಂಬಂತೆ. ಮೇಲಿನವರು ಮಾಡಿದ್ದನ್ನೇ ಕೆಳಗಿನವರೂ ಅನುಕರಿಸುವುದು ಸಹಜ.

ನಮ್ಮ ಸಮಾಜದ ಸೋಕಾಲ್ಡ್ ಬುದ್ಧಿ ಜೀವಿಗಳು, ಮಧ್ಯಮ ವರ್ಗದ ಸುಶಿಕ್ಷಿತರು ಮೊದಲು ತಾವು ರಿಪೇರಿಯಾಗಬೇಕು. ತನ್ನ ಬೆನ್ನು ತನಗೆ ಕಾಣುವುದಿಲ್ಲ - ಎಂಬ ಮಾತಿದೆ. ಯಾವುದೇ ಸಲೂನಿಗೆ ಹೋದರು ಎದುರು ಬದುರು ಕನ್ನಡಿಗಳ ಮುಖಾ ಮುಖಿಯಲ್ಲಿ ಈ ಮಾತಿನ ಸುಳ್ಳು ನಿಮ್ಮ ಕಣ್ಣಿಗೆ ಬಡಿಯುತ್ತದೆ. ನಮ್ಮ ಬೆನ್ನು ನಮಗೆ ಕಂಡೇ ಕಾಣುತ್ತದೆ. ಕಾನ್ವೆಂಟ್ ಹಿಡುಗಿನಿಂದ ನಮ್ಮ ಕಾರ್ಮಿಕರಿಗೆ, 'ದಲಿತರಿಗೆ' ಹಾನಿ ಆಗುತ್ತಿದ್ದರೆ, ಅಂಥದೇ ಹಾನಿ ನಮ್ಮ ಮಕ್ಕಳಿಗೂ ಆಗುತ್ತದೆ ಎಂಬ ಅರಿವು ನಮಗಾಗಬೇಕಾಗಿದೆ.

*

ಜಾಗತೀಕರಣದ ಇಂದಿನ ಸಂದರ್ಭದಲ್ಲಿ ನಮಗೆ ಅಂತರ್‌ರಾಷ್ಟ್ರೀಯ ಭಾಷೆ, ಎಂದೆನಿಸಿಕೊಳ್ಳುವ ಇಂಗ್ಲಿಷ್ ಬಾಷೆಯ ಜ್ಞಾನ ಅನಿವಾರ್ಯ. ಎಷ್ಟು? ಎಷ್ಟು ಬೇಕೋ ಅಷ್ಟು. ಇಂಡಿಯಾ ಒಕ್ಕೂಟದ ಬೇರೆ ಬೇರೆ ಭಾಷಾ ರಾಜ್ಯಗಳ ಸೇತುಬಂಧವಾಗಿ ಹಿಂದಿಯಂಥ ಭಾಷೆಯ ಜ್ಞಾನವೂ ನಮಗಿರಲಿ. ಆದರೆ ನಮ್ಮ ನಾಡಿನಲ್ಲಿ ನಮ್ಮ ಪರಿಸರದ, ಸಮುದಾಯದ ಭಾಷೆಯಾದ ಕನ್ನಡವೇ ನಮ್ಮ ಶಿಕ್ಷಣ ಕ್ರಮದ ಮೊದಲ ಹಂತಗಳಲ್ಲಿ ಬೋಧನಾ ಮಾಧ್ಯಮವಾಗಿರಬೇಕು.

ಒಂದು ಬಾಷೆಯನ್ನು 'ಮಾಧ್ಯಮ' ವಾಗಿ ಬಳಸುವುದನ್ನೂ, ಅದನ್ನು ಒಂದು 'ವಿಷಯ'ವನ್ನಾಗಿ ಕಲಿಯುವುದಕ್ಕೂ ಇರುವ ಸೂಕ್ಷ್ಮ ಅಂತರ ನಮ್ಮ ಬಹುತೇಕ ಸುಶಿಕ್ಷಿತರಿಗೆ ತಿಳಿಯದು. ಒಂದು ಬಾಷೆಯನ್ನು 'ವಿಷಯ'ವನ್ನಾಗಿ ಕಲಿತಾಗ ಮಾತ್ರ, ಮಾತಾಡುವ - ಓದುವ - ಬರೆಯುವ ಕೌಶಲ್ಯ (ಸ್ಕಿಲ್) ಗಳನ್ನು ಕರಗತ ಮಾಡಿಕೊಂಡಮೇಲೆ ಮಾತ್ರ, ಅದನ್ನು ಅನಂತರ 'ಮಾಧ್ಯಮ'ವನ್ನಾಗಿ ಬಳಸಿಕೊಂಡು ಇತರ ಜ್ಞಾನವನ್ನು ಸಂಪಾದಿಸಲಿಕ್ಕೂ, ಬೇರೆ ಭಾಷೆಗಳನ್ನು ಕಲಿಯಲಿಕ್ಕೂ ಸಾಧ್ಯ. ನಾಲ್ಕೈದು ವರ್ಷದ ಮಗು ಕಾನ್ವೆಂಟ್ ಸೇರುವ ಸಂದರ್ಭದಲ್ಲಿ ಅರೆ - ಬರೆ ಗೊತ್ತಿರುವ ಕನ್ನಡವನ್ನು ಹಿಂದಕ್ಕೆ ತಳ್ಳಿ, ಏಬಿಸಿಡಿ ಗೊತ್ತಿರದ ಇಂಗ್ಲಿಷನ್ನು ತಲೆಯ

ಮೇಲೆ ಹೇರುವುದರಿಂದ ಆ ಮಗುವಿನ ಮಾನಸಿಕ ಮತ್ತು ದೈಹಿಕ ದಣಿವನ್ನು ನಾವು ಸೂಕ್ಷ್ಮವಾಗಿ ಅರ್ಥಮಾಡಿಕೊಳ್ಳಬೇಕಾಗಿದೆ.

ಶಾಲಾ ಶಿಕ್ಷಣಾಧಿಕಾರಿಯೊಬ್ಬರು ನನಗೆ ಒಮ್ಮೆ ಹೇಳಿದ್ದರು. ತಪಾಸಣೆಗೆಂದು ಹೋದಾಗ ಕನ್ನಡ ಶಾಲೆಗಳ ಮಕ್ಕಳಲ್ಲಿ ತೋರುವ ಚಟುವಟಿಕೆ, ಲವಲವಿಕೆ, ಚುರುಕುತನ ಇಂಗ್ಲಿಷ್ ಮಾಧ್ಯಮದ ಅದೇ ವಯಸ್ಸಿನ ಮಕ್ಕಳಲ್ಲಿ ಕಾಣುವುದು ಅಸಾಧ್ಯ. ಆ ಎಳೆ ಮುಖಗಳಲ್ಲಿ ಸದಾ ಆತಂಕ, ಮಿಸ್‌ಗಳ ಬೆದರಿಕೆಯ ಹೆದರಿಕೆ, ಹೋಂ ವರ್ಕಿನ ದುಃಸ್ವಪ್ನ, ಅದನ್ನೇ ಅದನ್ನೇ ಗೋಟು ಹೊಡೆಯಬೇಕಾದ ತಲೆನೋವು. ಮಮ್ಮಿ, ಡ್ಯಾಡಿಗಳು ಹ್ಯಾಪಿ ಬರ್ತ್‌ಡೇ ಹಾಡುತ್ತ ಕೇಕು ಕತ್ತರಿಸಲು ಕೈಯಲ್ಲಿ ಹಿಡಿದ ಚಾಕುಗಳ ಇರಿತದ ನೆನಪು..

ನಮ್ಮ ಮಕ್ಕಳು ಇಂಥ ಬದುಕು ಬದುಕಬೇಕೆ ?

ನಿಮ್ಮ ಎಲ್ಲ ಬಗೆಯ ಆಫ್‌ಸೆಟ್ ಮುದ್ರಣ ಕೆಲಸಗಳಿಗಾಗಿ

ಚಂದನ ಮುದ್ರಣ

ವಿಚಾರಿಸಿ

ಮಹಾಂತೇಶ ನಗರ, ಧಾರವಾಡ ೫೮೦ ೦೦೮

ಫೋನು : ೭೪೪೮೬೩ ಮತ್ತು ೮೬೮೬೪

C/o. ಸಂಕ್ರಮಣ ಪ್ರಕಾಶನ, ನಂ. ೧೮೯೪/೧, ೩೧ ನೇ ಕ್ರಾಸ್,

೨ ನೇ ಸ್ಟೇಜ್, ಬನಶಂಕರಿ, ಬೆಂಗಳೂರು ೫೬೦ ೦೭೦

ಫೋನು : ೬೭೧೦೫೨೩

ಮೌನ - ೫.

ಭಿಕ್ಕುವಿನ ಬೊಗಸೆಗೆ ಉತ್ತರವಿಲ್ಲ
ಉಯಿಲಿಲ್ಲದೆ ತಂದೆ ಸತ್ತ ಮೇಲೆ
ಮಕ್ಕಳು ದೇಶಾಂತರ

ಊರಿಗೂರಿಗೂ ಅಂತರ
ಗುಡಿ ಗುಡಾರಗಳು
ಗುಡಿ ಗುಡಾರದಲ್ಲೂ ಅಂತರ
ಬಿಡಿ ಬಿಡಾರಗಳು

ಉಯಿಲಿಟ್ಟವರ ಮಾತೂ ಬದುಕಿ
ಉಯಿಲಿಲ್ಲದವರ ಮೌನವೂ ಬದುಕಿ
ಜೀವದ ಹೊರಳು ಯಾನ

ಒಂದೊಂದು ಊರಿಗೂ ನಾಲ್ಕಾರು ದಾರಿ
ನಿಂತು ನೋಡಿ ಹೊರಡಬೇಕು
ರಸ್ತೆ ದಾಟಲೇಬೇಕು

ಮೌನ - ೬

ದಾಟುವಾಗೆಲ್ಲ ಪ್ರವರ ಕೇಳುವ ಊರ ನಾಕ
ಯಾಕೆ ಬಂದೆ
ಎಲ್ಲಿಂದ ಬಂದೆ
ಮುಂದೆ ಎಲ್ಲಿ?

ಹೊತ್ತಿ ನೊಲೆಯಲಿ ಬೆಂದ
ಮೌನ ಭಂಗದ ಸಮಯ
ಉಳಿವ ತೋರುವ ಗಳಿಗೆ

ಇದು ನಾಕದ ಪ್ರಶ್ನೆ
ನಿರಾಕರಿಸುವುದೆಂತು
ಅರಿವಾಗದ ಉತ್ತರ

ಹೇಳಬೇಕಾದ ಧರ್ಮ
ಸಂಕಟ

ಕೊನೆಗೆ
ಮೌನವೊಡೆದು ಭಿಕ್ಕು ಕೇಳಿದ
ನರಕದ ದಾರಿ ಎಲ್ಲಿ ನಾಕದೊಡೆಯಾ ?

ಅವನೂ ಈಗ ಮೌನಿ
ಸುಮ್ಮನೆ ದಾರಿ ಬಿಟ್ಟ
ಭಿಕ್ಕು ಮುನ್ನಡೆದ

ಮಹಾ ಮೌನದ ರಸ್ತೆ ಸುಮ್ಮನೆ ತೆರಕೊಂಡಿತ್ತು
ಪ್ರಶ್ನೆಗಳು ಉರುಳುತ್ತಿದ್ದವು.

●

ಹೆಚ್ .ವಿ. ವಂಕಟಸುಬ್ಬಯ್ಯ

ಸಾಲುಮರ

ಕಪ್ಕಿಂದೆಯಲಿ
ಸುಗ್ರೀಯ ಸಖ್ಯವ ಬಯಸಿ
ತನ್ನತೋಳ್ಬಲವ ತೋರಿಸಲು
ವನವಾಸಿ ಶ್ರೀರಾಮ, ತರದದ್ದೇನು ?
ಸಾಲಮರಗಳ ಸಾಲುಸಾಲು

ಭಾರತದ ಯುದ್ಧದ ಉದ್ದಕ್ಕೂ
ಶತ್ರುಗಳ ಸೆದೆಬಡಿಯಲು
ಬುಡಸಹಿತ ಕಲಿಭೀಮ, ಕಿತ್ತದ್ದೇನು.
ಭಾರಿ ಮರಗಳ ಸಾಲುಸಾಲು

ನಮ್ಮ ನಿಮ್ಮ ನಡುವಿನಲಿ

ತನ್ನಜದೇ ಮಕ್ಕಳಂತೆ ತಿಳಿದು
ಅಕ್ಕರೆಯ ತಾಯಿ ತಿಮ್ಮಕ್ಕ
ಸಾಕಿ ಸಲಹಿ ನೀರು,
ಎರದದ್ದೇನು.
ಅದೇ ಮರಗಳ ಸಾಲು ಸಾಲು.

ಡಿ. ಬಿ. ರಜಿಯಾ

ಸೊನ್ನೆ

ಅವಳಿನ್ನೂ ಬದುಕಿದ್ದಾಳೆ !
ಹೆಪ್ಪುಗಟ್ಟಿದ ರಕ್ತ
ಕೊತ ಕೊತ ಕುದಿಯುತ್ತಾ
ಕಮರಿ ಹೋದ ಕೆನ್ನೆರಂಗು ರಂಗೇರಿಸುತ್ತಾ

ರಾತ್ರಿ ಹಗಲಾದಂತೆ
ಹಗಲು ರಾತ್ರಿಯಾಗೆ ಕಳೆದುಳಿದು

ಎರಡು ವರ್ಷಕೊಮ್ಮೇ ಬರುವ
ಆತನ ಬಂಧುಗಳ
ಬಿಗಿ ಕಾವಲು ಕಕ್ಷೆಯಲ್ಲೆ ಕಂಗೆಟ್ಟು

ಉನ್ಮಾದ ಮರಗಟ್ಟಿ
ನಗ ನಾಣ್ಯದ ಗಟ್ಟಿ ತಂದ
ಆತನ ಅತ್ತರು ವಾಸನೆಗಳಿಗಷ್ಟೇ
ಅಡರಿಕೊಂಡ ದೇಹ
ಅವನೂತ ಬೀಜದ ಅಂಕುರಕ್ಕೆ

ಅವಳು ಬದುಕೇ ಇದ್ದಾಳೆ
ಸಾವಿನ ಮೆಚ್ಚ ತರುವ
ಅವ - ಧೂತನಿಗಾಗಿ ?
ಅವಳು ಬದುಕಿದ್ದಾಳೆ !!

ಗುಂಡಣ್ಣ ಕಲಬುರ್ಗಿ

ಭಾರತಿ ಮತ್ತು ಮಕ್ಕಳು

೧

ಕಣ್ಣು ಇಲ್ಲದ ಕಲ್ಲು ಹೃದಯೀ - ಭಾರತಿ ನೀನು ಜಡವಾದಿ ;
ಹಸಿರು ಕಾಮನೆಗಳು ; ಹಣ್ಣು - ಹೆಣ್ಣಿನ ವಾಸನೆ ಹರಡಿಸದೆ
ಬರಡು - ಬ್ರಹ್ಮಾಂಡಕ್ಕೆ ಭ್ರಮೆಯಾಗಿ ನಿಂತ ನಿಷ್ಕರುಣಿ ;
ನಿಂತ ನೀರಿನ ನೀಲ ತರುಣಿ - ತರುಣ ಒಳಹೊಕ್ಕು
ತಳಕ್ಕೆ ಕೈ ಹಾಕಿ - ಹೊಕ್ಕುಳ ಬಳ್ಳಿಯ ಬಿಂದುವಿನಲ್ಲಿ
ಸಬಿಂದುಕನಾಗಿ ನಿಂದು - ವಿಕಾರ ಮನಸ್ಸಿಗೆ ವಿಕೃತವೇ ಧಾತು.

೨

ಹಾರೋ ಹಕ್ಕಿಯಾಗಿ ಚಿಕ್ಕೆಯಾಗಿ ಹಾಡಲಾರದ ಮಿನುಗಲಾರದ
ಎದೆಗಳಿಗೆ ; ಮಿಡುಕಲಾರದ - ಮಿಟುಕಲಾರದ
ಅಂಥಸ್ಥಾವರಕ್ಕೆ ಗಲ್ಲ ನೀಡಿ ತೋಳು ಒಡ್ಡಿ
ತೊಡೆಕೊಟ್ಟು ಸಂಭ್ರಮಿಸಿದ ಸಂಬಂಧ -
ಸಂಭವಿಸಿದ್ದೆಲ್ಲ ಹಾದರದ ಕನಸೆ ?

೩

ಭಾರತಿ ನೀನು ಹಡೆದದ್ದು ಹೆಚ್ಚು ಪಡೆದದ್ದು ಶೂನ್ಯ :
ತೀಟೆಯ ತಿಕ್ಕಾಟಗಳಿಗೆ ಬರೀ ನೆಪವಾಗಿ ನಿಂತುಕೊಂಡ
ಕುನ್ನಿಗಳೇ ಕುಲಕ್ಕೆ ಮೂಲ - ಶೂಲ
ಕಣ್ಣೀರ ಕರೆವ - ಕಲ್ಲಾದ ಹೃದಯ ಕರಗಿಸುವ
ಮುದ್ದೆಯಾಗಿ ಮುರಿದುಬಿದ್ದ ಬಾವಗಳ ಜೀವ
ಭರಿಸಿ - ಮರುಜೀವನಿಕ್ಕುವ ಬಾಗ್ಯಗಳಿಲ್ಲದ
ಈ ಬಯಲೊಳಗೆ ಬೆತ್ತಲಾದ ನಿನ್ನೀಜೀವಕ್ಕೆ
ತೆತ್ತ ಉತ್ತರವೇನು ತಾಯೆ ?

೪

ಕತ್ತಲಲ್ಲಿ ಕಸವಾಗಿಸಿ ಕಾಲ ತಳ್ಳಿಹೋದ ಮನಸುಗಳು

ಕರುಳುಬಳ್ಳಿಯ ಬಂಗಾರದಂಥ ನಿನ್ನ ಮೃದು ನುಡಿಗಳು
ಕುಡಿಗಳು ಕೋಡಿಯಾಗಲು ಬಿಡದ ನೀ - ಪಾಪದ ಹೊರೆ ಹೊತ್ತು
ಆರಿಹೋದ ಎದೆಗಳಿಗೆ ಬರಿದು ಮಾಡಿದ ಭ್ರಮೆಗಳಿಗೆ
ನಿನ್ನ ತಾಯ್ತನದ ಉಪದೇಶ ಬಾಯ್ಮಾತಿನ ಬೈಗುಳ
ತಾರುಣ್ಯ ತುರಿಸುವ ತಮುಲಗಳ ತುಟ್ಟ ತುದಿಯಲ್ಲಿ
ಯಾವ ನೀತಿ - ಧರ್ಮಗಳಾಗುವುದಿಲ್ಲ ತಾಯೆ ?

೫

ಲೋಕದ ಕೊಳಕನ್ನು ಕಾರುಣ್ಯ ಕಣ್ಣಲ್ಲಿ ಕರಗಿಸಿ ;
- ಸರಿಸಿ ಸೆರಗಲ್ಲಿ ಪಾಂಡವರೈವರ
ಬರಡು ಬಂಡುತನವನ್ನೆಲ್ಲ ಬಾವನೆಗಳ ಮೀಟಿಯೇ
ಸಂಧಾನದಿಂದ - ಸಂತಾನಕ್ಕೆ ಸಂತೃಪ್ತಗೊಳಿಸಿದ
ಆ ಚಲನೆ - ಮಲೀನಗೊಂಡರೂ ಮನಸ್ಸು ಒದಗಿಸಿದ
ಏಕಸೂತ್ರ : ಪತಿವ್ರತೆಗೆ ಮುಡಿದ ಮೂಗುತಿ ;
ಹಿಂಸೆಗೆ ನೀಡಿದ ಎತ್ತಲಾರದ ಕಾಣ್ಕೆ.:
ಬಿತ್ತಿ ಬೆಳೆಯುವುದೆಲ್ಲ ಬದುಕು ; ಹರಿದು ಹೋಗುವುದೆಲ್ಲ ಕೊಳಕು !

೬

ತಾಯೇ ನಿನ್ನೊಡಲು ಹಿರಿದೆಂದು ಭಾವಿಸದ
ನೀನೊಂದು ಉಸಿರಿದ್ದೊಡಲೆಂದು ಕಲ್ಪಿಸಿದ ಕ್ರೂರ
ಕಲ್ಮಷ ಕಾರಣಗಳಿಗೆ - ಮೌನಸೀಳಲಾರದ ದನಿ ; ಶೀಲ
ಸಹನಕ್ಕೆ ಸಾಕ್ಷಿ : "ಭೂಮಿತೂಕ" ದ ಹೆಣ್ಣಿನ ಪ್ರತಿಮೆಯ
ಕಟ್ಟು ; ಹುಣ್ಣಿಮೆಯ ಕಾಳ ರಾತ್ರಿಯಲ್ಲಿ ಚಂದ್ರನ
ಆ ಬಿಂಬಕೆ ಬೆನ್ನು ಬಾಗಿಸಿ ಹೆಣ್ತನದ ಕ್ಷಣಗಳನ್ನು
ಕಾಣಿಸುವ , ಕಣ್ಕಟ್ಟುವ ಚೆಲುವಿಕೆ - ಈ
ವಿಷಕಾರಿ , ಅಹಂಕಾರಿ ಮನುಕುಲಕ್ಕೇನು ಹೃದಯ ?

೧೯೯೮ರ ಪ್ರಕಟನೆಗಳು

ಕನ್ನಡ ಲೇಖಕರ ವಿಳಾಸಗಳು (ಮೂರನೇ ಆವೃತ್ತಿ).: ಸಂ.- ನೀಲಾ ಪಾಟೀಲ ಸಂಕ್ರಮಣ ಪ್ರಕಾಶನ, ಬನಶಂಕರಿ ೨ ನೇ ಹಂತ , ಬೆಂಗಳೂರು ೫೬೦೦೭೦ ; ರೂ. ೭೫.

ಪ್ರತ್ಯೇಕ ಕೊಡಗು ರಾಜ್ಯ: ಡಾ. ತಂಬಂಡ ವಿಜಯ ಪೂಣಚ್ಚ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಕಮಲಾಪುರ ; ರೂ. ೩

ಸಮಗ್ರ ವ್ಯಕ್ತಿ ಚಿತ್ರಗಳು - ಸಂಪುಟ ೧ : ಹರಿಹರಪ್ರಿಯ, ಇಳಾ ಪ್ರಕಾಶನ, ೪ ನೇ ಮೇನ್, ಚಾಮರಾಜ ಪೇಟೆ, ಬೆಂಗಳೂರು, ೫೬೦ ೦೧೮ ; ರೂ. ೨೦೦

ಸಮಗ್ರ ವಿಚಾರ, ವಿಮರ್ಶೆ - ಸಂಪುಟ ೨ : ಹರಿಹರ ಪ್ರಿಯ ಸಿ.ವಿ.ಜಿ. ಪಬ್ಲಿಕೇಶನ್ಸ್ ವೈಯಾಲಿ ಕಾವಲ್, ಬೆಂಗಳೂರು ೫೬೦೦೦೩ ; ರೂ. ೨೫೦

ಸಾಹಿತ್ಯ ಸಂಸ್ಕೃತಿ (ವಿಮರ್ಶೆ): ನರಹಳ್ಳಿ ಬಾಲಸುಬ್ರಹ್ಮಣ್ಯ, ಅಂಕಿತ ಪುಸ್ತಕ, ಗಾಂಧಿಬಜಾರ್ ಸರ್ಕಲ್, ಬಸವನಗುಡಿ, ಬೆಂಗಳೂರು ೫೬೦೦೦೪ ; ರೂ. ೧೨೫.

ದಲಿತರ ಮೇಲೆ ಆರ್ಥಿಕ ಸುಧಾರಣೆಗಳ ದುಷ್ಪರಿಣಾಮಗಳು : ಡಾ. ಆನಂದ ತೆಲ್ತುಂಬ್ಡೆ ಅನು - ಮಂಗ್ಳೂರ ವಿಜಯ ; ಸಂಬುದ್ಧ ಪ್ರಕಾಶನ, ವಿದ್ಯಾ ಟ್ಯುಟೋರಿಯಲ್ಸ್ ಪಕ್ಕ, ವಿ. ನಾಗನಹಳ್ಳಿ, ಬೆಂಗಳೂರು. ೫೬೦೦೩೨. ; ರೂ. ೫

ಪಂಚರಾತ್ರಿ (ಕಾವ್ಯ) : ರಾಘವೇಂದ್ರ ಎಸ್. ಕಲಿಭಟ್ಟ, ಸಾಹಿತ್ಯ ಬಳಗ ಪ್ರಕಾಶನ, ಕೋಟೆ. ಮುಂಬಯಿ ೪೦೦೦೦೧ ; ರೂ. ೪೦

ಯುಗವಾಣಿ (ಪ್ರಬಂಧ ಕಾವ್ಯ) : ಕಾವ್ಯ ಬಿ. ಎಸ್. ಖೂಬಾ. ಸರಸ್ವತಿ ಪ್ರಕಾಶನ , ಗಡವಂತಿ (ಬೀದರ); ರೂ. ೫೦.

ಸುವರ್ಣ ವಲ್ಲರಿ (ಕಾವ್ಯ) : ಸಂ. ಎಲ್. ಆರ್. ಕುಲಕರ್ಣಿ. ಗಡಿನಾಡ ಕನ್ನಡ ಸಾಂಸ್ಕೃತಿಕ ಕಲಾಕೇಂದ್ರ ನಾಗಸೂರ (ಸೊಲ್ಲಾಪುರ) ; ರೂ. ೩೦.

ಜೇನುಹನಿಗಳು. ಡಾ. ಬಸವರಾಜ ಸಬರದ, ಶಿರಪುರ ಪ್ರಕಾಶನ, ಗುಲಬರ್ಗಾ ೫೮೫೧೦೨ ರೂ. ೩೦.

ಪ್ರತಿಜ್ಞೆಗಳು (ಕಾವ್ಯ) : ನ. ಹ. ಕಟಗೇರಿ. ಶರದ್ ಪ್ರಕಾಶನ, ಲಕ್ಷ್ಮೀನಗರ, ಧಾರವಾಡ

೫೮೦೦೦೪ ; ರೂ. ೩೦.

ನದಿಯ ನೀರಿನ ತೇವ (ಕಾವ್ಯ) : ಮಮತಾ ಜಿ. ಸಾಗರ; ಇಳಾ ಪ್ರಕಾಶನ, ಚಾಮರಾಜ ಪೇಟೆ, ಬೆಂಗಳೂರು ೫೮೦೦೧೮.

ಸೌರಭ (ಸಂಪಾದಕೀಯ ಬರಹಗಳು) : ಎಂ. ಬಿ. ಕುಕ್ಯಾನ್ ಸಾಯಿದೀಪ ಪ್ರಕಾಶನ, ಮುಂಬಯಿ; ರೂ. ೫೦.

ಸವದತ್ತಿ ಎಲ್ಲಮ್ಮ ಹಾಗೂ ದೇವದಾಸಿ ಪದ್ಧತಿ : ಡಾ. ಕಮಲಾ ಹೆಮ್ಮಿಗೆ, ವಿಮೋಚನಾ ಪ್ರಕಾಶನ, ಅಥಣಿ. (ಬೆಳಗಾವಿ); ರೂ. ೧೦೦

ರಂಗಪ್ರವೇಶ (ವಿಮರ್ಶೆ) ಬಸವರಾಜ ಡೋಣೂರ ಕಲಾ ಗಂಗಾಧರ ಪ್ರಕಾಶನ, ಚಡಚಣ (ಬಿಜಾಪೂರ) ರೂ. ೫೦.

ಏಡ್ಸ್ - ಒಂದು ಯಕ್ಷಪ್ರಶ್ನೆ : ಡಾ. ಅನಿಲ ಕಮತಿ ಭುವನೇಶ್ವರಿ ಪ್ರಕಾಶನ ಬಿಜಾಪೂರ ೩ ; ರೂ. ೪೦.

ಸ್ವಾತಂತ್ರ್ಯವೇ ಸ್ವರ್ಗ (ಮಕ್ಕಳ ಕವನಗಳು) : ಶಾರದಾ ಹೆಮ್ಮಿಗೆ ಸ್ಫೂರ್ತಿ ಪ್ರಕಾಶನ, ಕೋಣನಕುಂಟೆ, ಬೆಂಗಳೂರು. ರೂ. ೪೦.

ಶೋಧ (ಕಾದಂಬರಿ) ಜೋಗನಹಳ್ಳಿ ಗುರುಮೂರ್ತಿ, ಜೋಗನಹಳ್ಳಿ , ಮೈಸೂರು ಜಿಲ್ಲೆ ; ರೂ. ೨೫.

ಬಿಸಿಲು - ಮಳೆ (ಕಾವ್ಯ) : ರವಿ ಉಪಾಧ್ಯ, ಸ್ನೇಹ ಪ್ರಕಾಶನ, ಮಠಗಲ್ಲಿ, ಬೆಳಗಾವಿ. ೫೯೦೦೦೨ ; ರೂ. ೨೫೦.

ದೇಶ ಯಾವುದಾದರೇನು? (ಪ್ರವಾಸ ಕಥನ) : ಪ್ರಭಾಕರ ಶಿಶಿಲ, ಸ್ವಂತಿಕಾ ಸಾಹಿತ್ಯ ಬಳಗ, ಅಳ್ನಾವರ, ಸುಳ್ಯ (ದ.ಕ.); ರೂ ೧೯೫.

ಲೋಕಾವಲೋಕನ (ಪ್ರವಾಸ ಕಥನ) : ಡಾ. ಐ. ಎ. ಲೋಕಾಪೂರ ವಿದ್ಯಾನಿಧಿ ಪ್ರಕಾಶನ, ಗದಗ ೫೮೨೧೦೧ ; ರೂ. ೧೨೫.

ಚಿತ್ರಾತರಂಗ : ಶಂಕರ ಪಾಟೀಲ, ಪ್ರಗತಿ ಪ್ರಕಾಶನ , ವಿದ್ಯಾನಗರ, ದಾವಣಗೆರೆ.೫೭೭೦೦೫ :ರೂ. ೮೦.

ಬೋಧಿವೃಕ್ಷದ ಕೆಳಗೆ (ಪ್ರಬಂಧಗಳು) ಜಿ. ಎನ್. ಮಲ್ಲಿಕಾರ್ಜುನ ಆನಂದಕಂದ ಗ್ರಂಥಮಾಲೆ, ಮಲ್ಲಾಡಿ ಹಳ್ಳಿ. ೫೭೭೫೩೧ ; ರೂ. ೮೫.

ಮೀಡಿಯಂ ಪಿಡುಗು: ಹಿರೆಕ್ಕನ ಚಾಳಿ

ಚಂದ್ರಶೇಖರ ಪಾಟೀಲ

ನನ್ನ ಬಂಧು ನಟರಾಜ ಗೌರಿಕೆರೆಮಠ -(ಧಾರವಾಡದಲ್ಲಿರುವ ಅಪರ ಚಂದನ ಮುದ್ರಣದಲ್ಲಿಯೇ 'ಸಂಕ್ರಮಣ' ಪ್ರಿಂಟಾಗಿ ನಿಮ್ಮೆಲ್ಲರ ಕೈ ಸೇರುತ್ತಿರುವುದು.) ಒಮ್ಮೆ ಅದು ಇದು ಮಾತಾಡುತ್ತ ಗೌರಿಯ ಶಿಕ್ಷಣದ ಬಗ್ಗೆ ಹೇಳುತ್ತಿದ್ದರು.

ಗೌರಿ ನಟರಾಜರ ಒಬ್ಬಳೇ ಮಗಳು. ಯಾವುದನ್ನೂ ಹೆಚ್ಚು ಸೀರಿಯಸ್ ತೆಗೆದುಕೊಳ್ಳದೇ, ಎಷ್ಟು ಬೇಕೋ ಅಷ್ಟು ಸ್ಟಡಿ ಮಾಡುತ್ತಾ, ಟೀವಿ ನೋಡುತ್ತಾ, ಸೂಟಿ ಬಂದಾಗ ಮುಂಜಾನೆ ಹತ್ತರ ವರೆಗೆ ನಿದ್ದೆ ಹೊಡೆಯುತ್ತಾ, ಹರಟೆ ಹೊಡೆಯುತ್ತಾ, ಕುಲು ಕುಲು ನಗುತ್ತಾ ಕಾಡು ಹೂವಿನಂತೆ, ಅಥವಾ ಅಷ್ಟೇ ಸಹಜವಾಗಿ ಬೆಳೆಯುವ ಕುಂಡಲೆಯ ಗಿಡದಂತೆ, ಬೆಳೆಯುತ್ತಿರುವವಳು ಗೌರಿ. ಮನೆಯ ಸಮೀಪದ ಒಂದು ಒಳ್ಳೆಯ ಶಾಲೆಯಲ್ಲಿ ಶಿಕ್ಷಣ. ಕನ್ನಡ ಮಾಧ್ಯಮ. ರ್‍ಯಾಂಕು - ಪೀಂಕುಗಳ ಬಗ್ಗೆ ತಲೆಗೆ ಹಚ್ಚಿಕೊಳ್ಳದಿದ್ದರೂ ಎಲ್ಲ ವಿಷಯಗಳಲ್ಲಿ ಅರವತ್ತೋ ಎಪ್ಪತ್ತೋ ಅಂಕ ಗಳಿಕೆ.

ಸಮಸ್ಯೆ ಸುರುವಾದದ್ದು ಗೌರಿ ನಾಲ್ಕನೇ ಇಯತ್ತೆ ಪಾಸಾದನಂತರ. ಗೌರಿ 'ಜಾಣ' ವಿದ್ಯಾರ್ಥಿನಿಯರಲ್ಲಿ ಒಬ್ಬಳಾಗಿದ್ದರಿಂದ ಅವಳನ್ನು ಕೆಲವೇ ಕೆಲವರಲ್ಲಿ ಒಬ್ಬಳನ್ನಾಗಿ 'ಆಯ್ಕೆ' ಮಾಡಿ ಐದನೇ ತರಗತಿಯಿಂದ ಅದೇ ಶಾಲೆಯಲ್ಲಿ ಸಮಾನಾಂತರದಲ್ಲಿ ನಡೆಯುತ್ತಿದ್ದ ಇಂಗ್ಲಿಷ್ ಮೀಡಿಯಂಗೆ ಹಾಕಿಕೊಳ್ಳುವುದಾಗಿ ಹೇಳಿದರು ಶಾಲೆಯ ಹೆಡ್ ಮ್ಯಾಡಂ ಅವರು. ಪಾಲಕರಿಗೆ ಸ್ವಲ್ಪ ಆತಂಕದ ವಿಷಯವೇ. ಈ ಬಗ್ಗೆ ಗೌರಿಯ 'ಅಭಿಪ್ರಾಯ' ಕೇಳಿದರೋ ಇಲ್ಲವೋ ತಿಳಿಯದು. ಆದರೆ ಶಾಲೆಗೆ ಒಳ್ಳೇ ಶಾಲೆ ಎಂಬ ಹೆಸರಿದೆ. ಕ್ರಿಶ್ಚನ್ ಸಂಸ್ಥೆಯಾದ್ದರಿಂದ ಕಲಿಕೆಯ ಕ್ವಾಲಿಟಿಯ ಬಗ್ಗೆ ಚಿಂತಿಸಬೇಕಾಗಿಲ್ಲ. ಗೌರಿ ಇಂಗ್ಲಿಷ್ ಪಿಕಪ್ ಮಾಡಿಕೊಂಡಾಳು ಎಂಬ ನಿರೀಕ್ಷೆಯಿಂದ ಆ ಮೀಡಿಯಂಗೆ ಹಾಕಲಾಯಿತು.

ಮುಂದೆ ೨ - ೩ ತಿಂಗಳ ನಂತರ ನಟರಾಜ ಮತ್ತು ಜಯಶ್ರೀ ಇಬ್ಬರ ದನಿಯಲ್ಲೂ ಕಾತರ

ಮೂಡಿತ್ತು. ಕಾರಣ: ಈ ಮೊದಲು ಎಲ್ಲ ವಿಷಯಗಳಲ್ಲಿ ತೃಪ್ತಿಕರ ಎನ್ನಬಹುದಾದ ರೀತಿಯಲ್ಲಿ ಅಂಕ ಗಳಿಸುತ್ತಿದ್ದ ಮಗಳು ಈಗ ಅದೇ ವಿಷಯಗಳಲ್ಲಿ ಫೇಲ್ ಆಗುತ್ತಿದ್ದಾಳೆ! ಅಲ್ಲದೆ ಆಗೀಗ ದೈಹಿಕ ಅನಾರೋಗ್ಯ, ಜಡ್ಡು, ಜಾಪತ್ರಿ. ಏನು ಮಾಡೋಣ ಅಂದರು ನಟರಾಜ. ಇಂಥ ಅನೇಕ ಕೇಸುಗಳನ್ನು ಬಲ್ಲ ನಾನು, ಈಗಿಂದೀಗಲೇ ಗೌರಿಯನ್ನು ಕನ್ನಡ ಮೀಡಿಯಮ್ಮಿಗೆ ಹಾಕಿರಿ ಅಂತ 'ಉಚಿತ' ಸಲಹೆ ಕೊಟ್ಟೆ. ಏನು ಮಾಡಿದರೋ ಗೊತ್ತಿಲ್ಲ.

ಮೊನ್ನೆ ಧಾರವಾಡಕ್ಕೆ ಹೋದಾಗ ಗೌರಿ ಐದನೇ ಇಯತ್ತೆ ಪಾಸಾಗಿ ಆರಕ್ಕೆ ಬಂದಿದ್ದಳು. ಯಾವ ಮೀಡಿಯಂ, ಯಾವ ವಿಷಯದಲ್ಲಿ ಎಷ್ಟು ಸ್ಕೋರು ಇತ್ಯಾದಿ ಏನೂ ಕೇಳಲು ಹೋಗಲಿಲ್ಲ. ಅವಳೂ ಹೇಳಲಿಲ್ಲ.

*

ಮೇಲಿನ ಪ್ರಸಂಗ ನಾನು ವಿವರಿಸಿದ್ದು, ಕನ್ನಡ ಮಾಧ್ಯಮ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಇಂಗ್ಲಿಷ್ ಮಾಧ್ಯಮಕ್ಕಿಂತ ಒಳ್ಳೆಯದು ಎಂಬ ನನ್ನ ವಾದಕ್ಕೆ ಪೂರಕವಾಗಿ ಅಂತ ಅಲ್ಲ. ಇಂದು ಮೀಡಿಯಂ ಎಂಬುದು ಕೇವಲ ಶೈಕ್ಷಣಿಕ ಸಮಸ್ಯೆಯಾಗಿ ಉಳಿಯದೆ ಮಾನಸಿಕ ಸ್ಥಿತಿಯ, ಕೌಟುಂಬಿಕ ವಾತಾವರಣದ ಹಾಗೂ ಸಮುದಾಯದ ಸೌಖ್ಯದ ಸಮಸ್ಯೆಯಾಗಿದ್ದರೂ ಅದರ ಬಗ್ಗೆ ನಾವು ಗಂಭೀರವಾಗಿ ಯೋಚನೆ ಮಾಡುತ್ತಿಲ್ಲವಲ್ಲ - ಇದು ನನ್ನ ಕಳವಳ.

ಎಷ್ಟೋ ವರ್ಷದ ಹಿಂದೆ, ಯಾವಾಗಲೋ ಎಲ್ಲಿಂದಲೋ ಎಲ್ಲಿಗೋ ಟ್ರೇನಿನಲ್ಲಿ ಹೊರಟಿದ್ದೆ. ಸೆಕೆಂಡ್ ಕ್ಲಾಸ್ ಬೋಗಿ. ಎದುರಿನ ಸೀಟಿನಲ್ಲಿ ತಾಯಿ ಮತ್ತು ಮಗ. ನೋಡಿದರೇ ಗೊತ್ತಾಗಬೇಕು ಸುಸಂಸ್ಕೃತ ಹಿನ್ನೆಲೆ. ಮಗ ಕಿಡಕಿಯಲ್ಲಿ ಹಣಿಕೆ ಹಾಕಿ ಅದೇನು ಅಮ್ಮಾ ಅದೇನು ಅಮ್ಮಾ ಅಂತ ಕೇಳುತ್ತಿದ್ದಾನೆ. ತಾಯಿ ಗಂಭೀರವದನೆ. (ಸೆಕೆಂಡ್ ಕ್ಲಾಸ್‌ನಲ್ಲಿ ಕುಂತವರು ಅಷ್ಟುಯಾಕೆ ಮೈ - ಮುಖ ಬಿಗಿ ಹಿಡಿಯಬೇಕೋ ನನಗೆ ಅರ್ಥವಾಗಲಿಲ್ಲ) ಮಗ ಸಹಜವಾಗಿ ಕನ್ನಡದಲ್ಲಿ ಪ್ರಶ್ನೆ ಕೇಳಿದಾಗೆಲ್ಲ ತಾಯಿ ತನ್ನ ಸ್ಟೈಲಿಶ್ ಆದ ಇಂಗ್ಲಿಷಿನಲ್ಲಿ ಅವನಿಗೆ ದಬಾಯಿಸುತ್ತ, ಬುದ್ಧಿ ಹೇಳುತ್ತಿದ್ದಳು. ಮಗನಿಗೆ ಇಂಗ್ಲಿಷ್ ತಿಳಿಯುತ್ತದೆ, ಆದರೆ ಕನ್ನಡದಲ್ಲಿ ಮಾತು. ತಾಯಿ ಕೂಡ ಕನ್ನಡಾಂಬೆಯೇ ಆದರೆ ಮಾತೆಲ್ಲ ಇಂಗ್ಲಿಷ್.

ಇಂಥ ಪ್ರಸಂಗಗಳು ನಡೆಯುತ್ತಿರುವಾಗೆಲ್ಲ ನಾನು ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತೇನೆ-ಎದುರಿಗಿದ್ದವರ ಗಮನಕ್ಕೆ ಬಾರದ ಹಾಗೆ. ಆ ತಾಯಿಯನ್ನು ಕೇಳಬೇಕೆಂದುಕೊಂಡು ಅನೇಕ ಪ್ರಶ್ನೆಗಳನ್ನು ಮನಸ್ಸಿನಲ್ಲೇ ಕಂಪೋಜ್ ಮಾಡುತ್ತಿದ್ದೆ. ಕನ್ನಡದಲ್ಲಿ ಕೇಳಲೋ ಇಂಗ್ಲಿಷ್‌ನಲ್ಲಿ ಕೇಳಲೋ ಎಂಬ ಹ್ಯಾಮ್ಲೆಟ್ - ದ್ವಂದ್ವ ನನಗೆ. ಕನ್ನಡದಲ್ಲಿ ಏನಾದರೂ ಕೇಳಿದರೆ ಅವಳು 'ಯೂ ಶಟಪ್' ಅಂದು ಬಿಟ್ಟರೆ ? ಹಾಗೆ ಅನ್ನದಿದ್ದರೂ ಕಣ್ಣಿನ ನೋಟದಲ್ಲಿ ತುಟಿಯ ಬಿಗಿತದಲ್ಲಿ ಅಂಥದೇ ಮಾತನ್ನು ಮೌನದಲ್ಲಿ ಸೂಚಿಸಿದರೆ ? ಇಷ್ಟೆಲ್ಲ ಗೊಂದಲದಲ್ಲಿ ನಾನು ಮುಳುಗಿದಾಗ ಮಗನ ಕನ್ನಡ ಹಾಗೂ ತಾಯಿಯ ಇಂಗ್ಲಿಷ್ ಜುಗಲ್‌ಬಂದಿ ನಡೆದೇ

ಇತ್ತು. ಯಾವುದೋ ಸ್ಟೇಶನ್ನಿನಲ್ಲಿ ಇಳಿದರು. ಆ ಪ್ರಸಂಗ ನನ್ನೊಳಗೆ ಇಂಗಿ ಇಂಗಿ ನನ್ನ ಅಗಾಧ ಅಂತರ್ಜಲವ ನಿಧಿಯಲ್ಲಿ ಒಂದು ಬಿಂದುವಾಗಿ ಸೇರಿ ಹೋಯಿತು.

*

ಇದಕ್ಕೆ ಹೊಂದಿಕೊಂಡೇ ಇನ್ನೊಂದು ಪ್ರಸಂಗದ ನೆನಪು. ನೆನಪು ಅಂದರೆ ಅನೇಕ ವರ್ಷಗಳ ಹಿಂದಿನದೇ ಅಲ್ಲವೇ?.. ಮಗನನ್ನೋ ಮಗಳನ್ನೋ ಶಾಲೆಗೆ ಬಿಡಲು ಹೋಗಿದ್ದೆ. ಅದೇ ಶಾಲೆ. ಈಗ ಗೌರಿ ಕಲಿಯುತ್ತಿರುವುದು. ಪರಿಚಿತರೊಬ್ಬರು ಮಗನೊಂದಿಗೆ ಬಂದಿದ್ದರು. ಶಾಲೆಯ ಕನ್ನಡ ಮಾಧ್ಯಮಕ್ಕೆ ಅವನನ್ನು ಸೇರಿಸಬೇಕಿತ್ತು.

'ನೋಡ್ರಿ ಸಾಹೇಬ್ರ. ನನ್ನ ಹೇಣ್ತಿ ಕೂಡ ಜಗಳಾಡಿ ಈ ಹುಡಗನ್ನ ಇಲ್ಲಿಗೆ ಕರಕಂಡು ಬಂದನಿs ನೋಡ್ರಿ' ಅಂದರವರು. ಇಂಥ ಮಾತನ್ನು ಅನೇಕ ಬಾಯಿಗಳಿಂದ ಕೇಳಿದ್ದ ನನಗೆ ಆಶ್ಚರ್ಯವಾಗಲಿಲ್ಲ. ಪಾನಗೋಷ್ಠಿಗಳಲ್ಲಿ ನನ್ನ ಅನೇಕ ಸ್ನೇಹಿತರು ಈ ಬಗೆಯ ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಮತ್ತೆ ಮತ್ತೆ ಅವರು ಬೊಟ್ಟು ಮಾಡಿ ತೋರಿಸುವುದು ಮನೆಯ ಹೆಣ್ಣುಮಕ್ಕಳನ್ನೇ.

ಮನೆಯೆ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು. ಇಂಥ ಜನನಿಯೇ ಇಂದು ಕನ್ನಡ ನಾಡಿನಲ್ಲಿ ಕನ್ನಡ - ವಿರೋಧಿಯಾಗಿದ್ದಾಳೆಯೇ ?

ನಮ್ಮ ಮನೆ ಮಗ್ಗುಲಿಗೆ ಶ್ರೀಮಂತರೊಬ್ಬರ ಮನೆ. ಆಗರ್ಭ ಶ್ರೀಮಂತರೇನಲ್ಲ. ಹಳ್ಳಿಯ ಮೂಲದಿಂದ ಬಂದು ವ್ಯಾಪಾರ ಗೀಪಾರ ಮಾಡಿ ಉಳ್ಳವರಾದವರು. ಸುಶಿಕ್ಷಿತರಲ್ಲ. ವ್ಯವಹಾರಕ್ಕೆಷ್ಟು ಬೇಕೋ ಅಷ್ಟು ಕನ್ನಡ ಕಲಿತವರು. ಆದರೆ ಅವರ ಮೊಮ್ಮಕ್ಕಳು ಮಾತ್ರ ಕಾನ್ವೆಂಟ್ ಕಂದಮ್ಮಗಳು. ಒಮ್ಮೆ ಆ ಮನೆಯ ಯಜಮಾನಿ (ಅವಳಿಗೇ ಸ್ವತಃ ಸಹಿ ಮಾಡಲು ಬರುವುದಿಲ್ಲ.) ಬಹಳ ಉಮೇದಿನಿಂದ, ಖುಶಿಯಿಂದ ಹೇಳುತ್ತಿದ್ದಳು ಮೊಮ್ಮಗಳೊಬ್ಬಳ ಬಗ್ಗೆ : "ನೋಡ್ರಿ, ಅಣ್ಣಾರ. ನಮ್ಮ ಟಿಂಕಿ ಕನ್ನಡದಾಗs ಪೇಲಾಗ್ಯಾಳ್ರಿ"

ಕನ್ನಡದಲ್ಲಿ 'ಪೇಲ್' ಆಗುವುದು ಈ ಮದುಕಿಗೆ ಅಭಿಮಾನದ ಸಂಗತಿ! ಇದು ಪ್ರತಿಷ್ಠೆಯೋ, ಅಜ್ಞಾನವೋ, ಕೀಳರಿಮೆಯೋ , ಮೇಲರಿಮೆಯೋ ಗೊತ್ತಾಗದಂಥ ಪರಿಸ್ಥಿತಿ. ವಿಚಿತ್ರವೆಂದರೆ, ನನ್ನ ಯುನಿವರ್ಸಿಟಿ ಕಲೀಗರೊಬ್ಬರು ತಮ್ಮ ಸಂತಾನವೊಂದರ ಬಗ್ಗೆ ಇದೇ ಮಾತನ್ನು ಇಷ್ಟೇ ಆನಂದದಿಂದ ಹೇಳುತ್ತಿದ್ದರು.

ನಮ್ಮ ಶಹರಗಳ ಮಧ್ಯಮ ವರ್ಗದ ಸ್ಥಿತಿ ನೋಡಿರಿ. ತಂದೆ ಆಫೀಸಿಗೆ ಹೋಗುತ್ತಾನೆ. ಅಥವಾ ಆಫೀಸೆಂದು ಹೇಳಿ ಅಂತೂ ಮನೆ ಬಿಟ್ಟು ಹೋಗುತ್ತಾನೆ. ಮಕ್ಕಳ ಜವಾಬ್ದಾರಿ ತಾಯಿಯದು. ಮಗ್ಗಲು ಮನೆಯಲ್ಲಿ ಕಾರು ಇದೆ, ಕಲರ್ ಟೀವಿ ಇದೆ. ಆ ಮನೆಯ ಮಕ್ಕಳು ಟ್ರಿಮ್ಮಾಗಿ ಡ್ರೆಸ್ ಮಾಡಿಕೊಂಡು ಕಾಲ್‌ಗೇಟ್ ನಗೆ ಚೆಲ್ಲುತ್ತ ಸ್ಕೂಲಿಗೆ ಹೋಗುವ ಮುಂದೆ ಮಮ್ಮಿ ಬಾಗಿಲಿಗೆ ಒರಗಿ ನಿಂತು ಬಾಯ್ ಅನ್ನುತ್ತಾಳೆ. ಈ ಮನೆಯ ಮಗು ಇದನ್ನೆಲ್ಲ

ಕಣ್ತುಂಬ ತುಂಬಿಕೊಳ್ಳುತ್ತದೆ. ಆ ಕಣ್ಣಿನ ಕನಸು, ಆ ಕನಸಿನ ನೋವು, ತಾಯಿಗೆ ಅರ್ಥವಾಗುತ್ತದೆ. ಅವರಿಗಿಂತ ನಾವೇನು ಕಡಿಮೆ? ಬರೋಬರಿ. ಗಂಡ ಸಂಜೆಯ ವೇಳೆಗೆ ಆಫೀಸಿನಿಂದ ವಾಪಾಸಾದ ಮೇಲೆ ಕಿರಿಕಿರಿ ಪ್ರಾರಂಭ. ಮಕ್ಕಳ ಶಿಕ್ಷಣದ ಮೀಡಿಯಂನಂಥ 'ಸಣ್ಣ' ವಿಷಯದ ಬಗ್ಗೆ ಹಗಲೂ ರಾತ್ರಿ ಹೆಂಡತಿ ಕೂಡ ಜಗಳಾಡಿ ಸುಖ ವಂಚಿತನಾಗಬೇಕೇ ಗಂಡ ?

ಗೆಳೆಯರೊಂದಿಗೆ ಗೋಳಾಟ : ನಮ್ಮ ಮನೀ ಹೆಣ್ಣುಮಕ್ಕಳ ಮಾತು ಹ್ಯಾಂಗ ಮೀರಬೇಕ್ರಿ.

ಆದರೆ ಹೆಂಡಂದಿರ ಗೆರೆಗಳನ್ನು ಮೀರಲಾಗದ ಇಂಥ ಈ ಲೋಕದ ಗಂಡರ ವಾದ ವೈಖರಿಯನ್ನು ಮೈಸೂರಿನ ನಮ್ಮ ಮೀರಾ ನಾಯಕ ಅವರು ಒಪ್ಪುವದಿಲ್ಲ. (ಮೀರಾ ಅವರು ಮೈಸೂರು ಜಿಲ್ಲಾ ಕನ್ನಡ ಜಾಗೃತಿ ಸಮಿತಿಯ ಸದಸ್ಯೆ. ಪ್ರಾಧ್ಯಾಪಕಿ. ಜಿ.ಎಚ್. ನಾಯಕ ಅವರ ಬಾಳಸಂಗಾತಿ) ಅವರು ಎದುರಿಗೆ ಕುಳಿತ (ನಮ್ಮಂಥ) ಗಂಡಸರನ್ನು ನೇರವಾಗಿ ಝಾಡಿಸುತ್ತಾರೆ : "ನಿಮಗ ಹೆಂಡ ಕುಂಡಿಯೋಮುಂದ ಹೆಂಡತಿ ಪರ್ಮಿಶನ್ ಬೇಕಾಗೋದಿಲ್ಲ. ಜೂಜು ಆಡೋಮುಂದ ಅವರ ಅಭಿಪ್ರಾಯ ಕೇಳೋದಿಲ್ಲ. ಈ ವಿಷಯಕ್ಕೆ ಮಾತ್ರ ಯಾಕೆ ಹೆಂಡಂದಿರ ಹೆಸರು ಮುಂದೆ ಮಾಡ್ತೀರಿ?"

*

ನಿಜ. ಹೆಂಡಂದಿರ ಮೇಲೆ ಅಪವಾದ ಹೊರಿಸಿ, ಪಲಾಯನ ಗೈಯುವ ಅನೇಕ ಗಂಡಂದಿರು ಕೂಡ ಒಳಗೊಳಗೇ ತಮ್ಮ ಮಕ್ಕಳು ಇಂಗ್ಲಿಷ್ ಮೀಡಿಯಂದಲ್ಲಿ ಓದಲಿ ಎಂದೇ ಬಯಕೆ ಹೊಂದಿರುತ್ತಾರೆ. ಸಾರ್ವಜನಿಕ ವೇದಿಕೆಗಳ ಮೇಲಿಂದ ಕನ್ನಡದ ಪಾಂಚಜನ್ಯ ಊದುವವರು ಮಾತ್ರ ತಮ್ಮ ಮಕ್ಕಳು, ಮೊಮ್ಮಕ್ಕಳ ಬಗ್ಗೆ ಇನ್ನೂ 'ಗಂಭೀರ' ವಾದ ವಾದಗಳ ಆಶ್ರಯ ಪಡೆಯಬೇಕಾಗುತ್ತದೆ.: (೧) ಇಂಗ್ಲಿಷ್ ಶಿಕ್ಷಣದಿಂದ ವಂಚಿತರಾಗಿ ನಮ್ಮ ಮಕ್ಕಳು ಎರಡನೇ ದರ್ಜೆಯ ನಾಗರಿಕರಾಗುವುದು ಬೇಡ (೨). ಸರಕಾರಿ ಕನ್ನಡ ಶಾಲೆಗಳ ಪರಿಸ್ಥಿತಿ ಅಧೋಗತಿಗಿಳಿದಿದೆ. ಅವು ಮುಂಚೆ ಸುಧಾರಣೆಯಾಗಲಿ. ಅನಂತರ ನೋಡೋಣ... ಇತ್ಯಾದಿ.

ನಮ್ಮ 'ಸರಕಾರಿ' ಶಾಲೆಗಳ ಪರಿಸ್ಥಿತಿ ನಿಜವಾಗಿಯೂ ಇಷ್ಟು ಕೆಟ್ಟು ಹೋಗಿದೆಯೇ? ವಿಚಾರಿಸಬೇಕಾದ ವಿಷಯವಿದು. ಬೆಂಗಳೂರಿನ ಕಾರ್ಪರೇಶನ್ ಶಾಲೆಗಳ ಬಗ್ಗೆ ಅಂಥ ಶಾಲೆಯೊಂದರ ಮುಖ್ಯಾಧ್ಯಾಪಕರೊಬ್ಬರು ಹೇಳಿದ ಮಾತು ನೆನಪಿಗೆ ಬರುತ್ತದೆ. ಕಾರ್ಪೋರೇಶನ್ ಶಾಲೆಗಳಲ್ಲಿ ಸರಿಯಾದ ವಿದ್ಯಾರ್ಹತೆ ಮತ್ತು ತರಬೇತಿ ಪಡೆದ ಶಿಕ್ಷಕರಿರುತ್ತಾರೆ. ಎಲ್ಲ ಪರಿಕರಗಳೂ ಸಮರ್ಪಕವಾಗಿರುತ್ತವೆ. ಇಷ್ಟೆಲ್ಲ ಗೊತ್ತಿದ್ದರೂ ರಾಜಧಾನಿಯ 'ಕನ್ನಡ' ಪಾಲಕರು ತಮ್ಮ ಮಕ್ಕಳನ್ನು ಯಾಕೆ ಖಾಸಗೀ ಇಂಗ್ಲಿಷ್ ಮೀಡಿಯಂ ಶಾಲೆಗಳಿಗೆ ಕ್ಯೂನಲ್ಲಿ

ನಿಂತು ಪ್ರವೇಶ ಫಾರ್ಮ್ ಪಡೆದು , ಅವರವರ ಪರ್ಸ್ ಹಚ್ಚಿ ಕೇಳಿದಷ್ಟು ಡೊನೇಶನ್ ಸುರಿದು ಕಳಿಸುತ್ತಾರೆ ?

ಸರಕಾರಿ ಶಾಲೆಗಳನ್ನು ಟೀಕಿಸುವವರಿಗೆ ಖಾಸಗಿ ಕಾನ್ವೆಂಟ್ ಶಾಲೆಗಳ ಸ್ಥಿತಿಯ ಬಗ್ಗೆ ವಿಪರೀತ ಭ್ರಮೆಗಳು. ದೊಡ್ಡ ಪಟ್ಟಣಗಳಲ್ಲಿ ಏನೋ ಹತ್ತಾರು ಒಳ್ಳೆಯ ಕಾನ್ವೆಂಟ್ ಇರಬಹುದು. ಆದರೆ ಇಂದು ರಾಜಧಾನಿಯ ಬಡಾವಣೆಗಳಲ್ಲಿ, ಜಿಲ್ಲಾ ಕೇಂದ್ರ, ತಾಲೂಕಾ ಸ್ಥಳಗಳಲ್ಲಿ ಪುದು ಪುದು ಎಂದು ಎದ್ದು ನಿಂತಿರುವ ಕಾನ್ವೆಂಟ್ ಶಾಲೆಗಳಿಗೆ ಹೋಗಿ ನೋಡಿರಿ. ಒಂದು ಚಿಕ್ಕ ರೂಮಿನಲ್ಲಿ ೫೦ - ೬೦ ಮಕ್ಕಳನ್ನು ತುರುಕುತ್ತಾರೆ. ಕೂದ್ರಲು ವ್ಯವಸ್ಥೆ ಇಲ್ಲ. ಗಾಳಿ ಆಡುವುದಿಲ್ಲ. ಕಲಿಸುವವರಿಗೆ ಮಿನಿಮಂ ಡಿಗ್ರಿ ಇರುವುದಿಲ್ಲ. ಅವರಿಗೆ ತಿಂಗಳಿಗೆ ಇನ್ನೂರೋ ಮುನ್ನೂರೋ ಪಗಾರ. ನೌಕರಿಯ ಭದ್ರತೆ ಅಂತೂ ಇಲ್ಲವೇ ಇಲ್ಲ. ಡ್ರೆಸ್ಸೋ, ಪುಸ್ತಕವೋ, ಗ್ಯಾದರಿಂಗೋ, ಬಿಲ್ಡಿಂಗ್ ಫಂಡೋ ಅಂತ ರೊಕ್ಕ ಕೇತ್ತುತ್ತಲೇ ಇರುತ್ತಾರೆ. ಪಾಲಕರು ಧಾರಾಳವಾಗಿ, ತಮ್ಮ ಸಂತಾನಗಳ ಭವ್ಯ ಭವಿಷ್ಯತ್ತಿಗಾಗಿ ಬ್ರ ಅನ್ನದೆ ಸುರಿಯುತ್ತಲೇ ಹೋಗುತ್ತಾರೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿ ನಾನೂ ಅನೇಕ ಕಾನ್‌ವೆಂಟ್‌ಗಳನ್ನು ನೋಡಿದ್ದೇನೆ. ಒಂದು ಶಾಲೆಯಲ್ಲಿ ನನ್ನ ಹಳೆಯ ವಿದ್ಯಾರ್ಥಿನಿಯೊಬ್ಬಳು ಶಿಕ್ಷಕಿ. ನಾನು ಕೇಳಿದ ಕೆಲವು ಪ್ರಶ್ನೆಗಳಿಗೆ ಅವಳು ಉತ್ತರಿಸಿದ ಇಂಗ್ಲಿಷ್ ವಾಕ್ಯಗಳನ್ನು ನೋಡಿ ನನಗೆ ನಾಚಿಗೆ ಆಗಿತ್ತು. ಹೊಸಪೇಟೆಯ ಒಂದು ಪ್ರತಿಷ್ಠಿತ ಕಾನ್ವೆಂಟ್ ಶಾಲೆಗೆ ಹೋದಾಗ ಸಂಜೆಯ ವೇಳೆ. ಕಲಿಸುವವರು ಕಲಿಯುವವರು ಯಾರೂ ಇರಲಿಲ್ಲ. ಕ್ಲಾಸ್ ರೂಮಿಗೆ ಹೋಗಿ ಕಪ್ಪು ಹಲಗೆಯ ಮೇಲೆ ಬರೆದದ್ದು ಗಮನಿಸಿದಾಗ - ಎಂಟು ಇಂಗ್ಲಿಷ್ ವಾಕ್ಯಗಳಲ್ಲಿ ಹನ್ನೊಂದು ತಪ್ಪುಗಳು ?

ನಮ್ಮ ಪಾಲಕರಿಗೆ ಇವೆಲ್ಲ ತಿಳಿಯುವುದೇ ಇಲ್ಲ. ಪರೀಕ್ಷೆಗಳಲ್ಲಿ ಬರೆದ ಉತ್ತರಗಳಲ್ಲಿ ಅನೇಕ ಅನಾಹುತಗಳಿದ್ದರೂ ವಿದ್ಯಾರ್ಥಿ ಪಡೆಯುವುದು ಶೇಕಡಾ ತೊಂಬತ್ತಕ್ಕಿಂತ ಹೆಚ್ಚು ಅಂಕಗಳನ್ನು. ಅಂಕ ಪಟ್ಟಿ ನೋಡಿದ ಯಾವ ತಂದೆ - ತಾಯಿಗಳ ಬಾಯಿಂದ 'ಆಹಾ' ಎಂಬ ಶಬ್ದ ಹೊರಡಲಿಕ್ಕಿಲ್ಲ? ಬ್ರಹ್ಮಾನಂದಕ್ಕಿಂತ ಮಿಗಿಲಾದ ಭ್ರಮಾನಂದದಲ್ಲಿ ಲೀನರಾದ ಅವರಿಗೆ ತಮ್ಮ ಮಗ ಅಥವಾ ಮಗಳ ಭವಿಷ್ಯದ ಮುಖ ಕಾಣುವುದು ಇಂಗ್ಲೆಂಡ್ - ಅಮೇರಿಕೆಗಳ ಉಪಗ್ರಹಗಳಲ್ಲಿ, ಕಂಪ್ಯೂಟರ್‌ಗಳಲ್ಲಿ.

ಈ ಭ್ರಮೆ ಎಲ್ಲಿಯವರೆಗೆ.?

ಪ್ರೊ. ಸುಧಾಕರ ಮೇಲಿಂದ ಮೇಲೆ ತಮ್ಮ ಮನೆಯದೇ ಒಂದು ಪ್ರಸಂಗ ಹೇಳುತ್ತಾರೆ. (ಸುಧಾಕರ : ಕನ್ನಡ ಕತೆಗಾರ ; ಮೈಸೂರು ವಿಶ್ವವಿದ್ಯಾಲಯದಿಂದ ನಿವೃತ್ತರಾಗಿ ಸದ್ಯ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನಕ ಪೀಠದ ಅಧ್ಯಕ್ಷ ; ನಮ್ಮ ಪ್ರಾಧಿಕಾರದ

ರಾಜ್ಯ ಸಮಿತಿಯ ಸದಸ್ಯ) ಸುಧಾಕರ ತಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಹಾಕಿದರೆ, ಡಾಕ್ಟರ್ ವೃತ್ತಿಯ ಅವರ ಸೋದರ ತಮ್ಮ ಮಕ್ಕಳನ್ನು ಚನ್ನರಾಯಪಟ್ಟಣದಿಂದ ಮೈಸೂರು ನಗರಕ್ಕೆ ಕಳಿಸಿ ಅಲ್ಲಿಯ ಇಂಗ್ಲಿಷ್ ಮೀಡಿಯಂ ಶಾಲೆಗೆ ಹಾಕಿದ್ದರು. ಮಕ್ಕಳು ಮಕ್ಕಳ ನಡುವೆ ಪೈಪೋಟಿ. ಡಾಕ್ಟರರ ಮಕ್ಕಳಿಗೆ ಪ್ರತಿಯೊಂದು ಸಬ್ಜೆಕ್ಟಿನಲ್ಲಿ ಎಂಬತ್ತು ತೊಂಬತ್ತು. ಮಾಸ್ತರರ ಮಕ್ಕಳಿಗೆ ಕಡಿಮೆ. ಪರಸ್ಪರ ಹೀಯಾಳಿಕೆ, ಮೂದಲಿಕೆ, ಎಸ್ ಎಸ್ ಎಲ್ ಸಿ ತನಕ ಈ ಆಟ.

ಕಾಲೇಜಿಗೆ ಪಿಯುಸಿ ಹಂತಕ್ಕೆ ಬಂದಾಗ ಡಾಕ್ಟರರ ಮಕ್ಕಳು ಪರೀಕ್ಷೆಗಳಲ್ಲಿ ಡುಮ್ಕಿ. ಸುಧಾಕರರ ಮಕ್ಕಳು, ಮೊದಲ ಹಂತದಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿದವರು ಆನಂತರ ಇಂಗ್ಲಿಷ್ ಭಾಷೆಯನ್ನು ಸರಿಯಾಗಿ ಗ್ರಹಿಸಿಕೊಂಡು, ಮುಂದೆ ದೊಡ್ಡ ಹುದ್ದೆಗಳನ್ನು ಪಡೆದಿದ್ದಾರೆ. ನಾನು ಹೋದಲ್ಲೆಲ್ಲ ಒಂದು ಜೋಕು ಹೇಳುತ್ತೇನೆ. ಯಾರೋ ಎಲ್ಲೋ ಹೇಳಿದ್ದು, ಜೋಕುಗಳೆಲ್ಲ ಜಾನಪದ ಸಾಹಿತ್ಯದ ಹಾಗೆ. ಉಂಡವನದೇ ಊಟ, ಬಡಿದವನದೇ ಗೂಟ.

ಪ್ರಾಥಮಿಕ ಶಾಲೆಯಲ್ಲಿ ಕನ್ನಡದಲ್ಲಿಯೇ ಎಲ್ಲ ಕಲಿತವ ಮುಂದೆ ಮುಂದೆ ಹೋಗಿ ಇಂಗ್ಲಿಷನ್ನೂ ಕೈವಶ ಮಾಡಿಕೊಂಡು ಡಾಕ್ಟರ್ ಆಗುತ್ತಾನೆ. ಆದರೆ ಮೊದಲೇ ಇಂಗ್ಲಿಷ್ ಮೀಡಿಯಂಗೆ ಜೋತುಬಿದ್ದ ವಿದ್ಯಾರ್ಥಿ ಮುಂದೆ ಬಹಳ ಅಂದರೆ ಮೆಡಿಕಲ್ ರಿಪ್ರೆಜೆಂಟೇಟಿವ್ ಮಾತ್ರ ಆಗುತ್ತಾನೆ. ನಿಮಗೆ ಗೊತ್ತಲ್ಲ. ಬಾಯಿಪಾಠ ಮಾಡಿದ ಹನ್ನೊಂದು ವಾಕ್ಯ ಅವನಿಗೆ ಗೊತ್ತು. ಇನ್ನೊಂದು ಪ್ರಶ್ನೆ ಕೇಳಿದಿರೋ, ಥ್ಯಾಂಕ್ಯೂ ಅಂತ ಹೇಳಿ ಕೈಕುಲುಕಿ ಕಣ್ಮರೆಯಾಗುತ್ತಾನೆ.

ನಮ್ಮ ಗ್ರಹಿಕೆಗೆ ಸುಲಭವಾಗಿ ದಕ್ಕದ ಇನ್ನೊಂದು ಸಾಂಸ್ಕೃತಿಕ ಅಪಾಯದ ಬಗ್ಗೆಯೂ ನಾವು ಚಿಂತಿಸಬೇಕಾಗಿದೆ. ತಲೆ ತುಂಬ ಚಿಕ್ಕ ವಯಸ್ಸಿನಲ್ಲಿಯೇ ಇಂಗ್ಲಿಷಿನ ಟಿಸ್ ಪುಸ್ ತುಂಬಿಕೊಂಡ ನಮ್ಮ ಎಳೆಯರು 'ಕನ್ನಡ' ಕ್ಕೆ ಸಂಬಂಧಪಟ್ಟ ಸಾಹಿತ್ಯ , ಕಲೆ, ಸಂಸ್ಕೃತಿ, ಪರಂಪರೆಗಳ ಬಗ್ಗೆಯೂ ತಿರಸ್ಕಾರಣ ತುಚ್ಛ ಭಾವನೆ ತಳೆಯುತ್ತಾರೆ. ಈ ನೆಲದ ಬೇರುಗಳನ್ನೇ ಕಡಿದುಕೊಳ್ಳುವ ಈ ಜೀವಗಳು ಆಕಾಶದಲ್ಲಿ ಯಾವ ಟೊಂಗೆಗಳನ್ನು ಹರಡಲು ಸಾಧ್ಯ ; ಬರೀ ಕಾಮಿಕ್ಸ್, ಡಿಸ್ಕೋ, ಪತ್ತೇದಾರಿಗಳ ಪ್ರಪಂಚದಲ್ಲಿ ಸುತ್ತಾಡುತ್ತಾ ಪ್ರಬುದ್ಧ ವಯಸ್ಸಿಗೆ ಬಂದಾಗ ಮಾದಕ ವಸ್ತುಗಳ ಚಟಗಳ ತೃಪ್ತಿಗಾಗಿ ಕ್ರಿಮಿನಲ್‌ಗಳಾಗಿ ಪರಿವರ್ತಿತರಾಗುತ್ತಿರುವ ದುರಂತವನ್ನು ನಾವು ಕಾಣುತ್ತಿದ್ದೇವೆ.

ಮಗನನ್ನೋ ಮಗಳನ್ನೋ ಒಂದು ಕಾನ್ವೆಂಟಿಗೆ ಹಾಕಿ ಕೈ ತೊಳೆದುಕೊಂಡು ಬಿಡುವ ನಮ್ಮ ಪಾಲಕರನೇಕರು ಮಕ್ಕಳೊಂದಿಗಿರಬೇಕಾದ ಸಹಜ ಪ್ರೀತಿ ಮತ್ತು ಕಾಳಜಿಯ ಸಂಬಂಧಗಳ ಕೊಂಡಿಗಳನ್ನೂ ಕಳಚಿಕೊಂಡು, ತಲೆಗೆ ಬಡಿದಾಗ ಮಾತ್ರ ಅಯ್ಯೋ ಎಂದು ಗೋಳಾಡುತ್ತಾರೆ. ಶ್ರೀಮಂತ ವರ್ಗಕ್ಕೆ ಸೀಮಿತವಾಗಿದ್ದ ಈ ವಿದ್ಯಮಾನ ಈಗ ಮಧ್ಯಮ ವರ್ಗಕ್ಕೂ ಪ್ರವೇಶ ಪಡೆದಿದೆ

*

"ಪನ್ರಿ, ಕಾಯಿಪಲ್ಲೆ ಮಾರುವವರು, ಟಾಂಗಾ ಹೊಡೆಯುವವರು ಕೂಡ ಈಗ ತಮ್ಮ ಮಕ್ಕಳನ್ನು ಕಾನ್ವೆಂಟುಗಳಿಗೆ ಹಾಕಲು ಹಾತೊರೆಯುತ್ತಿದ್ದಾರೆ" ಎಂಬುದು, ಈಗಾಗಲೇ ಕಾನ್ವೆಂಟ್ ಸಾಮ್ರಾಜ್ಯಕ್ಕೆ ದಾಖಿಲಾದ ಕೆಲ ವರ್ಗಗಳ ತಕರಾರು. ಇಂಥವರನ್ನು ಕಂಡರೆ ನನಗೆ ಬಲು ಸಿಟ್ಟು. ತಮ್ಮ ತಮ್ಮ ಜಾತಿ, ಉಪಜಾತಿಗಳಿಗಾಗಿ ಜಗದ್ಗುರುವನ್ನು ಸೃಷ್ಟಿಸಿಕೊಂಡು, ಮಠಗಳನ್ನು ಕಟ್ಟಿಕೊಂಡ ಮೇಲುವರ್ಗದವರು, ಕೆಳವರ್ಗದವರೂ ಕೂಡ ಹಾಗೆ ಮಾಡಿದಾಗ ತೋರುವ ಅಸಹನೆ, ತಿರಸ್ಕಾರಗಳ ರೀತಿಯದೇ ಇದು. ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ - ಎಂಬಂತೆ. ಮೇಲಿನವರು ಮಾಡಿದ್ದನ್ನೇ ಕೆಳಗಿನವರೂ ಅನುಕರಿಸುವುದು ಸಹಜ.

ನಮ್ಮ ಸಮಾಜದ ಸೋಕಾಲ್ಡ್ ಬುದ್ಧಿ ಜೀವಿಗಳು, ಮಧ್ಯಮ ವರ್ಗದ ಸುಶಿಕ್ಷಿತರು ಮೊದಲು ತಾವು ರಿಪೇರಿಯಾಗಬೇಕು. ತನ್ನ ಬೆನ್ನು ತನಗೆ ಕಾಣುವುದಿಲ್ಲ- ಎಂಬ ಮಾತಿದೆ. ಯಾವುದೇ ಸಲೂನಿಗೆ ಹೋದರು ಎದುರು ಬದುರು ಕನ್ನಡಿಗಳ ಮುಖಾ ಮುಖಿಯಲ್ಲಿ ಈ ಮಾತಿನ ಸುಳ್ಳು ನಿಮ್ಮ ಕಣ್ಣಿಗೆ ಬಡಿಯುತ್ತದೆ. ನಮ್ಮ ಬೆನ್ನು ನಮಗೆ ಕಂಡೇ ಕಾಣುತ್ತದೆ. ಕಾನ್ವೆಂಟ್ ಪಿಡುಗಿನಿಂದ ನಮ್ಮ ಕಾರ್ಮಿಕರಿಗೆ, 'ದಲಿತರಿಗೆ' ಹಾನಿ ಆಗುತ್ತಿದ್ದರೆ, ಅಂಥದೇ ಹಾನಿ ನಮ್ಮ ಮಕ್ಕಳಿಗೂ ಆಗುತ್ತದೆ ಎಂಬ ಅರಿವು ನಮಗಾಗಬೇಕಾಗಿದೆ.

*

ಜಾಗತೀಕರಣದ ಇಂದಿನ ಸಂದರ್ಭದಲ್ಲಿ ನಮಗೆ ಅಂತರ್‌ರಾಷ್ಟ್ರೀಯ ಭಾಷೆ, ಎಂದೆನಿಸಿಕೊಳ್ಳುವ ಇಂಗ್ಲಿಷ್ ಬಾಷೆಯ ಜ್ಞಾನ ಅನಿವಾರ್ಯ. ಎಷ್ಟು? ಎಷ್ಟು ಬೇಕೋ ಅಷ್ಟು. ಇಂಡಿಯಾ ಒಕ್ಕೂಟದ ಬೇರೆ ಬೇರೆ ಭಾಷಾ ರಾಜ್ಯಗಳ ಸೇತುಬಂಧವಾಗಿ ಹಿಂದಿಯಂಥ ಭಾಷೆಯ ಜ್ಞಾನವೂ ನಮಗಿರಲಿ. ಆದರೆ ನಮ್ಮ ನಾಡಿನಲ್ಲಿ ನಮ್ಮ ಪರಿಸರದ, ಸಮುದಾಯದ ಭಾಷೆಯಾದ ಕನ್ನಡವೇ ನಮ್ಮ ಶಿಕ್ಷಣ ಕ್ರಮದ ಮೊದಲ ಹಂತಗಳಲ್ಲಿ ಬೋಧನಾ ಮಾಧ್ಯಮವಾಗಿರಬೇಕು.

ಒಂದು ಬಾಷೆಯನ್ನು 'ಮಾಧ್ಯಮ' ವಾಗಿ ಬಳಸುವುದನ್ನೂ, ಅದನ್ನು ಒಂದು 'ವಿಷಯ'ವನ್ನಾಗಿ ಕಲಿಯುವುದಕ್ಕೂ ಇರುವ ಸೂಕ್ಷ್ಮ ಅಂತರ ನಮ್ಮ ಬಹುತೇಕ ಸುಶಿಕ್ಷಿತರಿಗೆ ತಿಳಿಯದು. ಒಂದು ಬಾಷೆಯನ್ನು 'ವಿಷಯ'ವನ್ನಾಗಿ ಕಲಿತಾಗ ಮಾತ್ರ, ಮಾತಾಡುವ - ಓದುವ - ಬರೆಯುವ ಕೌಶಲ್ಯ (ಸ್ಕಿಲ್) ಗಳನ್ನು ಕರಗತ ಮಾಡಿಕೊಂಡಮೇಲೆ ಮಾತ್ರ, ಅದನ್ನು ಅನಂತರ 'ಮಾಧ್ಯಮ'ವನ್ನಾಗಿ ಬಳಸಿಕೊಂಡು ಇತರ ಜ್ಞಾನವನ್ನು ಸಂಪಾದಿಸಲಿಕ್ಕೂ, ಬೇರೆ ಭಾಷೆಗಳನ್ನು ಕಲಿಯಲಿಕ್ಕೂ ಸಾಧ್ಯ. ನಾಲ್ಕೈದು ವರ್ಷದ ಮಗು ಕಾನ್ವೆಂಟ್ ಸೇರುವ ಸಂದರ್ಭದಲ್ಲಿ ಅರೆ - ಬರೆ ಗೊತ್ತಿರುವ ಕನ್ನಡವನ್ನು ಹಿಂದಕ್ಕೆ ತಳ್ಳಿ, ಏಬಿಸಿಡಿ ಗೊತ್ತಿರದ ಇಂಗ್ಲಿಷನ್ನು ತಲೆಯ

ಮೇಲೆ ಹೇರುವುದರಿಂದ ಆ ಮಗುವಿನ ಮಾನಸಿಕ ಮತ್ತು ದೈಹಿಕ ದಣಿವನ್ನು ನಾವು ಸೂಕ್ಷ್ಮವಾಗಿ ಅರ್ಥಮಾಡಿಕೊಳ್ಳಬೇಕಾಗಿದೆ.

ಶಾಲಾ ಶಿಕ್ಷಣಾಧಿಕಾರಿಯೊಬ್ಬರು ನನಗೆ ಒಮ್ಮೆ ಹೇಳಿದ್ದರು. ತಪಾಸಣೆಗೆಂದು ಹೋದಾಗ ಕನ್ನಡ ಶಾಲೆಗಳ ಮಕ್ಕಳಲ್ಲಿ ತೋರುವ ಚಟುವಟಿಕೆ, ಲವಲವಿಕೆ, ಚುರುಕುತನ ಇಂಗ್ಲಿಷ್ ಮಾಧ್ಯಮದ ಅದೇ ವಯಸ್ಸಿನ ಮಕ್ಕಳಲ್ಲಿ ಕಾಣುವುದು ಅಸಾಧ್ಯ. ಆ ಎಳೆ ಮುಖಗಳಲ್ಲಿ ಸದಾ ಆತಂಕ ; ಮಿಸ್‌ಗಳ ಬೆದರಿಕೆಯ ಹೆದರಿಕೆ, ಹೋಂ ವರ್ಕಿನ ದುಃಸ್ವಪ್ನ, ಅದನ್ನೇ ಅದನ್ನೇ ಗೋಟು ಹೊಡೆಯಬೇಕಾದ ತಲೆನೋವು, ಮಮ್ಮಿ ಡ್ಯಾಡಿಗಳು ಹ್ಯಾಪಿ ಬರ್ತ್‌ಡೇ ಹಾಡುತ್ತ ಕೇಕು ಕತ್ತರಿಸಲು ಕೈಯಲ್ಲಿ ಹಿಡಿದ ಚಾಕುಗಳ ಇರಿತದ ನೆನಪು...

ನಮ್ಮ ಮಕ್ಕಳು ಇಂಥ ಬದುಕು ಬದುಕಬೇಕೆ ?

●

ನಿಮ್ಮ ಎಲ್ಲ ಬಗೆಯ ಆಫ್‌ಸೆಟ್ ಮುದ್ರಣ ಕೆಲಸಗಳಿಗಾಗಿ

ಚಂದನ ಮುದ್ರಣ

ವಿಚಾರಿಸಿರಿ

ಮಹಾಂತೇಶ ನಗರ, ಧಾರವಾಡ ೫೮೦ ೦೦೮

ಫೋನು : ೭೪೪೮೬೩ ಮತ್ತು ೮೬೮೬೪

C/o. ಸಂಕ್ರಮಣ ಪ್ರಕಾಶನ, ನಂ. ೧೮೯೪/೧, ೩೧ ನೇ ಕ್ರಾಸ್,

೨ ನೇ ಸ್ಟೇಜ್, ಬನಶಂಕರಿ, ಬೆಂಗಳೂರು ೫೬೦ ೦೭೦

ಫೋನು : ೬೭೧೧೫೨೩

ರಹಮತ ತರೀಕೆರೆ ಅವರ "ಕರ್ನಾಟಕದ ಸೂಫಿಗಳು"

ಗಣೇಶ್ ಕಿರಾಡಿ

ತಿಳುವಳಿಕೆಯ ಪರಿಪೇಕ್ಷ್ಯವನ್ನು ಕಟ್ಟಿಕೊಡುವ ಕೆಲಸದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಕಾರ್ಯನಿರತವಾಗಿದೆ. ಈ ಪ್ರಯತ್ನದಲ್ಲಿ ಅದು ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ ಎಂಬುದು ಬೇರೆ ಮಾತು. ಆದರೊಂದು ನಾಲ್ಕು ಕಾಲ ಉಳಿಯಬಲ್ಲ ಹತ್ತಾರು ಉತ್ತಮ ಕೃತಿಗಳನ್ನು ಅದು ಪ್ರಕಟಿಸಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಹಲವಾರು ಮಂದಿ ಸೇರಿ ಪಾಕ ಕೆಡಿಸಿದರೆಂಬಂತೆ 'ಶೈಲಿ ಕೈಪಿಡಿ' ಯಂಥ ಸಾಂಗತ್ಯವಿಲ್ಲದ ಪುಸ್ತಕಗಳನ್ನು ಅದು ಕನ್ನಡಿಗರ ಕೈಗಿತ್ತಿದೆ. ಯಾವುದು ಒಳ್ಳೆಯ ಪುಸ್ತಕ, ಯಾವುದು ಕೆಟ್ಟ ಪುಸ್ತಕ ಎಂಬುದನ್ನು ನಾನಿಲ್ಲಿ ಪಟ್ಟಿ ಮಾಡಹೊರಟಿಲ್ಲ. ನಾನು ಇತ್ತೀಚೆಗೆ ಓದಿದ , ನನಗೆ ಬಹಳ ಇಷ್ಟವಾದ, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ ಹಂಪಿ ಪ್ರಕಟಿಸಿದ, ಪ್ರತಿಭಾವಂತ ವಿಮರ್ಶಕ ಡಾ.ರಹಮತ್ ತರೀಕೆರೆ ಅವರ 'ಕರ್ನಾಟಕದ ಸೂಫಿಗಳು' ಕೃತಿಯ ಕಿರು ಸಮೀಕ್ಷೆಯ ಪ್ರಯತ್ನ ಈ ಲೇಖನ.

ಕರ್ನಾಟಕ ಸಂಸ್ಕೃತಿಗೆ ಸೂಫಿ ಸಂತರ ಕೊಡುಗೆಯೇನೆಂಬುದನ್ನು ಬಹುಮಟ್ಟಿಗೆ ಸಮಗ್ರವಾಗಿ ಕಟ್ಟಿಕೊಡುವ ಕಾರ್ಯವನ್ನು ರಹಮತ್ ತರೀಕೆರೆ ಅವರು ಇಲ್ಲಿ ಯಶಸ್ವಿಯಾಗಿ ಮಾಡಿದ್ದಾರೆ. ಕನ್ನಡದ ಸಂದರ್ಭದಲ್ಲಿ ಇದೊಂದು ಗಮನಾರ್ಹ ಕೃತಿ. ಸೂಫಿ ಸಂತರ ಚೂರೂಪಾರೂ ಚರಿತ್ರೆಯ ಬೆಳಕಿನಲ್ಲಿ ಲೇಖಕರು ಈ ಕೃತಿಯಲ್ಲಿ ನಡೆಸಿದ ಸಾಂಸ್ಕೃತಿಕ ಸಂವಾದಕ್ಕೆ ಸಾಂದರ್ಭಿಕ ಮಹತ್ವವಿದೆ. ಕನ್ನಡ ಸಂಸ್ಕೃತಿಯ ಶೋಧವಿಲ್ಲಿ ಹೊಸ ಆಯಾಮ ವನ್ನು ಪಡೆದುಕೊಂಡು ವಿನೂತನ ಮಾರ್ಗದಲ್ಲಿ ಕ್ರಮಿಸಿರುವುದು ಯಾರ ಗಮನಕ್ಕೂ ಬಾರದೇ ಹೋಗುದು. ಶಂಭಾ, ಕಪಟರಾಳ್ ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆದಾಗ್ಯೂ ಲೇಖಕರಲ್ಲಿ ತಮ್ಮದೇ ಆದ ಹಾದಿಯನ್ನು ಕಂಡುಕೊಂಡಿದ್ದಾರೆ. ಸೂಫಿ ಸಂತರ ಕೂಡುಗೆಯನ್ನು ಕಂಡುಕೊಂಡಿದ್ದಾರೆ. ಸೂಫಿಸಂತರ ಕೊಡುಗೆಯನ್ನು ತಿಳಿಹೇಳುವ ಕೃತಿಗಳು ಬೇರೆ ಬೇರೆ ಬಾರತೀಯ ಭಾಷೆಗಳಲ್ಲಿ ಈಗಾಲೇ ಬೆಳಕು ಕಂಡಿವೆ . ಸಾಂಸ್ಕೃತಿಕ ಸಂಶೋಧಕ ಸೇ.ತು. ಮಾಧವರಾವ್ ಪಗಡಿ ಅವರು ಮರಾಠಿಯಲ್ಲಿ ಸೂಫಿಗಳ ಕುರಿತು ಅನನ್ಯವಾದ ಕೃತಿಯನ್ನು ರಚಿಸಿದ್ದಾರೆ. ಕನ್ನಡದಲ್ಲಿ ಈ ಕೊರತೆಯನ್ನು ರಹಮತ್ ತರೀಕೆರೆ ಅವರು ನೀಗಿಸಿ ಕೊಟ್ಟಿದ್ದಾರೆ. ಆ ಮೂಲಕ ಕಾಲ ಕಾಲಕ್ಕೆ ವಿಶಾಲ ಕರ್ನಾಟಕದಲ್ಲಿ ನಡೆದ ಸಾಸ್ಕೃತಿಕ ಸಂಘರ್ಷದ ಕಥನವನ್ನು ಅವರು

ನಮ್ಮೆದರು ಬಿಚ್ಚಿಡುತ್ತಾ ಸಾಗಿದ್ದಾರೆ.

'ಸೂಫಿಸಂ' ಒಂದು ತತ್ವವಾಗಿದೆ. ಅದೊಂದು ಅನುಭಾವ ಪಂಥ. ಅದು ಇಸ್ಲಾಂ ಧರ್ಮ ಅಲ್ಲ. "ಶೂಫಿವಾದಕ್ಕೂ ಇಸ್ಲಾಮ್ ಧರ್ಮಕ್ಕೂ ಸಂಬಂಧ ಇಲ್ಲವೆಂತಲ್ಲ. ಇದೆ ಅದು ವಿಚಿತ್ರವಾಗಿದೆ. ಜಗತ್ತಿನ ಎಲ್ಲ ಕಡೆ ಮನುಭಾವಿ ಪಂಥಗಳಿರುವಂತೆ ಸೂಫಿ ಪಂಥವು ಮಧ್ಯ ಏಷ್ಯಾದ ಇಸ್ಲಾಮಿ ಜಗತ್ತಿನಲ್ಲಿ ರೂಪ ಪಡೆದ ಒಂದು ತತ್ವ" ಎಂಬುದನ್ನು ಲೇಖಕರು ಈ ಸಾಂಸ್ಕೃತಿ ಶೋಧದ ಶುರುವಿನಲ್ಲೇ ಸ್ಪಷ್ಟಪಡಿಸಿದ್ದಾರೆ. ಇಸ್ಲಾಮಿನ ಅನುಭಾವ ಶಾಖೆಗಿಂತ ಸೂಫಿವಾದ ತೀರಾ ಭಿನ್ನವಾದುದು. ಯಾವುದನ್ನು ಇಸ್ಲಾಂ ಎಂದು ಧರ್ಮ ಶಾಸ್ತ್ರಜ್ಞರು ಮಂಡಿಸುತ್ತಿದ್ದರೊ, ಆ ಪರಿಕಲ್ಪನೆಗೆ ಪರ್ಯಾಯವಾಗಿ ಚಿಂತಿಸುತ್ತ, ಬದುಕುತ್ತ ಬಂದವರು ಸೂಫಿ ಗಳು" ಎಂಬುದನ್ನು ಸೋದಾಹರಣವಾಗಿ ನಮಗೆ ಮನದಟ್ಟು ಮಾಡಿಕೊಡುವಲ್ಲಿ ಅವರು ಯಶಸ್ವಿಯಾಗಿದ್ದಾರೆ.

ಕರ್ನಾಟಕದ ಸೂಫಿಗಳು ಎದುರಿಸಿದ ನಾನಾರೀತಿಯ ಸಂಘರ್ಷ , ಸವಾಲುಗಳ ಕುರಿತೂ ಲೇಖಕರು ನಮ್ಮ ಗಮನವನ್ನು ಸೆಳೆಯುತ್ತಾರೆ. "ಕರ್ನಾಟಕದ ಸೂಫಿಗಳು ಈ ನಾಡಿನಲ್ಲಿ ಬರೀ ದೋಸ್ತಾರವನ್ನಷ್ಟೇ ಮಾಡಿಲ್ಲ. ಅನೇಕ ಗುದ್ದಾಟವನ್ನೂ ರಾಜಿಗಳನ್ನೂ ಮಾಡಿಕೊಂಡಿದ್ದಾರೆ. ಈ ಗೆಳೆತನ ಗುದ್ದಾಟಗಳ ಪರಿಯನ್ನು ಹುಡುಕುವುದು ತುಂಬ ಸ್ವಾರಸ್ಯಕರವಾದುದು. ಕರ್ನಾಟಕದ ಸೂಫಿ ಸಂತರ ಬಗ್ಗೆ ತಿಳಿಯುವುದು ಅಂದರೆ, ಅದು ಗತಕಾಲದ ಕಥನ ಮಾತ್ರವಲ್ಲ. ಈ ಹೊತ್ತಿನಲ್ಲಿ ಈ ನಾಡಿನ ಜನಸಮುದಾಯಗಳ ಕಥನ ಕೂಡಾ. ಯಾಕೆಂದರೆ, ಒಂದು ಕಾಲದಲ್ಲಿ ಜೀವಂತ ವ್ಯಕ್ತಿಗಳಾಗಿ ಬದುಕಿದ್ದ ಸೂಫಿಗಳು, ಈಗ ದೈವಗಳಾಗಿ ಬೇರೊಂದು ರೀತಿಯಲ್ಲಿ ಬದುಕಿದ್ದಾರೆ. ಇದೊಂದು ಬಗೆಯ ರೂಪಾಂತರ. ಈ ರೂಪಾಂತರಗಳ ಬೆನ್ನುಹತ್ತಿಹೋದರೆ, ಸೂಫಿ ಚರಿತ್ರೆಯ ಜತೆ ಜತೆಗೇ ಅವರನ್ನು ತಮ್ಮ ಮನದ ಕೊನೆಯಲ್ಲಿ ಬದುಕಗೊಟ್ಟಿರುವ ಜನಸಮುದಾಯಗಳ ಪಾಡಿನ ದರ್ಶನ ಮಾಡಿದಂತಾಗುತ್ತದೆ. ಜನರ ಆರ್ಥಿಕ ಸಾಮಾಜಿಕ ಪಾಡಷ್ಟೇ ಅಲ್ಲ. ಅವರ ಸಾಂಸ್ಕೃತಿಕ ಸೃಜನ ಶೀಲತೆ ಕೂಡಾ ಗೊತ್ತಾಗುತ್ತದೆಂಬುದನ್ನು" ಬಹಳ ಸಂಯಮದಿಂದ ತೋರಿಸಿಕೊಡುವ ಪ್ರಯತ್ನವನ್ನು ಈ ಕೃತಿಯಲ್ಲಿ ಲೇಖಕರು ಮಾಡಿದ್ದಾರೆ.

ಈ ಕೃತಿಯಲ್ಲಿ ಲೇಖಕರು ನಡೆಸುವ ಚಿಂತನಮಂಥನಗಳು ಬರೇ ಕರ್ನಾಟಕಕ್ಕೆ ಮಾತ್ರ ಸಂಬಂಧಪಟ್ಟದ್ದಲ್ಲ. ಅದು ಸೂಫಿವಾದದ ಮೂಲವನ್ನು ಶೋಧಿಸುವ ಹಂತದಲ್ಲಿ ಬಿಜಾಪುರದಿಂದ ಬಾಗ್ದಾದಿನತ್ತ ಮುಖಮಾಡುತ್ತದೆ. "ಹೇಗೆ ನೋಡಿದರೂ ಕರ್ನಾಟಕದ ಸೂಫಿಗಳ ಬೇರುಗಳು ಬಾಗ್ದಾದು ದೆಹಲಿಗಳಿಂದ ದೌಲತಾಬಾದು ಕರ್ನೂಲುಗಳ ತನಕ ಬೇರೆ ದೇಶ ರಾಜ್ಯಗಳಿಗೆ ಹೋಗಿ ಬಿಡುತ್ತವೆ. ಸೂಫಿಸಂ ಏಕಕಾಲಕ್ಕೆ ಜಾಗತಿಕವೂ ಪ್ರದೇಶಬದ್ಧವೂ ಆಗಿತ್ತು. ಆದ್ದರಿಂದ ಕರ್ನಾಟಕದ ಸೂಫಿಗಳು ಎಂದರೆ ಈಗಣ ಮಹಾರಾಷ್ಟ್ರ

, ಆಂಧ್ರಗಳಿಗೆ ಸೇರಿದ, ಸೊಲ್ಲಾಪುರ, ಅಕ್ಕಲಕೋಟೆ, ಕೌತಾಳ, ಹೊಸ್ಸೂರು, ಎಳ್ಳಾರತಿ, ಹೊಳಲುಗುಂದಿ ಮುಂತಾದ ಊರುಗಳಲ್ಲಿರುವ ಸೂಫಿಗಳು ಕೂಡ. ಈಗಲೂ ಇವರು ಸಾಂಸ್ಕೃತಿಕವಾಗಿ ಕರ್ನಾಟಕದವರಾಗಿಯೇ ಇದ್ದಾರೆ. ಇಲ್ಲಿ ಕನ್ನಡದ ಜತೆ ಉರ್ದು, ಮರಾಠಿ, ತೆಲುಗು ಭಾಷೆಗಳಿವೆ." ಎಂಬ ಸತ್ಯಾಂಶಗಳನ್ನು ಇಲ್ಲಿ ಲೇಖಕರು ಕಂಡುಕೊಂಡಿದ್ದಾರೆ. ಭಾಷೆಯ ಹೆಸರಲ್ಲಿ ಧರ್ಮದ ಕಾರಣದಿಂದ, ಗಡಿ ಸಮಸ್ಯೆಯ ನೆಪದಲ್ಲಿ ರಾಜಕಾರಣ ಸಾಮಾನ್ಯ ಜನರ ನೆಮ್ಮದಿ ಕೆಡಿಸಿದ್ದನ್ನು ಲೇಖಕರಿಲ್ಲಿ ತರಾಟೆಗೆತ್ತಿಕೊಳ್ಳುತ್ತಾರೆ. ಇವರಿಗೆ ಜನ ನೆಮ್ಮದಿಯಿಂದ ಸಾಮರಸ್ಯದಿಂದ ಬದುಕುವುದನ್ನು ಕಂಡು ಸಹಿಸಲಾಗುತ್ತಿಲ್ಲ. "ಸೂಫಿ ಸಂತರನ್ನು ಕುರಿತ ಮಿತ್‌ಗಳು, ಆಚರಣೆಗಳು ಸಮುದಾಯಗಳ ಆರ್ಥಿಕ ಸಾಮಾಜಿಕ ಧಾರ್ಮಿಕ ಬಾಳಿನಲ್ಲಿ ಸಹಜವಾಗಿ ಇರುವಂಥವು. ಉದಾರವಾದವು ಇದನ್ನು ಕೋಮು ಸಾಮರಸ್ಯದ ನಿದರ್ಶನಗಳಾಗಿ ಮಂಡಿಸುತ್ತದೆ. ಆದರೆ ಸಮುದಾಯಗಳಿಗೆ ಕೋಮುವಾದವೆಂಬ ರೋಗಕ್ಕೆ ಔಷಧಿಯಂತಿರುವ ಮೌಲ್ಯವನ್ನು ತಾವು ಬದುಕುತ್ತಿದ್ದೇವೆ ಎಂಬ ಅರಿವಿಲ್ಲ. ಹೀಗಿರುವ, ಈ ವಿವರಗಳನ್ನು ಸೆಕ್ಯುಲರ್ ರಾಜಕೀಯ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳುವುದರ ಔಚಿತ್ಯವೇನು? ಕೋಮುವಾದದ ಹಾಗೆ ಕೋಮು ಸಾಮರಸ್ಯವಾದ ಕೂಡ ಆಧುನಿಕ ರಾಜಕಾರಣದ ಭಾಗವಾಗಿರುವುದರಿಂದ ಈ ಸಮಸ್ಯೆ ಜಟಿಲವಾಗಿದೆ." ಎಂಬ ಲೇಖಕರ ಮಾತು ಅಕ್ಷರಸಹ ನಿಜವಾಗಿದೆ. ಈ ಸಮುದಾಯಗಳು ಕೋಮುಸಾಮರಸ್ಯವನ್ನು ಅರಿವಿಲ್ಲದೇ ಮೈಗೂಡಿಸಿಕೊಂಡು ಬಾಳುತ್ತಿವೆ ಎಂಬ ಶೋಧವೂ ನಮ್ಮ ದೃಷ್ಟಿಯನ್ನು ತಿದ್ದುವುದಕ್ಕೆ, ನಾವು ಕಟ್ಟಿಕೊಂಡಿರುವ ಪೂರ್ವಗ್ರಹಗಳನ್ನು ಮೂಲೆಗೊತ್ತಲು ಸಹಾಯಕಾರಿಯಾಗಿದೆ. ಅಧ್ಯಯನದ ಸಾರ್ಥಕತೆ ಇರುವುದು ಇಲ್ಲಿಯೇ ಎಂಬುದು ಗಮನೀಯ ಅಂಶ.

ಕರ್ನಾಟಕದ ಸೂಫಿಗಳು ಕೃತಿಯ ಮುಖ್ಯ ಕಾಳಜಿ ಇತಿಹಾಸದ ಪುನಾರಚನೆಯ ಕುರಿತಾದುದಲ್ಲ. ದಂತ ಕತೆಯಾಗಿರುವ, ಜನರ ನಂಬಿಕೆಯಿಂದ ಅವರ ಬದುಕಿನ ಅವಿಭಾಜ್ಯ ಅಂಗವಾಗಿರುವ ಸೂಫಿಗಳು ಕಾಲ ದೇಶ ಮತ ಪಂಥಗಳನ್ನು ಮೀರುತ್ತಾರೆ. ಆದ್ದರಿಂದಲೇ ಲೇಖಕರು ಸೂಫಿಸಂತರ ಚರಿತ್ರೆಯನ್ನು ಕಟ್ಟುವುದೆಂದರೆ "ಹುಟ್ಟಿಲ್ಲದ ದೋಣಿಯಲ್ಲಿ ಕುಳಿತು ಹರಿವ ನದಿಯಲ್ಲಿ ಪಯಣ ಹೊರಟಂತೆ, ಸೆಳವು ಬಂದತ್ತ ಹೋಗುವ ಆಕರ್ಷಣೆಯೂ ಇದೆ. ಬೇಕಾದ ಕಡೆ ಹೋಗಲಾಗದ ಸಮಸ್ಯೆಯೂ ಇದೆ. ವೇಷ ಮರೆಸಿಕೊಂಡು ಹಲವು ರೂಪಗಳಲ್ಲಿ ಸುಳಿದಾಡುವ ಚರಿತ್ರೆ, ಇಲ್ಲಿ ದೈವವಿದ್ದಂತೆ. ಇದೆ ಎಂದರೆ ಇದೆ. ಇಲ್ಲ ಎಂದರೆ ಇಲ್ಲ. ಇಲ್ಲಿ ಚರಿತ್ರೆ, ಪುರಾಣವಾಗಿ, ನಂಬಿಕೆಯಾಗಿ, ಆಚರಣೆಯಾಗಿ ಹೋಗಿರುತ್ತದೆ. ಮತ್ತು ನಿರಂತರವಾಗಿ ಬದಲಾಗುತ್ತಲೇ ಇರುತ್ತದೆ." ಎಂಬ ನಿರ್ಣಯಕ್ಕೆ ಬಂದಿದ್ದಾರೆ. "ಮೋಡಗಳಂತೆ ಬದಲಾಗುತ್ತಲೇ ಇರುವ ಈ ಮಿತ್‌ಗಳ ಮೂಲಕ ಸೂಫಿ ಸಂತರ ಅಧ್ಯಯನ ಮಾಡುವಾಗ ಖಚಿತತೆಯನ್ನು ಬೇಡುವ ಚರಿತ್ರೆಕಾರರು, ಅದರಲ್ಲಿಯೂ ಯುರೋಪಿನವರು ಪಡಬಾರದ ಪಾಡು ಪಡುತ್ತಾರೆ." ಈ ಅಧ್ಯಯನವನ್ನು ಆ ಪಾಡಿನಿಂದ ಮುಕ್ತಗೊಳಿಸುವ ಉದ್ದೇಶವೂ

ಈ ಅಧ್ಯಯನದಲ್ಲಿ ಎದ್ದು ಕಾಣುತ್ತದೆ. ನಮ್ಮ ದೇಶದ ಇತಿಹಾಸವನ್ನು ಕುರಿತು ಪರಕೀಯರು ಬರೆಯುವಾಗ ಅಲ್ಲಿ ಅನೇಕ ತೊಂದರೆಗಳು ಎದುರಾಗುವುದು ನಿಜ. ಆದರೆ ಶಾಸನ, ಗ್ರಂಥಸ್ಥ, ಸ್ಥಾವರ ದಾಖಲೆಗಳಿರುವಾಗಲೂ ಸೂಫಿಗಳ ಕುರಿತು ಖಚಿತತೆಯ ಹಾದಿಯನ್ನು ಬಿಟ್ಟು, ಐತಿಹ್ಯ, ಪುರಾಣ, ನಂಬಿಕೆ, ಆಚರಣೆಗೆ ಕಟ್ಟು ಬೀಳುವ ಲೇಖಕರ ಉದ್ದೇಶ ಸಹಜವಾಗಿಯೇ ವಿದ್ವಾಂಸವಲಯದಲ್ಲಿ ಗುಮಾನಿ ಹುಟ್ಟಿಸಬಹುದು. ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಬದುಕಿ ಬಾಳಿ ಜನಮನ್ನಣೆಗೆ ಪಾತ್ರರಾದ ಸೂಫಿಗಳು ಇಂದು ದೈವತ್ವಕ್ಕೇರಿರಬಹುದು. ಅವರು ಮಿಥ್‌ಗಳ ಪ್ರಪಂಚದಲ್ಲಿ ಸುತ್ತಾಡುತ್ತಿರಬಹುದು. ಅವರೂ ಈ ನೆಲದಲ್ಲಿ ಒಂದು ಕಾಲದಲ್ಲಿ ಸಾಮಾನ್ಯರಂತೆ ಅವರೂ ಜೀವನ ನಡೆಸಿದ್ದರಲ್ಲ. ನಿಜವಾಗಿ ಅವರು ಅಂದು ಎದುರಿಸಿದ ಸಂಘರ್ಷ ಸಾಧನೆಯ ಹಾದಿಯಲ್ಲಿ ಬಂದ ಕಷ್ಟ ನಷ್ಟಗಳು, ಇವೆಲ್ಲವನ್ನು ಅವರು ಗೆದ್ದು ನಿಂತ ಬಗೆ ಹೇಗೆ,? ಎಂಬ ಖಚಿತತೆಯ ಇನ್ನೊಂದು ಮುಖದತ್ತ ಲೇಖಕರು ದೃಷ್ಟಿ ಹರಿಸಿದ್ದರೆ ಇನ್ನಷ್ಟು ಅಧಿಕೃತವಾಗುತ್ತಿತ್ತೆನಿಸುತ್ತದೆ ಈ ಅಧ್ಯಯನ. ಇತಿಹಾಸದ ಮುಖಗಳನ್ನು ಬದಿಗೊತ್ತುತ್ತಲೇ ಲೇಖಕರು ಇಲ್ಲಿ ತಮ್ಮ ದೋಣಿಯನ್ನು ದಡದ ಕಡೆಗೆ ಮುಖಮಾಡುತ್ತಾರೆ. ಮಧ್ಯಕಾಲೀನ ಗೊಂದಲಮಯ ಅಸ್ಪಷ್ಟ ರಾಜಕೀಯ ಇತಿಹಾಸವೂ ಇದಕ್ಕೆ ಕಾರಣವಿರಬಹುದು. ಈ ಸಂದರ್ಭದಲ್ಲಿ ನಮಗೆ ಸೇತು ಮಾಧವರಾವ್ ಪಗಡಿ ಅವರು ತುಳಿದ ಹಾದಿ , ಅರ್ಥೈಸಿದ ರೀತಿ ಹೆಚ್ಚು ಅಧಿಕೃತವಾಗಿ ಕಾಣುತ್ತದೆ.

"ಸೂಫಿಗಳು ಯೋಗ ಸಾಧನೆ ಮಾಡಿಕೊಂಡು ದೃಢವಾದ ದೇಹವನ್ನು ಒಳ್ಳೆ ಆರೋಗ್ಯವನ್ನು ಇಟ್ಟುಕೊಂಡವರು. ಬಹಳ ವರ್ಷ ಬದುಕುತ್ತಿದ್ದವರು. ಚಾಂಗದೇವ, ಕಾಡಸಿದ್ಧ ಮುಂತಾದ ಯೋಗಿಗಳು ನೂರಾರು ವರ್ಷ ಬದುಕಿದ ಕತೆಗಳ ಅರ್ಥ ಇದೇ. ಆರೋಗ್ಯ ಹಾಗೂ ಆಯುಸ್ಸುಗಳಿಗೆ ಕಾರಣ ಅವರಿಗೆ ಗೊತ್ತಿದ್ದ ವೈದ್ಯ ಪದ್ಧತಿ. ಅವರ ಸಾವಿನಲ್ಲಿರುವ ದೊರೆಯ ಮಕ್ಕಳಿಗೆ ಹುಲಿಯ ಹಾಲಿನಿಂದ ಔಷಧಿ ಮಾಡಿಕೊಡುವ ಕತೆಗಳನ್ನಾಗಲಿ ಇತರೆ ರೋಗ ನಿವಾರಕ ಪವಾಡಗಳನ್ನಾಗಲಿ ಈ ಹಿನ್ನೆಲೆಯಲ್ಲಿ ಗಮನಿಸಬೇಕು" ಇಲ್ಲೆಲ್ಲ ಲೇಖಕರು ಕತೆಗಳ ಐತಿಹ್ಯಗಳ, ಪವಾಡಗಳ ಹಿಂದಿನ ಆಶಯವನ್ನು ಶೋಧಿಸುವುದರ ಕಡೆಗೆ ಹೆಚ್ಚು ಮುತುವರ್ಜಿ ವಹಿಸುತ್ತಾರೆ. ಜನಪರರಂಪರೆಯನ್ನು ಅರ್ಥಮಾಡಿಕೊಳ್ಳುವ ಅಧ್ಯಯನ ಇದಾದುದರಿಂದ ಲೇಖಕರು ಚರಿತ್ರೆಯನ್ನು ಬೆಳಕಾಗಿ ಬಳಸಿಕೊಂಡರೇ ವಿನಃ ಮುಖ್ಯ ಆಕರವನ್ನಾಗಿ ಅಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಸೂಫಿಗಳನ್ನು ಕರ್ನಾಟಕದ ಸೂಫಿಗಳು, ಮಹಾರಾಷ್ಟ್ರದ ಸೂಫಿಗಳು, ಅಥವಾ ಇನ್ನಾವುದೋ ರಾಜ್ಯದ ಸೀಮೆಯವರೆಂಬ ಹಣೆ ಪಟ್ಟಿ ಹಚ್ಚುವ ಕೆಲಸವೂ ಸರ್ವಥಾ ಸರಿಯಲ್ಲ. ಇದು ಕರ್ನಾಟಕ ಸಂಸ್ಕೃತಿ, ಇದು ಮರಾಠಿ ಸಂಸ್ಕೃತಿ, ಎಂದು ಗೆರೆ ಕೊರೆದು ಹಾಕಿದ್ದು ಸಂಶೋಧಕ ವರ್ಗವೇ. ಪ್ರಸ್ತುತ ಕೃತಿಯ ಅಧ್ಯಾಯ ಹನ್ನೊಂದು, ಸೂಫಿಗಳ ನಡುವಿದ್ದ ಬಹುಭಾಷೆಗಳಿಗೆ ಸಂಬಂಧಿಸಿದ್ದು.

"ಮೂಲತಃ ಸೂಫಿಗಳು ಪಾರಸಿಕರು. ಸೂಫಿ ಅನುಭಾವ ಸಾಹಿತ್ಯದ ಮಹಾಪರಂಪರೆ ಫಾರಸಿಯಲ್ಲಿದೆ. ಸೂಫಿಗಳು ಫಾರಸಿ ಆಡಳಿತ ಬಾಷೆಯುಳ್ಳ ಪ್ರಭುತ್ವಗಳ ಜತೆ ಬರುತ್ತಿದ್ದರು. ಹೀಗಾಗಿ ಫಾರಸಿ ಭಾರತೀಯ ಸೂಫಿಸಂನ ಅನಿವಾರ್ಯ ಅಂಗವಾಗಿತ್ತು. ಭಾರತದಲ್ಲಿ ಹುಟ್ಟಿದ ಸೂಫಿಗಳು ಸ್ಥಳೀಯ ಭಾಷೆಗಳನ್ನು ಅಭಿವ್ಯಕ್ತಿಗಾಗಿ ಬಳಸಿದಾಗಲೂ ಫಾರಸಿಯನ್ನು ಬಿಡಲಿಲ್ಲ. ಕರ್ನಾಟಕದ ಸೂಫಿಗಳು ದಖನಿ - ಮರಾಠಿ ಕನ್ನಡಗಳನ್ನು ಆಯ್ದುಕೊಂಡರೂ ಫಾರಸಿ ಬಲ್ಲವರಾಗಿದ್ದರು. ಮಹಿಪತಿದಾಸನು ಮರಾಠಿ ಹಾಗೂ ಕನ್ನಡಗಳಲ್ಲಿ ಬರೆದನು. ಆದರೆ ಆದಿಲಶಾಹಿ ಪ್ರಭುತ್ವದಲ್ಲಿದ್ದ ಆತನಿಗೆ ದಖನಿ - ಫಾರಸಿಗಳು ಗೊತ್ತಿದ್ದವು." ಹೀಗೆ ವಿಚಿತ್ರ ರೀತಿಯಲ್ಲಿ ಸೂಫಿಗಳು ಬಹು ಬಾಷಿಕ ವಾತಾವರಣಕ್ಕೆ ಕಾರಣವಾದ ಬಗೆಯನ್ನು ತೋರಿಸಿಕೊಟ್ಟಿದ್ದಾರೆ. ಭಾಷಾ ಸಮಾರಸ್ಯಕ್ಕೆ ಲೇಖಕರು ಕೊಡುವ ಒಂದು ಸಂದರ್ಭ ಇಲ್ಲಿ ಉಲ್ಲೇಖಿಸಲೇ ಬೇಕು. ಅದು ಗಾದಿಲಿಂಗನ ಜಾತ್ರೆಗೆ ಸಂಬಂಧಿಸಿದ್ದು. "ಗಾದಿಲಿಂಗನಿರುವ ಗೂಳ್ಯಂ ಹಳೇ ಬಳ್ಳಾರಿ ಸೀಮೆಯಲ್ಲಿದೆ. ಒಂದು ಮನೆಯ ಮುಂದೆ ಬಯಲು ಮಾಡಿಕೊಂಡವರು "ಗೊಗ್ಗಯ್ಯರಾಟ" ಪ್ರದರ್ಶಿಸಿದ್ದರು. ಮೈಲಾರನ ಕತೆಯನ್ನು ಗೊರವರು [illegible] ತೆಲುಗಿನಲ್ಲಿ ಮಾತನಾಡಿದರೆ, ಪಾರ್ವತಿ ಕನ್ನಡದಲ್ಲಿ ಉತ್ತರಿಸುತ್ತಿದ್ದಳು. ಅಲ್ಲಿ ಸೇರಿದ ಜನರಿಗೆ ಇದೇನು ಹೊಸತಾಗಿರಲಿಲ್ಲ. ಎರಡು ಬಾಷೆಗಳು ಬೆರೆಯುವುದು ಅರಿವಾಗದಷ್ಟು ಸಹಜ ಲಯದಲ್ಲಿ ಒಂದಾಗಿದ್ದವು." ಇದು ಅವರಿಗೆ ಸಹಜವಾದರೆ ಓದುವ ನಮಗೆ ಕಣ್ಣಾರೆ ಕಂಡ ಲೇಖಕರಿಗೆ ತುಸು ಅಚ್ಚರಿಯನ್ನುಂಟು ಮಾಡುತ್ತದೆ. ಮತ - ಮತಗಳ ನಡುವೆ, ಬಾಷೆ ಬಾಷೆಗಳ ಮಧ್ಯೆ ಸಹಜವಾದ ಕೊಳುಕೊಡೆಯಿತ್ತು. ಬಹು ಭಾಷಿಕತೆ, ಬಹುಸಾಂಸ್ಕೃತಿಕತೆ, ಅವುಗಳ ರೂಪಾಂತರ, ಕೊನೆಗೆ ಲೇಖಕರು ತಳೆಯುವ ನಿರ್ಧಾರ ಯಾರನ್ನೂ ಗಾಢವಾಗಿ ತಟ್ಟಬಲ್ಲದು.

ಇದೊಂದು ಬರೀ ಅಕೆಡೆಮಿಕ್ ಶಿಸ್ತಿಗೆ ಒಳಪಟ್ಟ ಅಧ್ಯಯನ ಗ್ರಂಥವಲ್ಲ. ಸೂಫಿ ಸಂತರ ನೆರಳಲ್ಲಿ ಇಲ್ಲಿ ನೆಲೆ ನಿಂತ ಸಂಸ್ಕೃತಿಯ ಅರ್ಥ ವಿವರಣೆಯೂ ಅಷ್ಟೇ ಸಮರ್ಥವಾಗಿ ಅಭಿವ್ಯಕ್ತವಾಗಿದೆ. ಆದ್ದರಿಂದಲೇ ಇದೊಂದು ಸಾಂಸ್ಕೃತಿಕ ಸಂವಾದ ಎಂದು ನಾನು ಆರಂಭದಲ್ಲೇ ಕರೆದದ್ದು. ಬಹುಭಾಷಿಕ ನೆಲೆಯ ಕುರಿತಾದ ಚರ್ಚೆ ಮುಕ್ತಾಯವಾಗುವುದು ಹೀಗೆ, ಈ ಸಮಾಜದ ಸ್ವರೂಪಕ್ಕೂ ಇದರ ಬಹುಭಾಷಿಕತೆಗೂ ನೇರ ಸಂಬಂಧವಿದೆ. ಬಹುಭಾಷಿಕತೆ ಯಾವತ್ತೂ ಬಹುಧರ್ಮೀಯತೆಗೆ ಸೆಳೆದುಕೊಂಡು ಹೋಗುವಂಥದ್ದು. ಶಂಕೆಯಿಂದರೆ, ಸಡಿಲ ರಚನೆಯ ಈ ಸಮನ್ವಯಕಾರಿ ಪಂಥಕ್ಕೆ "ಆಕ್ರಮಣಕಾರಿ ನೆಲೆಯ ಏಕರೂಪೀ ಸನಾತನವಾದವನ್ನು ಎದುರಿಸುವ ದೃಢತೆ ಇದೆಯೇ ? ಸಮುದಾಯಗಳ ಒಳಗೆ ತನ್ನನ್ನು ಚೆಲ್ಲಿಕೊಳ್ಳದ ಯಾವ ಬಹುರೂಪಿ ರಚನೆಗಳೂ ಈಗ ಉಳಿಯುವುದು ಕಷ್ಟವಾಗಿದೆ." ಎಂಬ ವಾಸ್ತವ ಸತ್ಯವನ್ನು ಬಹಿರಂಗಪಡಿಸಿದ್ದಾರೆ.

ನಮ್ಮ ಇತಿಹಾಸವನ್ನು ಬರೆಯುವ ನೆಪದಲ್ಲಿ ವಿದೇಶಿ ವಿದ್ವಾಂಸರು, ನಮ್ಮ ನಡುವೆ ಗೋಡೆಗಳನ್ನು ಬಿತ್ತಿ ಬೆಳೆದರು. ಈ ನಿಟ್ಟಿನಲ್ಲೂ ಲೇಖಕರ ಚಿಂತನೆ ಮುಂದೋಡುತ್ತದೆ. "ಸೂಫಿ ಪಂಥವನ್ನು ಅನುಭಾವಿ ಪಂಥವಾಗಿ ನೋಡುವ ಬದಲು ಒಂದು ಪರಕೀಯ ಮ್ಲೇಚ್ಛ ಧರ್ಮವನ್ನಾಗಿ ನೋಡಿರುವ ದೃಷ್ಟಿಕೋನಗಳು ಕನ್ನಡದಲ್ಲಿವೆ. ಆಶ್ಚರ್ಯವೆಂದರೆ, ೧೭ ನೇ ಶತಮಾನದಲ್ಲಿ ಗೋವಿಂದ ವೈದ್ಯ ತಾಳಿದ ಮನೋಭಾವವು ಈ ಶತಮಾನದ ಆಲೂರು ವೆಂಕಟರಾವ್, , ಗಳಗನಾಥ, ಚಿದಾನಂದಮೂರ್ತಿಯವರಲ್ಲಿ ಮುಂದುವರಿದಿರುವುದು. ವಸಾಹತುಶಾಹಿ ಚರಿತ್ರೆಯ ಆಕರಗಳಿಂದ ಹುಟ್ಟಿದ ಇಂಥ ಮನೋಭಾವಗಳಿಗೆ ಈ ನಾಡಿನಲ್ಲಿ ಬಂದೇನವಾಜ, ತಿಂತಿಣಿಮೋನಪ್ಪ, ಇದ್ದರು ಎಂಬ ಅರಿವು ಹತ್ತಿರ ಸುಳಿಯಲೇ ಇಲ್ಲವೆನಿಸುತ್ತದೆ." ಎಂಬ ಮಾತುಗಳಲ್ಲಿ ಸತ್ಯವಿದೆ. ಇದು ಬರೇ ಗಳಗನಾಥ, ಆಲೂರ ಅಥವಾ ಇನ್ನೊಂದಿಬ್ಬರಿಗೆ ಮಾತ್ರ ಸಂಬಂಧಿಸಿದ್ದಲ್ಲ. ವಸಾಹತು ಶಾಹಿ ಚರಿತ್ರೆಯನ್ನು ಯಥಾವತ್ತಾಗಿ ಬೋಧಿಸುವ ನಮ್ಮ ಶೈಕ್ಷಣಿಕ ವ್ಯವಸ್ಥೆ , ಬುದ್ಧಿ ಜೀವಿಗಳೆನಿಸಿಕೊಂಡ ಎಲ್ಲರೂ ಇದಕ್ಕೆ ಕಾರಣರಾಗಿದ್ದಾರೆ.

ಸಾಹಿತ್ಯವನ್ನು ಮತೀಯ ಹಿನ್ನೆಲೆಯಲ್ಲಿ ನೋಡುವ ಕವಿಗಳನ್ನು ಜಾತಿ ಹಿನ್ನೆಲೆಯಲ್ಲಿ ವರ್ಗೀಕರಿಸುವ , ಧರ್ಮ ಎಂದ ತಕ್ಷಣ ಯಾವುದೋ ಒಂದು ಮತವನ್ನು ನೆನಪಿಸಿಕೊಳ್ಳುವ ಮನಸ್ಸುಗಳು ಇಂದು ಜಾಸ್ತಿಯಾಗಿವೆ. . ಈ ಪ್ರವೃತ್ತಿ ಸ್ವಾತಂತ್ರ್ಯ ಪೂರ್ವಕ್ಕಿಂತ ಮಿಗಿಲಾಗಿ ಸ್ವಾತಂತ್ರ್ಯೋತ್ತರದ ಕಾಲದಲ್ಲಿ, ಅದರಲ್ಲೂ ಇತ್ತೀಚೆಗೆ ಬಿರುಸಾಗಿ ನಡೆದಿದೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಬಂದೇನವಾಜ, ತಿಂತಿಣಿ ಮೋನಪ್ಪ ಮೊದಲಾದವರ ಹೆಸರೇ ಕೇಳದ ಇತಿಹಾಸಕಾರರು, ಸಂಶೋಧಕರು ಇದ್ದಾರೆಂದು ಹೇಳಲು ಹಿಂದೆ ಮುಂದೆ ನೋಡಬೇಕಾದ ಅಗತ್ಯವಿಲ್ಲ. ತಿಂತಿಣಿ ಮೋನಪ್ಪ, ಬಂದೇನವಾಜ ಮೊದಲಾದವರನ್ನು ನಮ್ಮ ನಾಡಿನ ಸಾಮಾನ್ಯ ಜನ ಬಲ್ಲರು. ಇತಿಹಾಸಕ್ಕೆ ಇತಿಹಾಸಕಾರರಿಗೆ, ಸೆಕ್ಯೂಲರ್ ವಾದವನ್ನು ಸಾರಿಸುವ ಸರಕಾರಕ್ಕೆ ಇಂಥವರಿದ್ದರೆಂಬುದೂ ತಿಳಿದಿಲ್ಲ. ಬಹುಶಃ ಇಂಥ ಅಧ್ಯಯನಗಳ ಜರೂರಿರುವುದು ಮನಸುಗಳ ಮಧ್ಯೆ ಎದ್ದು ನಿಂತಿರುವ ಗೋಡೆಗಳನ್ನು ನೆಲಸಮ ಮಾಡುವುದಕ್ಕೆ, ವೃಷ್ಟಿ ತಿದ್ದುವುದಕ್ಕೆ ಎಂಬ ಮಾತು ಅತಿಶಯೋಕ್ತಿಯಾಗಲಾರದು.

ಸಾಂಸ್ಕೃತಿಕ ಸೃಜನಶೀಲತೆಯ ಕುರಿತೂ ಲೇಖಕರು ಮತ್ತೆ ಮತ್ತೆ ಶೋಧದಲ್ಲಿ ತೊಡಗುತ್ತಾರೆ. ಅಲ್ಲದೇ ಸೂಫಿ ಸಂತರಲ್ಲಿ ಕಂಡುಬರುವ ವ್ಯಕ್ತವಾಗುವ ಸಂದರ್ಭ ಸನ್ನಿವೇಶಗಳತ್ತಲೂ ನಮ್ಮನ್ನು ಕರೆದೊಯ್ಯುತ್ತಾರೆ. " ೧೮, ೧೯ ನೇ ಶತಮಾನಗಳ ಈ ದಖನಿ ಕನ್ನಡ ಅವಧೂತರಿಗೆ ಸೂಫಿ ಪರಂಪರೆಗಿಂದ ನಾಥ ಸಿದ್ಧ ಪರಂಪರೆಯ ಸಂಬಂಧಗಳು ಘನಿಷ್ಠವಾದವು. ಆದರೆ ಇಸ್ಲಾಮ್ ಧರ್ಮದ ಆಚರಣೆ ಪುರಾಣಗಳ ಮೂಲಕವೇ ಈ ಸಂಬಂಧಗಳು ಹಾಯುತ್ತಿದ್ದವು. ಲಾ ಇಲಾಹ ಇಲ್ಲಲ್ಲಾಹ (ದೇವರೊಬ್ಬನೇ ಬೇರೆ ದೇವರಿಲ್ಲ) ಎಂಬ ಇಸ್ಲಾಮಿನ ಮೂಲ ಮಂತ್ರವನ್ನು ಹಸನಸಾಬನು ಅಲ್ಲಲ್ಲಾ ಇಲ್ಲಿಲ್ಲಾ ಶಿವನಲ್ಲಿಲ್ಲ."

ಶಿವನೆಲ್ಲಿಲ್ಲಾ ಎಂದು ಮುರಿದು ಕಟ್ಟುವುದನ್ನು ಗಮನನಿಸಬೇಕು. ಶಿಶುನಾಳನಲ್ಲಿ ಇಸ್ಲಾಮಿ ಪುರಾಣದ ನೆನಪು ತುಂಬ ದಟ್ಟವಾಗಿ ಬರುತ್ತದೆ. ರಾಮಾಯಣ, ಅದರಲ್ಲಿಯೂ ಮೊಹರಂ ಪುರಾಣದ ಮಹಾಭಾರತಗಳ ಮಿತ್‌ಗಳೊಂದಿಗೆ ಇಸ್ಲಾಮಿ ಪುರಾಣವನ್ನು ಸಲೀಸಾಗಿ ಕಲಸುತ್ತಾ ಬೆಡಗಿನ ರೂಪಕಗಳನ್ನು ನಿರ್ಮಿಸುವ ಶಿಶುನಾಳನ ಕೌಶಲ ಕರ್ನಾಟಕ ಸಂಸ್ಕೃತಿಯ ವಿಸ್ಮಯಗಳಲ್ಲಿ ಒಂದು. ಹಲವು ಪರಂಪರೆಗಳ ಜತೆ ಗುದ್ದಾಡಿ ಬಾಷೆಯನ್ನು ತತ್ವವನ್ನು, ಪುರಾಣ ರೂಪಕವನ್ನು ಪಡೆದು ಕೊಳ್ಳುವುದು. ಅರ್ಥಪೂರ್ಣವಾದ ಸಾಂಸ್ಕೃತಿಕ ಸೃಜನಶೀಲತೆ" ಎಂಬ ನಿಲುವಿಗೆ ತಂದು ನಮ್ಮನ್ನು ನಿಲ್ಲಿಸುತ್ತಾರೆ. ಕೆಲವು ಕಡೆ ಪ್ರಶ್ನೆ ಉಪ ಪ್ರಶ್ನೆಗಳ ನೆತ್ತಿ ಉತ್ತರ ಕಂಡುಕೊಳ್ಳಲು ನಮ್ಮನ್ನೇ ತೊಡಗಿಸುತ್ತಾರೆ. ಮತ್ತೆ ಅಲ್ಲಲ್ಲಿ ಯಥಾಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾರೆ. ಒಂದೆರಡು ಕಡೆ ಹಾಗಾಗಬಾರದಿತ್ತು. ಹೀಗೆ ಮಾಡುವುದು ಸರಿಯಲ್ಲವೆ ? ಎಂಬ ಸಮಕಾಲೀನ ವಿದ್ಯಮಾನಗಳ ಬಗೆಗೆ ಪ್ರತಿಭಟನೆಯೂ ನೇರವಾಗಿ ಮೂಡಿ ಬಂದಿದೆ. ಅಲ್ಲಿ ಖಿನ್ನತೆಯಿದೆ; ಹೀಗಾಗುತ್ತಿದೆಯಲ್ಲಾ ಎಂಬ ಬೇಸರವೂ ವ್ಯಕ್ತವಾಗಿದೆ. ಉದಾಹರಣೆಗೆ ಈ ಕೆಳಗಿನ ಸಾಲುಗಳನ್ನು ಗಮನಿಸಬಹುದು.

"ಶಿಶುನಾಳನು ಕಳೆದ ಹತ್ತುವರ್ಷಗಳಿಂದ ಕನ್ನಡ ಸಾಹಿತ್ಯ , ಸಂಸ್ಕೃತಿಗಳ ಚರ್ಚೆಯಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತಿದ್ದಾನೆ. ಸಿನಿಮಾ, ಕ್ಯಾಸೆಟ್ಟು, ಪುಸ್ತಕಗಳ ಮೂಲಕ ಶಿಶುನಾಳ ಕರ್ನಾಟಕದ ಶೈಕ್ಷಣಿಕ ವಲಯಕ್ಕೆ ಈಗೀಗ ಪರಿಚಿತವಾಗಿರಬಹುದು. ಆದರೆ ಆವನು ಮೂಲತಃ ಗದುಗು ಸೀಮೆಯ ಜನಸಮುದಾಯದಲ್ಲಿ ಬೆರೆತು ಹೋಗಿರುವನು. ಸಮಸ್ಯೆ ಎಂದರೆ "ಮುಸ್ಲಿಮ"ನಾಗಿ ಗೋವಿಂದಭಟ್ಟನಂಥ "ಹಿಂದು" ಗುರುವನ್ನು ಪಡೆದು, ಕನ್ನಡದಲ್ಲಿ ಪದರಚನೆ ಮಾಡಿರುವ ಸಂಗತಿಯು ಸಾಮರಸ್ಯವಾದಿಗಳ ಪಾಲಿಗೆ ಸಲೀಸಾಗಿ ಒದಗಿರುವ ನಿದರ್ಶನವಾಗಿರುವುದು. ಸಂಸ್ಕೃತಿಯ ಸೂಕ್ಷ್ಮಗಳಿರುವ ಸಂಗತಿಯೊಂದು, ಧಾರ್ಮಿಕ ಸಾಮರಸ್ಯಕ್ಕೆ ಬೇಡಿಕೆಯಿರುವ ಈ ದಿನಗಳಲ್ಲಿ, ಮಾರಾಟದ ಸರಕಾಗುವುದಕ್ಕೆ, ಶಿಶುನಾಳನ ಬಳಕೆಯೇ ಸಾಕ್ಷಿ. ಸಾಂಸ್ಕೃತಿಕ ಸೂಕ್ಷ್ಮಸಂಗತಿಯೊಂದು ಮಾರಾಟಕ್ಕೆ ಬಳಕೆಯಾಗುತ್ತಿರುವುದರ ಕುರಿತು ಲೇಖಕರು ವ್ಯಕ್ತಪಡಿಸಿರುವ ಖೇದ ಒಂದು ಹಂತದವರೆಗೆ ನಿಜವಾದರೂ ಇದಕ್ಕೆ ಇನ್ನೊಂದು ಮುಖವಿದೆ ಎಂಬುದನ್ನು ನಾವು ಕಂಡುಕೊಳ್ಳಬೇಕಾಗುತ್ತದೆ. ಶರೀಫ ಬರೇ ರ ತ್ರ ತ್ರಿ] d ? ಸೂಫಿಗಳನ್ನು ಸಂತರನ್ನು ಯಾವುದೋ ಒಂದು ಪ್ರಾಂತಕ್ಕೆ ಯಾಕೆ ಕಟ್ಟಿಹಾಕಬೇಕು? ಇಂಥವರೂ ನಮ್ಮ ನಡುವೆ ಆಗಿಹೋಗಿದ್ದರೆಂಬ ಅರಿವಿಲ್ಲದೇ ಹೋದರೆ ಭಾವೀ ಜನಾಂಗ ವಸ್ತುಸ್ಥಿತಿಯೇ ನಂಬುದುರ ಗೊಡವೆ ಇಲ್ಲದ ಪ್ರಕೃತ ಇತಿಹಾಸವನ್ನು ಓದಿ ಗೋವಿಂದ ವೈದ್ಯನಂಥ ಮನೋಭಾವವನ್ನು ತಾಳುವ ಸಾಧ್ಯತೆಗಳಿವೆಯಲ್ಲವೇ.? ಇವತ್ತು ಷರೀಫ, ನಾಳೆ ಸೂಫಿಗಳು, ನಾಡಿದ್ದು ತುರ್ತಾಗಿ ಬೇಕಾಗುವ ಮತ್ತಾರೋ ಮಾರಾಟಕ್ಕೆ ವಸ್ತುಗಳಾದರೆ ಅದರಲ್ಲೇನು ಆಶ್ಚರ್ಯವಿಲ್ಲ. ಇದಕ್ಕೆಲ್ಲ ಕಾರಣ ನಮ್ಮ ರಾಜಕಾರಣಗಳು ಮಾಡಿರುವ ನೈತಿಕ ದಿವಾಳಿತನವೇ ಆಗಿದೆ. ಯಾವುದನ್ನೂ ನಾವು

ಗಂಭೀರವಾಗಿ ಪರಿಗಣಿಸದೇ, ಸ್ಪಂದಿಸದೇ ನಿರ್ಲಕ್ಷ್ಯದಿಂದಿರುವಾಗ ಸಾಂಸ್ಕೃತಿಕ ಸಂವೇದನೆ ಎಂಬ ಪರಿಕಲ್ಪನೆಯೂ ಸಹ ಅರ್ಥವನ್ನು ಕಳೆದುಕೊಳ್ಳುತ್ತದೆ. "ಬಹಳಷ್ಟು ಅಧ್ಯಯನ ಸಂಶೋಧನೆಗಳು ಶೈಕ್ಷಣಿಕ ಅವಶ್ಯಕತೆಯಿಂದ ಹುಟ್ಟಿದವು. ಅವಕ್ಕೆ ಸಾಂಸ್ಕೃತಿ ತುರ್ತುಗಳಿಲ್ಲ." ಎಂಬ ಲೇಖಕರ ಮಾತಿನಲ್ಲಿ ನಿಜಾಂಶವಿದೆ. ಈ ಕುರಿತು ನಾವೆಲ್ಲ ಗಂಭೀರವಾಗಿ ಯೋಚಿಸಬೇಕಾದ ಅಗತ್ಯವಿದೆ.

"ಕರ್ನಾಟಕದ ಸೂಫಿಗಳು" ಕೃತಿ ಶೈಕ್ಷಣಿಕ ಅವಶ್ಯಕತೆಯಿಂದ ಕಣ್ಣು ಬಿಟ್ಟ ಕೂಸಲ್ಲ. ಅನೂಚಾನವಾಗಿ ಸಾಗಿ ಬಂದ ವಸಾಹತುಶಾಹಿ ಚಿಂತನಕ್ರಮಕ್ಕಿಂತ, ಭಿನ್ನವಾಗಿ ಯೋಚಿಸುವ, ಕಾಣುವ, ಮುಗ್ಧತೆ, ಕುತೂಹಲ, ಸಾಧ್ಯಾಸಾಧ್ಯತೆ, ಕಳಕಳಿ, ಚಿಕಿತ್ಸಕ ದೃಷ್ಟಿಕೋನ, ಸ್ಪಷ್ಟತೆ ಮೊದಲಾದ ಅಂಶಗಳನ್ನು ಒಳಗೊಂಡ ಅನನ್ಯ ಸಾಂಸ್ಕೃತಿಕ ಹೊಣೆಗಾರಿಕೆಯನ್ನು ಬಿಂಬಿಸುವ ಕೃತಿಯಿದು. ಇತಿಹಾಸಕಾರರು ಬರೆದ ಚರಿತ್ರೆಗಿಂತ ಜನಸಮುದಾಯಗಳು ಕಟ್ಟಿಕೊಟ್ಟ, ತಲತಲಾಂತರದಿಂದ ಅವರು ಹೊತ್ತು ತಂದ ಚರಿತ್ರೆ ಇಲ್ಲಿ ದಾಖಲಾಗಿದೆ. ಸಾಂಸ್ಕೃತಿಕ ನಿಜಾಂಶವನ್ನು ಕಂಡುಕೊಳ್ಳಲು ಹಪಹಪಿಸುವ ಲೇಖಕರ ಶ್ರದ್ಧೆ ಶ್ರಮ ಸಾರ್ಥಕವಾಗಿದೆ. ಇಲ್ಲಿರುವುದು ಬರೇ ಸಮಕಾಲೀನ ಸಮುದಾಯಗಳ ಸೃಜನಶೀಲ ಹುಡುಕಾಟ ಮಾತ್ರವಲ್ಲ, ಸಾಂಗತ್ಯ ವಿರುವ ಸೃಜನಶೀಲ ಅಧ್ಯಯನವೂ ಅರ್ಥಪೂರ್ಣವಾಗಿ ಪಡಿಮೂಡಿದೆ. ಇಂದು ನಿಜವಾಗಿ ನಡೆಯಬೇಕಾದ ಅಧ್ಯಯನಕ್ಕೊಂದು ಮಾರ್ಗವನ್ನು ಲೇಖಕರಿಲ್ಲಿ ಹಾಕಿಕೊಟ್ಟಿದ್ದಾರೆ.

ಈ ಸಂಚಿಕೆಯ ಲೇಖಕರು ಮತ್ತು ವಿಳಾಸಗಳು

ಗಣೇಶ ಕಿರಾಡಿ ಡಿ.೧೨, ಅಕೆಡೆಮಿಕ್ ಸ್ಟಾಫ್ ಕ್ವಾರ್ಟರ್ಸ್, ಕಲಿನಾ ಕ್ಯಾಂಪಸ್, ವಿದ್ಯಾನಗರಿ ಮುಂಬಯಿ ೪೦೦೦೯೮

ಡಾ. ಡಿ.ಬಿ.ರಾಮಚಂದ್ರಾಚಾರ್ ಪ್ರಾಂಶುಪಾಲರು, ಕಾವೇರಿ ಮಹಿಳಾ ಕಾಲೇಜು, ವಿರಾಜಪೇಟೆ ೫೭೧೨೧೮

ಡಾ. ಶೈಲಜಾ ಇಂ. ಹಿರೇಮಠ ಅಧ್ಯಾಪಕರು, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿ.ವಿ., ಹಂಪಿ, ವಿದ್ಯಾರಣ್ಯ, ಕಮಲಾಪೂರ ೫೮೩೨೨೧

ಡಾ. ಎಂ.ಪ್ರಭಾಕರ ಜೋಶಿ ಪ್ರಾಧ್ಯಾಪಕ, ಬೆಸೆಂಟ್ ಪದವಿಪೂರ್ವಕಾಲೇಜು, ಮಂಗಳೂರು ೫೭೫೦೦೩

ಡಾ.ಎಸ್.ವಿ.ಪ್ರಭಾವತಿ ಕನ್ನಡ ಪ್ರಾಧ್ಯಾಪಕಿ, ಬಿ.ಎಸ್.ವಿ.ಪಿ.ಕಾಲೇಜು, ವಿಜಯನಗರ, ಬೆಂಗಳೂರು ೫೬೦೦೪೦

ಪ್ರಭುಗೌಡ ಪಾಟೀಲ ಆಂಗ್ಲ ಉಪನ್ಯಾಸಕರು, ದೇವರಹಿಪ್ಪರಗಿ ೫೮೬೧೧೮ (ಬಿಜಾಪೂರ),

ಮಾಧವಿ ಭಂಡಾರಿ :ಮಂದಾರ, ಎ.ವಿ.ಭಟ್ಟರ ಕಂಪೌಂಡು, ೭೬, ಬಡಗುಬೆಟ್ಟು, ಬೈಲೂರು, ಉಡುಪಿ ೫೭೬೧೦೧

ಅನಿತಾ ಕೊಟ್ರೇಶ್ ಉಪನ್ಯಾಸಕರು, ಕನ್ನಡ ವಿಭಾಗ - ಶ್ರೀ ವೆಂಕಟೇಶ್ವರ ಪ್ರಥಮ ದರ್ಜೆ ಕಾಲೇಜು,ಚಿತ್ರದುರ್ಗ ೫೭೭೫೦೧

ವಿಷ್ಣುನಾಯ್ಕ ಶ್ರೀ ರಾಘವೇಂದ್ರ ಪ್ರಕಾಶನ, ಅಂಬಾರಕೊಡ್ಲ, ಅಂಕೋಲಾ (ಉ.ಕ.)

ಮೀನಾ ಸದಾಶಿವ ಸಂಕ್ರಮಣ ಪ್ರಕಾಶನ, ೧೮೯೪/೧, ೩೧ನೇ ಕ್ರಾಸ್, ೨ ನೇ ಹಂತ ಬನಶಂಕರಿ, ಬೆಂಗಳೂರು. ೫೬೦೦೭೦

ಜಿ.ಕೆ.ರವೀಂದ್ರಕುಮಾರ ಕಾರ್ಯಕ್ರಮ ನಿರ್ವಾಹಕ, ಆಕಾಶವಾಣಿ, ಕಾರವಾರ ೫೮೧೩೦೧

ಎಚ್.ವಿ.ವೆಂಕಟಸುಬ್ಬಯ್ಯ ' ನೈಮಿಶ ' ೬೭ ಈಸ್ಟ್‌ಪಾರ್ಕ್‌ರೋಡ್, ೧೪ನೇ ಕ್ರಾಸ್ ಮಲ್ಲೇಶ್ವರಂ, ಬೆಂಗಳೂರು ೫೬೦೦೦೩

ಡಿ.ಬಿ.ರಜಿಯಾ. ಎಲ್.೩೬.ಕೆ.ಆರ್.ಇ.ಸಿ. ಆವರಣ, ಶ್ರೀನಿವಾಸ ನಗರ, ಸುರತ್ಕಲ್ (ದ.ಕ.) ೫೭೪೧೫೭.

ಡಾ. ಗುಂಡಣ್ಣ ಕಲಬುರ್ಗಿ ಕನ್ನಡ ವಿಭಾಗ, ಕಲೆ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಮೂಡಲಗಿ (ಜಿ. ಬೆಳಗಾವಿ.) ೫೯೧೩೧೨

ಏಪ್ರಿಲ್ ೧೯೯೯ ರ ಸಂಚಿಕೆಯಲ್ಲಿ ಬಿಟ್ಟುಹೋದ ವಿಳಾಸಗಳು

ಬಾನಂದೂರು ಕೆಂಪಯ್ಯ ಸಹಾಯಕ ಕೇಂದ್ರ ನಿರ್ದೇಶಕ, ದೂರದರ್ಶನ ಕೇಂದ್ರ, ತಿರುವನಂತಪುರ ೪೩ (ಕೇರಳ ರಾಜ್ಯ)

ಉದಯಕುಮಾರ ಹಬ್ಬು ಸಂಚಾಲಕರು , ಅನಂತಪ್ರತಿಭಾ ಪ್ರಕಾಶನ, ವಿ.ವಿ.ಪ.ಪೂ.ಕಾಲೇಜು, ಮುಂಡ್ಕೂರು (ದ.ಕ.) ೫೭೬೧೨೧

ಸದ್ಯ ಲಭ್ಯವಿರುವ ಪ್ರಕಟನೆಗಳು

(ಚಂದಾದಾರರಿಗೆ ಶೇಕಡಾ ೧೦ ರಿಯಾಯತಿ)

೧. ಹನಿ ಹನಿ : ಸಂಪಾದಕಿ - ಡಾ. ಕಮಲಾ ಹೆಮ್ಮಿಗೆ
(ಕನ್ನಡದ ನಲವತ್ತು ಕವಿಗಳ ಸುಮಾರು ೫೦೦ ಹನಿಗವನಗಳ ಸಂಕಲನ ೬೦-೦೦

೨. ಹನ್ನೊಂದು ಚಂಪಾ ನಾಟಕಗಳು -
(ಕೊಡೆಗಳು, ಅಪ್ಪ, ಗುರ್ತಿನವರು, ಕುಂಟಾಕುಂಟಾ ಕುರವತ್ತಿ, ಟಿಂಗರ ಬುಡಣ್ಣ, ಕತ್ತಲ ರಾತ್ರಿ, ಗೋಕರ್ಣದ ಗೌಡಶಾನಿ ಮತ್ತು ಐದು ಬಿಡಿ ನಾಟಕಗಳು.) ೭೫-೦೦

೩. ಬೇಂದ್ರೆ : ನಾನು ಕಂಡಂತೆ ನನಗೆ ಕಂಡಷ್ಟು- ಚಂಪಾ ೧೦-೦೦

೪. ಕುವೆಂಪು ಸಾಹಿತ್ಯ : ಒಂದು ಮರು ಅಧ್ಯಯನ ಸಂ. : ಆರ್ಕೆ ಮತ್ತಿತರರು ೨೦-೦೦

೫. ಗುಂಡಮ್ಮನ ಹಾಡು (ಗೇಯ ಕವನಗಳು)- ಚಂಪಾ ೨೨-೦೦

೬. ನನ್ನೊಳಗಿನ ನಾನು (ಕಾವ್ಯ) - ಸಿದ್ಧರಾಮ ಹಿರೇಮಠ ೨೦-೦೦

೭. ಕನ್ನಡ ಲೇಖಕರ ವಿಳಾಸಗಳು : (ತೃತೀಯ ಪರಿಷ್ಕೃತ ಆವೃತ್ತಿ)
ಸುಮಾರು ೪೦೦೦ ಲೇಖಕರ ಅಂಚೆ ವಿಳಾಸಗಳು) ೭೫-೦೦

೮. ಕೋಗಿಲೆಗೆ ಕಲಿಸಲಾರೆ (ಕಾವ್ಯ)-ಮೀನಾ ಸದಾಶಿವ ೨೦-೦೦

೯. ವಿಳಾಸ : ಸಂಕ್ರಮಣ ಪ್ರಕಾಶನ
ನಂ. ೧೮೯೪/೧, ೩೧ನೇ ಕ್ರಾಸ್, ೨ನೇ ಸ್ಟೇಜ್,
ಬನಶಂಕರಿ, ಬೆಂಗಳೂರು ೫೬೦೦೭೦